ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯಗಳಲ್ಲಿ ಸೀತೆ

(ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ)

ಸಂಶೋಧಕರು

ಉಷಾ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳಗಂಗೋತ್ರಿ

ಮಾರ್ಗದರ್ಶಕರು

ಡಾ. ನಾಗಪ್ಪ ಗೌಡ ಆರ್.

ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ– 574199

2024

ಪೀಠಿಕೆ

'ವಾಲ್ಮೀಕಿ ವಿರಚಿತ ರಾಮಾಯಣ' ಎನ್ನುವುದು ಭಾರತೀಯ ಜನ ಜೀವನದಲ್ಲಿ ಬೆರೆತು ಹೋದ ಸಂಸ್ಕೃತಿ ದರ್ಶನವಾಗಿದೆ. ಭಾರತೀಯ ಧರ್ಮ–ಸಂಸ್ಕೃತಿ–ನಾಗರೀಕತೆಗಳ ಸಮಗ್ರತೆ ನಿಂತಿರುವುದು ರಾಮಾಯಣ ಹಾಗೂ ಮಹಾಭಾರತ ಮಹಾಕಾವ್ಯಗಳ ಆಧಾರದಲ್ಲಿ. ರಾಮಾಯಣದಲ್ಲಿ ಕಾವ್ಯ, ಕಥೆ, ಧರ್ಮ, ಚರಿತ್ರೆ, ಸಂಸ್ಕೃತಿ, ನೀತಿ, ಪಾತ್ರ, ವರ್ಣನೆ, ಲೋಕ ವ್ಯವಹಾರ, ಜೀವನ ವಿಧಾನ ಮುಂತಾದವುಗಳನ್ನು ಒಳಗೊಂಡ ಮಹೋನ್ನತವಾದ ಕಾವ್ಯ. ಭಾರತೀಯ ಜನ ಜೀವನದಲ್ಲಿ ಮೌಲ್ಯಾಧಾರಿತ ಮಹಾಕಾವ್ಯವಾದ ರಾಮಾಯಣ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದ್ದು ಮಾತ್ರವಲ್ಲ, ಇಂದಿಗೂ ಹೊಸ ಹೊಸ ಮಾರ್ಪಾಡುಗಳ ಮೂಲಕ ಅಧ್ಯಯನಕ್ಕೆ ಯೋಗ್ಯವೆನಿಸಿದೆ ಹಾಗೂ ಅಧ್ಯಯನಕ್ಕೆ ಒಳಗಾಗುತ್ತಲೇ ಇದೆ. ಈ ಮಹಾಕಾವ್ಯದ ಸಾರವತ್ತಾದ ಜೀವನ ಪರಿಕಲ್ಪನೆಯೇ ಇಂದಿನ ಮನುಕುಲದ ಅನೇಕರ ಬದುಕಿಗೆ ಮಹೋನ್ನತ ಪ್ರೇರಣೆಯಾಗಿದೆ.

ಜಗತ್ತು ಬೆಳೆದಂತೆ, ಕಾಲಚಕ್ರ ಉರುಳಿದಂತೆ, ತಲೆಮಾರುಗಳು ಕಳೆದಂತೆ, ರಾಮಾಯಣದ ಟಿಸಿಲುಗಳು ಬೆಳೆಯುತ್ತಾ ಹೋದವು. ಏಕವಾದ ಮಹಾಕಾವ್ಯ ರಾಮಾಯಣ ಭಿನ್ನಭಿನ್ನ ಸ್ವರೂಪಗಳಲ್ಲಿ, ಬೇರೆಬೇರೆ ಸಂಸ್ಕೃತಿಗೆ ತಕ್ಕಂತೆ ಹಲವಾರು ರಾಮಾಯಣಗಳು, ಬೇರೆ ಬೇರೆ ಭಾಷೆಗಳಲ್ಲಿ ರಚನೆಯಾಗುತ್ತಾ ಬಂದವು. ಹೀಗೆ ರಚನೆಯಾದ ರಾಮಾಯಣಗಳಲ್ಲಿ ಪಾತ್ರ ವೈಶಿಷ್ಟ್ಯತೆಯ ಸ್ವರೂಪ, ವೈವಿಧ್ಯತೆಯ ಕಥಾ ಹಂದರದಲ್ಲಿಯ ವೈಶಿಷ್ಟ್ಯತೆಯ ಭಿನ್ನತೆಗಳು ಕಂಡು ಬಂದವು. ಮೂಲ ರಾಮಾಯಣ ಪರಂಪರೆಗೂ, ರಾಮಾಯಣದ ವಿಕಾಸದ ಹಂತಗಳಲ್ಲಿ ಪಾತ್ರ–ಚಿತ್ರಣಗಳಲ್ಲಿಯೂ ಅನೇಕ ವ್ಯತ್ಯಾಸಗಳು ಕಂಡುಬಂದವು.

ರಾಮಾಯಣ ಕಾವ್ಯ ಮೂಲದಲ್ಲಿ ಜನಪದೀಯ ಹಿನ್ನೆಲೆಗಳ ಸೊಗಡಿದ್ದರೂ, ಅದು ರಚನೆಯ ಚೌಕಟ್ಟನ್ನು ಪಡೆದಿರುವುದು ಸಂಸ್ಕೃತ ಛಂದಸ್ಸಿನಲ್ಲಿ. ಆ ಕಾವ್ಯದ ಹಿಂದಿನ ನಂಬಿಕೆ, ಆಚರಣೆ, ಜೀವನ ವಿಧಾನ, ಸಂಪ್ರದಾಯ, ಸಂಸ್ಕೃತಿ ಮುಂತಾದವುಗಳು ಜನಪದೀಯ ಪ್ರಭಾವವನ್ನು ಪಡೆದಿರುವುದನ್ನು ಕಾಣುತ್ತೇವೆ. ರಾಮಾಯಣವನ್ನು ಅಧ್ಯಯನ ಮಾಡಿದಾಗ ಬಹುಮುಖ್ಯವಾಗಿ ಕಂಡು ಬರುವ ಅಂಶವೆಂದರೆ, ಮಾನವ ಬದುಕಿನೊಂದಿಗೆ ಹಾಸು ಹೊಕ್ಕಾಗಿರುವ ಜೀವನ ಮೌಲ್ಯಗಳ ಪ್ರತಿಪಾದನೆ. ಭಾರತೀಯ ಜೀವನ ಪರಂಪರೆಯ ಹಿನ್ನೆಲೆಯಲ್ಲಿ ವಾಲ್ಮೀಕಿ ರಾಮಾಯಣವನ್ನು ಹೊರತುಪಡಿಸಿ, ನೂರಾರು ರಾಮಾಯಣಗಳು ಸಾವಿರಾರು ವರ್ಷಗಳ ಕಾಲಾವಧಿಯಲ್ಲಿ ರಚನೆಯಾಗಿವೆ. ಕಾಲಘಟ್ಟದ ಅಡಿಯಲ್ಲಿ ರಾಮಾಯಣಗಳು

ರಚನೆಯಾದಂತೆ, ಅವುಗಳ ಪಾತ್ರಗಳಲ್ಲಿ ನಾಯಕತ್ವದ ಬದಲಾವಣೆಗಳು ನಡೆದವು. ಈ ನಾಯಕತ್ವದ ಬದಲಾವಣೆಗಳಿಂದ ರಾಮಾಯಣ ಕಾವ್ಯಗಳ ಆಳ ಅಗಲಗಳು ವಿಸ್ತರಿಸುತ್ತಾ ಸಾಗಿವೆ. ಅಲ್ಲದೆ ಬಹು ಜನತೆಯ ಜೀವನದ ಅರ್ಥಗಳನ್ನು ವಿವರಿಸುತ್ತಾ ಸಾಗಿರುವುದು ಬಹು ಮುಖ್ಯವಾದದ್ದು. ಈ ಕಾರಣಗಳಿಂದಾಗಿ ನವೀನವಾದ ರಾಮಾಯಣಗಳ ರಚನೆಯ ಸಂದರ್ಭದಲ್ಲಿ ಕೆಲವು ಪಾತ್ರಗಳು, ವಿಭಿನ್ನವಾದ ಪ್ರಾಮುಖ್ಯತೆಗಳನ್ನು ಸಾಧಿಸುತ್ತಾ ಬಂದವು. ಅಲ್ಲದೆ ಕೆಲವು ಪಾತ್ರಗಳು ಪ್ರಧಾನವಾಗಿ, ಕೆಲವು ಪಾತ್ರಗಳು ಗೌಣವಾಗಿಯೂ ರಚನೆಯಾಗಿರುವುದು ರಾಮಾಯಣಗಳ ಅಧ್ಯಯನದಿಂದ ವಿಶೇಷವಾಗಿ ಕಂಡು ಬರುತ್ತದೆ. ಮೂಲ ರಾಮಾಯಣದ ಪಾತ್ರಗಳಿಗಿಂತ ಇವು ಹೆಚ್ಚು ವೈಶಿಷ್ಟ್ಯತೆಗಳನ್ನು ಸಾಧಿಸಿಕೊಂಡಿದೆ. ನಮ್ಮ ಭಾರತೀಯ ಪರಂಪರೆಯಲ್ಲಿ ಆದಿಕಾವ್ಯ ರಾಮಾಯಣದ ಅಧ್ಯಯನ ಎಲ್ಲಾ ಕಾಲಕ್ಕೂ ಪ್ರಸ್ತುತಾರ್ಹ. ಯಾಕೆಂದರೆ ಭೂಮಿಯ ಮೇಲೆ ಸೃಷ್ಟಿ–ಸ್ಥಿತಿ–ಲಯಗಳ ಹಿನ್ನೆಲೆಯಲ್ಲಿ ಬದುಕುವ ಮನುಷ್ಯ ಜೀವಿಗಳಿಗೆ ಆ ಚಂದ್ರಾರ್ಕವಾದ ಜೀವನ ದರ್ಶನ, ಆಧ್ಯಾತ್ಮಿಕ ಮಾರ್ಗದರ್ಶನ, ಮೌಲ್ಯಗಳನ್ನು ಪ್ರತಿಪಾದಿಸುತ್ತಲೇ ಇದೆ.

ರಾಮಾಯಣ ನಿರೂಪಣೆ ಶಕ್ತಿಯುತ ಕಾವ್ಯವಾಗಿ ರಚನೆಯಾಗಿದ್ದು, ಈ ರಾಮಾಯಣದ ಮೂಲಕ ಸಾವಿರಾರು ವರ್ಷಗಳ ಹಿಂದಿನ, ಇನ್ನೂ ಮುಂಬರುವ ಲಕ್ಷಾಂತರ ವರ್ಷಗಳ ಜನರ ಬದುಕಿಗೆ ಪ್ರಜ್ಞಾವಂತ ಪ್ರಗತಿಯನ್ನು, ಪ್ರಜ್ಞೆಯ ಜೀವನವನ್ನು ಕಟ್ಟಿ ಕೊಡುವುದು ರಾಮಾಯಣದ ಮಹತ್ವವನ್ನು ಎತ್ತಿ ಸಾರುತ್ತದೆ.

ವಾಲ್ಮೀಕಿ ರಾಮಾಯಣವನ್ನು ಅನುಸರಿಸಿ ಹಲವಾರು ರಾಮಾಯಣಗಳು ರಚನೆಯಾದರೂ, ಕಥಾ ವಸ್ತು ಒಂದೇ ಆದರೂ ಒಂದು ಕೃತಿ ಮತ್ತೊಂದರಂತಿಲ್ಲ. ವಾಲ್ಮೀಕಿ ರಾಮಾಯಣದ ನಂತರ ಬಂದ ಕೃತಿಗಳು ಮೂಲಕ್ಕಿಂತ ಭಿನ್ನವಾಗಿದ್ದು, ತನ್ನದೇ ಆದ ಹೊಸ ವಿಚಾರ, ಆಲೋಚನೆ, ದೃಷ್ಟಿಕೋನಗಳನ್ನು ಮೈಗೂಡಿಸಿಕೊಂಡಿವೆ. ಹಾಗೆಯೇ ಕನ್ನಡದ ಉತ್ತರ ರಾಮಾಯಣಗಳನ್ನು ರಚಿಸಿದ ಕವಿಗಳು ತಮ್ಮ ತಮ್ಮ ಕಾಲ, ಧರ್ಮ, ಮನೋಧರ್ಮಗಳಿಗೆ ಅನುಗುಣವಾಗಿ ಸೀತಾ ಪಾತ್ರವನ್ನು ಹೇಗೆ ಚಿತ್ರಿಸಿದ್ದಾರೆ? ಎಂಬುದನ್ನು ವಿಶ್ಲೇಷಣೆ ನಡೆಸಲಾಗಿದೆ. ಒಂದೇ ವಸ್ತುವನ್ನು ಒಳಗೊಂಡಿದ್ದರೂ, ಆಯಾಯ ಕವಿಗಳ ಕೃತಿಗಳು ತಮ್ಮ ತಮ್ಮ ದೃಷ್ಟಿಕೋನ, ಉದ್ದೇಶಗಳನ್ನೊಳಗೊಂಡು ರಚಿತವಾಗಿವೆ. ಕಥೆಯ ವಿನ್ಯಾಸ ಒಂದೇ ಆದರೂ ಪಾತ್ರ ಚಿತ್ರಣ, ಸನ್ನಿವೇಶ ರಚನೆ, ಕಥಾ ನಿರೂಪಣೆ ಮೊದಲಾದ ಅಂಶಗಳಲ್ಲಿ ವಿಶಿಷ್ಟತೆ ಹಾಗೂ ಹೊಸತನಗಳಿವೆ. ಕಥಾ ನಿರೂಪಣೆ ಮಾತ್ರವಲ್ಲ, ಪಾತ್ರ ಚಿತ್ರಣಗಳಲ್ಲಿಯೂ ಮೂಲ

ಕಥೆಯನ್ನು ಪುನರ್ರಚಿಸಲಾಗಿದೆ. ಹೀಗೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣದ ಕಥೆ ನಿತ್ಯ ನೂತನ. ಕಾಲ ಕಳೆದಂತೆ ರಾಮಾಯಣದ ಕಥೆ ವಿಶಿಷ್ಟವಾಗಿ ಮೂಡಿ ಬಂದಿದೆ. ರಾಮಾಯಣಗಳ ರಚನೆಯ ವಿಕಾಸದಲ್ಲಿ ಸಂಸ್ಕೃತ ಮತ್ತು ಇತರೆ ಭಾಷೆಗಳಲ್ಲಿ ರಚನೆಯಾದ ಉತ್ತರ ರಾಮಾಯಣ ಪರಂಪರೆ ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಮೂಲ ಉತ್ತರ ರಾಮಾಯಣದ ಸನ್ನಿವೇಶಗಳ ಹಿನ್ನೆಲೆಯನ್ನು ಪಡೆದುಕೊಂಡು ಕನ್ನಡ ಉತ್ತರ ರಾಮಾಯಣಗಳು ರಚನೆಯಾದರೂ, ವೈಶಿಷ್ಟ್ಯ, ವೈವಿಧ್ಯತೆಯ ದೃಷ್ಟಿಕೋನಗಳಿಂದ ಕನ್ನಡ ಉತ್ತರ ರಾಮಾಯಣಗಳು ಹೆಚ್ಚು ಮಹತ್ವದ್ದಾಗಿವೆ.

ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ, ಸೋಸಲೆ ಅಯ್ಯಶಾಸ್ತ್ರಿ– ಕನ್ನಡ ಉತ್ತರ ರಾಮಾಯಣ ಕವಿಗಳಾದ ಇವರು ಕನ್ನಡ ಸಾಹಿತ್ಯದಲ್ಲಿ ಅಲಕ್ಷಿತಕ್ಕೆ ಒಳಪಟ್ಟ ಕವಿಗಳು. ರಾಮಾಯಣದ ಕಥೆಯಾದರೂ, ಕನ್ನಡ ವಾಙ್ಮಯದಲ್ಲಿ ಉತ್ತರ ರಾಮಾಯಣ ಕಾವ್ಯಗಳು ಚರ್ಚೆಗೆ ಒಳಪಟ್ಟಿಲ್ಲ. ಇವರು ಸಂಸ್ಕೃತದ ಮೂಲ ರಾಮಾಯಣದ ವಸ್ತುವನ್ನು ಹಾಗೂ ಪದ್ಮಪುರಾಣದ ವಸ್ತುವನ್ನು ಅನುಸರಿಸಿ, ಕನ್ನಡದಲ್ಲಿ ಉತ್ತರ ರಾಮಾಯಣ ಕೃತಿಯನ್ನು ಸಮರ್ಥವಾಗಿ ರಚಿಸಿದರೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿಲ್ಲ. ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ– ವೈದಿಕ ಪರಂಪರೆಯ ಭಕ್ತಿ ನೆಲೆಯಲ್ಲಿ ಕಾವ್ಯವನ್ನು ರಚಿಸಿದರೆ, ಸೋಸಲೆ ಅಯ್ಯಶಾಸ್ತ್ರಿಯವರು ಪೌರಾಣಿಕ ಪರಂಪರೆಯ ರಾಜಾಶ್ರಯದೊಂದಿಗೆ ಕಾವ್ಯ ರಚಿಸಿದರು. ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ ಕವಿಗಳಿಗೆ ವೈದಿಕ ಸಂಪ್ರದಾಯದ ರಾಮಾಯಣ ಮುಖ್ಯವಾದರೆ, ಸೋಸಲೆ ಅಯ್ಯಶಾಸ್ತ್ರಿ ಅವರಿಗೆ ಪದ್ಮಪುರಾಣವೇ ಮುಖ್ಯವಾಗುತ್ತದೆ. ಮೊದಲ ನಾಲ್ಕು ಕವಿಗಳಲ್ಲಿ ದೈವ ಭಕ್ತಿಯಾದರೆ, ಒಬ್ಬ ಕವಿಯದ್ದು ರಾಜ ಭಕ್ತಿ. ಹೀಗೆ ಉತ್ತರ ರಾಮಾಯಣದಲ್ಲಿ ಕೃತಿ ರಚಿಸಿದ ಅವರ ಉದ್ದೇಶಗಳು, ಕಾವ್ಯ ಧೋರಣೆಗಳು, ಮೂಲ ಕಥಾ ವಸ್ತುವನ್ನಿಟ್ಟು ರಚಿಸಿದ ಈ ಕಾವ್ಯಗಳು ರಚನೆ ಆಗಿದ್ದರೂ, ತಮ್ಮ ತಮ್ಮ ನೆಲೆಗಳ ಮೂಲಕ ಕಾವ್ಯಗಳಲ್ಲಿ ಸನ್ನಿವೇಶ, ಪಾತ್ರ ಚಿತ್ರಣ, ಸಮಕಾಲೀನ, ಸಾಮಾಜಿಕ ಪರಿಸರವನ್ನು, ಸಾಂಸ್ಕೃತಿಕ ಜೀವನವನ್ನು ನಿರೂಪಿಸಿದ್ದಾರೆ. ಈ ನಿರೂಪಣೆಯೊಂದಿಗೆ ಕವಿಗಳ ಧರ್ಮ, ಕಾವ್ಯ ಧರ್ಮ, ಸಾಹಿತ್ಯಿಕ ಮಾರ್ಗ, ಭಾಷೆ ಒಂದೇ ಆಗಿದ್ದರೂ ಭಾಮಿನಿ, ವಾರ್ಧಕ, ರಗಳೆ ಛಂದಸ್ಸಿನ ಬಳಕೆಯ ವಿಚಾರಗಳು ಭಿನ್ನವಾಗಿದೆ. ಉತ್ತರ ರಾಮಾಯಣದ ಕವಿಗಳು ವಸ್ತುವನ್ನು ಹೇಗೆ ವಿನ್ಯಾಸಗೊಳಿಸಿದರು?, ಆ ಕಾವ್ಯಗಳ ಉದ್ದೇಶಗಳೇನು?, ಅಂತಹ ಉದ್ದೇಶಗಳಿಗೆ ಪ್ರೇರಕ ಶಕ್ತಿಗಳಾಗಿದ್ದ ಸಂಗತಿಗಳಾವುವು? ಎಂಬ

ಈ ತರಹದ ಪ್ರಶ್ನೆಗಳ ನಡುವಿನ ಅಂತರ ಸಂಬಂಧಗಳನ್ನು ತಾತ್ವಿಕವಾಗಿ ವಿಶ್ಲೇಷಿಸಿಕೊಳ್ಳಬೇಕಾಗಿದೆ.

ಸಾಹಿತ್ಯವೆಂದರೆ ನಿರಂತರವಾದದ್ದು. ಇದರ ಅಂತರಾತ್ಮ ಅತ್ಯಂತ ವ್ಯಾಪಕತೆವುಳ್ಳದ್ದು. ಇದು ಮನುಷ್ಯ ಜೀವನದ ಎಲ್ಲಾ ಅಂತರಂಗ–ಬಹಿರಂಗದ ಸಂಬಂಧಗಳನ್ನು ಒಳಗೊಂಡಿರುವಂತದ್ದಾಗಿದೆ. ಸಾಹಿತ್ಯವು ಮನುಷ್ಯನ ರಸಾನುಭವದ ಅಭಿವ್ಯಕ್ತಿಯಾಗಿ ರೂಪುಗೊಂಡಿದೆ. ಸಾಹಿತ್ಯ 'ನಿರಂತರ....., ನಿತ್ಯ ನೂತನ......., ನವ ನವೀನ.....'. ತಲೆಮಾರಿನಿಂದ ತಲೆಮಾರಿಗೆ ಭವಿಷ್ಯದ ದಾರಿಯಾಗಿಯೂ ಕಾಣಿಕೆಯನ್ನು ಮುಂಬರುವ ಜನಾಂಗದವರಿಗೆ ನೀಡುತ್ತಾ ಬಂದಿದೆ. ಅನುಭವದ ಎಲ್ಲಾ ಸತ್ವಗಳನ್ನು ಅನುಭವಿಸುತ್ತಾ ನಡೆಯುವ ಹೊಸ ತಲೆಮಾರು ಭೂತಕಾಲದ ಅನುಭವಗಳನ್ನು, ಬಾಳಿನ ಎಡರು–ತೊಡರುಗಳನ್ನು ಸಂವಾದಗೊಳಿಸುತ್ತಾ, ಭವಿಷ್ಯತ್‌ನಲ್ಲಿ ತನ್ನ ದಾರಿಯನ್ನು ಕಂಡುಕೊಳ್ಳುತ್ತದೆ. ಜಗತ್ತಿನ ಮಾನವೀಯ ನೆಲೆಗಳಿಗೆ ಸಾಹಿತ್ಯವೇ ವೇದಿಕೆಯಾಗಿದೆ. ಸಾಹಿತ್ಯದ ಚರ್ಚೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ ಹಾಗೂ ಅದರ ಜೊತೆಗೆ ಬದಲಾಗುತ್ತಾ ಇರುತ್ತದೆ. ಅಲ್ಲದೆ ಮುಂದುವರಿದು ಸಮುದಾಯದ ಒಳಿತಿಗಾಗಿ ತನ್ನ ವೈರುಧ್ಯದ ನಡುವೆಯೂ ಅದಕ್ಕೆ ಪ್ರತಿಕ್ರಿಯಿಸುತ್ತಲೇ, ತನ್ನ ಜ್ಞಾನವನ್ನು ಮನುಕುಲಕ್ಕೆ ಮುಖಾಮುಖಿಯಾಗಿ ಒಡ್ಡಿಕೊಳ್ಳುತ್ತದೆ. ಆ ಮೂಲಕ ಹೊಸ ಸಂವೇದನೆಗಳನ್ನು ರೂಪಿಸಲು ಪ್ರಯತ್ನಿಸುತ್ತದೆ. ಮಾನವ ಕುಲದ ಓಟದ ಭರದಲ್ಲಿ ಇದು ಸಹಜವಾದುದಾಗಿದೆ.

ಯಾವುದೇ ಸಂಸ್ಕೃತಿ ಅಲ್ಲಿನ ಜನಜೀವನದ ಬದುಕಿನ ವಿನ್ಯಾಸದ ಮೇಲೆ ರೂಪುಗೊಳ್ಳುವುದು. ಬದುಕಿನ ವಿದ್ಯಾಮಾನಗಳು ಕಾಲದ ಒತ್ತಡಕ್ಕೆ ಸಿಕ್ಕಿ ಬದಲಾದ ಹಾಗೆ ಅವರ ಅಭಿವ್ಯಕ್ತಿಯು ಬದಲಾಗುತ್ತಾ ಹೋಗುತ್ತದೆ. ಹೀಗೆ ಸಾಹಿತ್ಯ ಸೃಷ್ಟಿಯಾಗುವುದು. ಆಧುನಿಕ ಸಮಾಜವಾಗಿ ರೂಪಗೊಳ್ಳುವ ಹಂತದಲ್ಲಿ ಸಮುದಾಯಗಳು ಆದರ್ಶ ಸಾಹಿತ್ಯ ಕೃತಿಗಳನ್ನು ಸೃಷ್ಟಿಸಿಕೊಳ್ಳುತ್ತವೆ ಅಥವಾ ಆದರ್ಶಗಳನ್ನಾಗಿ ರೂಪಿಸಿಕೊಳ್ಳುತ್ತವೆ. ಇವುಗಳ ಹಿನ್ನೆಲೆಯಲ್ಲಿ ಸಮಾಜವು ಬದಲಾಗುತ್ತಾ ಹೋಗುತ್ತದೆ. ಹೀಗೆ ಮಹಾಕಾವ್ಯ ಪರಂಪರೆ ಹುಟ್ಟಿದ್ದು ಎನ್ನಬಹುದು. ಎಲ್ಲಾ ಮಹಾಕಾವ್ಯಗಳು ಅತ್ಯಂತ ಪ್ರಮಾಣ ಬದ್ಧವಾಗಿ ನಮಗೆ ಪ್ರೇರಕ ಶಕ್ತಿಗಳಾಗಿವೆ.

ಒಂದು ಸಮುದಾಯದ ಜೀವನ ಆಚಾರ–ವಿಚಾರ ಸಂಸ್ಕೃತಿ, ಇತಿಹಾಸಗಳ ಪ್ರತೀಕವಾಗಿ ಸಮುದಾಯದ ಬದುಕಿಗೆ ಮಾರ್ಗದರ್ಶಕವಾಗಿ, ಆದರ್ಶದ ಮಾದರಿಗಳನ್ನು ಹುಟ್ಟು ಹಾಕುತ್ತಲೇ ಇರುವುದನ್ನು ಮಹಾಕಾವ್ಯ ಎಂದು ಕರೆಯಬಹುದು. ಹಾಗಾಗಿಯೇ ಪೂರ್ವದಲ್ಲಿ

ಅವು ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು, ಲಿಖಿತವಾಗಿ ಸಾಗಿ ಬಂದ ಈ ಮಹಾಕಾವ್ಯಗಳು ಬರಹದ ರೂಪದಲ್ಲಿ ನಮಗೆ ದೊರಕಿವೆ. ಇವು ಕಾಲದ ಮೌಲ್ಯಗಳ ಒತ್ತಡಕ್ಕೆ ಒಳಗಾಗುತ್ತಲೇ, ಆಯಾ ಸಮುದಾಯಗಳ ಅಂತಃಸತ್ವವನ್ನು ಪ್ರತಿಬಿಂಬಿಸುತ್ತಾ ಹೋಗುತ್ತವೆ. ಭಾರತದ ಜನ ಜೀವನದಲ್ಲಿ ಮೌಲ್ಯಾಧಾರಿತ ಮಹಾಕಾವ್ಯಗಳಾದ ರಾಮಾಯಣ–ಮಹಾಭಾರತಗಳು ಕೇವಲ ಭಾರತ ಮಾತ್ರವಲ್ಲದೆ, ದೇಶದಾದ್ಯಂತ ಪ್ರಚಲಿತದಲ್ಲಿರುವ ಈ ಕಾವ್ಯಗಳು ಆಯಾ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಸಮುದಾಯಗಳಿಗೆ ಭಿನ್ನ–ಭಿನ್ನವಾಗಿ ರೂಪುಗೊಂಡಿವೆ. ಅಲ್ಲಿಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮುಂತಾದ ಅಂಶಗಳನ್ನು ಒಳಗೊಂಡಿವೆ. ಅಷ್ಟೇ ಅಲ್ಲದೆ ಬದುಕು ಕಟ್ಟಿಕೊಳ್ಳುತ್ತಿರುವ ಸಮುದಾಯದ ಕನಸುಗಳನ್ನು ಅವು ಪೂರೈಸುತ್ತವೆ. ಹಾಗಾಗಿ ಅವು ಸಮುದಾಯದೊಳಗೆ ಭಿನ್ನವಿಲ್ಲದೆ ಬೆರೆತು ಹೋಗಿವೆ.

ರಾಮಾಯಣ–ಮಹಾಭಾರತಗಳೇ ಭಾರತದ ಮೊದಲ ದಾಖಲೆಯಲ್ಲ. ಅವು ಹುಟ್ಟುವುದಕ್ಕಿಂತ ಪೂರ್ವದಲ್ಲಿ ಮೌಖಿಕ ಮತ್ತು ಲಿಖಿತ ರೂಪದಲ್ಲಿದ್ದ ಸಾಹಿತ್ಯವಿತ್ತು. ಆದರೆ ಅವು ವ್ಯಕ್ತಿಗಳ ಉನ್ನತಿಗೆ ಪ್ರಯತ್ನಿಸದೆ, ಜನ ಸಾಮಾನ್ಯರಿಂದ ದೂರ ನಿಂತಿದ್ದವು ಹಾಗೂ ವೈದಿಕರ ಹುನ್ನಾರಕ್ಕೆ ಒಳಗಾಗಿ ಬಂಧಿಸಲ್ಪಟ್ಟಿದ್ದವು. ಜನ ಸಾಮಾನ್ಯರ ವಿಕಾಸ ಶೀಲ ದೃಷ್ಟಿಯಿಂದ ರಾಮಾಯಣ–ಮಹಾಭಾರತಗಳ ಆಗಮನ ಮಹತ್ವವಾಗಿದ್ದು, ಜನರೆಲ್ಲಾ ಆರಾಧಿಸುವ, ಪಾಲಿಸುವ, ನಾಯಕರ ಮಹಿಮೆಯನ್ನೊಳಗೊಂಡ ಕಥೆಗಳನ್ನು ಆಧರಿಸಿ ಮರು ರಚನೆ ಆರಂಭವಾಯಿತು. ಆಗ ಹುಟ್ಟಿರುವುದೇ ರಾಮಾಯಣ–ಮಹಾಭಾರತ ಎನ್ನಬಹುದು. ಪ್ರಭುತ್ವದ ಮುಖಾಂತರ ವೈದಿಕತ್ವದ ಪ್ರಚಾರವನ್ನು ಹಂತ ಹಂತವಾಗಿ ಈ ಕಥನಗಳಲ್ಲಿ ತರಲಾಯಿತು. ಅನಿವಾರ್ಯವಾಗಿ ಜನ ಇದನ್ನು ಓದತೊಡಗಿದರು, ಪಾಲಿಸತೊಡಗಿದರು, ಆಚರಿಸತೊಡಗಿದರು.

ಜನಮಾನಸದಲ್ಲಿ ಉಳಿದುಕೊಂಡಿರುವ ನಾಯಕರ ಸಾಹಸ ಗಾಥೆಗಳನ್ನು ಎತ್ತಿಕೊಂಡು ಅವರಿಗೆ ಪುರಾಣದ ರೂಪ ಕೊಟ್ಟು, ವೈಭವೀಕರಿಸಿ ಕಥನಗಳನ್ನು ಕಟ್ಟಿ ಲಿಖಿತ ರೂಪಕ್ಕೆ ಪರಿವರ್ತಿಸಲಾಯಿತು. ಆದರೂ ಆ ಕಾಲದಲ್ಲಿ ಲಿಖಿತವಾಗದೆ, ಮೌಖಿಕವಾಗಿಯೂ ಕೂಡ ಈ ಕಥೆಗಳು ಚಾಲ್ತಿಯಲ್ಲಿದ್ದವು. ಈಗಲೂ ಸ್ಥಳೀಯ ಅಂಶಗಳನ್ನು, ಆಚರಣೆಗಳನ್ನು ಒಳಗೊಂಡ ಮೌಖಿಕ ಕಾವ್ಯಗಳ ಎದುರಿಗೆ ರಾಷ್ಟ್ರೀಯತೆಯ ಪ್ರತಿಬಿಂಬ ಎಂಬಂತೆ ರಾಮಾಯಣ–ಮಹಾಭಾರತಗಳು ನಿರ್ಮಾಣವಾಗ ತೊಡಗಿದವು. ಮಹಾಭಾರತಕ್ಕಿಂತ ರಾಮಾಯಣವು ಈ

ಸಂದರ್ಭದಲ್ಲಿ ಹಿರಿದಾದ ಪಾತ್ರವಹಿಸಿತು. ಕಾಲ ಕಳೆದಂತೆ ಹೊಸ ಹೊಸ ಮಾರ್ಪಾಡುಗಳ ಮೂಲಕ ಅಧ್ಯಯನಕ್ಕೆ ಒಳಗಾಗುತ್ತಲೇ, ಮುಂದೆ ಭಾರತೀಯ ಪರಂಪರೆಯಲ್ಲಿ ಆದಿಕಾವ್ಯವಾದ ರಾಮಾಯಣ ಎಲ್ಲಾ ಕಾಲಕ್ಕೂ ಪ್ರಸ್ತುತ ಎನ್ನುವ ಹಾಗೆ ನೆಲೆಯಾಯಿತು.

ರಾಮಾಯಣ ಹೇಗೆ ಬರೆಯಲ್ಪಟ್ಟಿತು ಎಂಬುದಕ್ಕೆ ಕಥೆಗಳಿವೆ. ಈಗಾಗಲೇ ಜನ ಮಾನಸದಲ್ಲಿ ಪ್ರಚಲಿತದಲ್ಲಿದ್ದ ರಾಮಾಯಣದ ಭಿನ್ನ ಪಾಠಗಳನ್ನು ಕೇಳಿದ್ದ ಲೋಕ ಸಂಚಾರಿಯಾದ ನಾರದನು ಒಂದು ದಿನ ವಾಲ್ಮೀಕಿ ಆಶ್ರಮಕ್ಕೆ ಬಂದಾಗ, ವಾಲ್ಮೀಕಿಯು "ಈ ಲೋಕದಲ್ಲಿ ಇಂದು ಗುಣವಂತನು, ವೀರವಂತನು, ಧರ್ಮಜ್ಞನು, ಕೃತಜ್ಞನು, ಇಂದ್ರಿಯ ನಿಗ್ರಹ ಉಳ್ಳವನು, ಯುದ್ಧದಲ್ಲಿ ದೇವತೆಗಳನ್ನು ಜಯಿಸಬಲ್ಲಂಥವನು ಆದಂತಹ ಯಾರಾದರೂ ಒಬ್ಬ ವ್ಯಕ್ತಿ ಇದ್ದಾನೆಯೇ? ಎಂದು ಕೇಳುತ್ತಾನೆ". (ಬಾಲಚಂದ್ರ ಜಯಶೆಟ್ಟಿ, 2003, ಪುಟ 12) ಆಗ ನಾರದನು ಸಾಕಷ್ಟು ಕಾಲಾವಧಿಯನ್ನು ತೆಗೆದುಕೊಂಡು, ರಾಮನೊಬ್ಬನೇ ಇದಕ್ಕೆ ಪರಿಪೂರ್ಣ ವ್ಯಕ್ತಿಯ ಲಕ್ಷಣವುಳ್ಳವನು ಎಂದು ವಾಲ್ಮೀಕಿಗೆ ಈ ಕತೆಯನ್ನು ಹೇಳಿ, ರಸವತ್ತಾಗಿ ಬರೆಯುವಂತೆ ಸೂಚನೆ ಕೊಟ್ಟಾಗ, ಅದರಂತೆ ವಾಲ್ಮೀಕಿ ರಾಮಾಯಣವನ್ನು ಬರೆದು, ಮುಂದೆ ತಮ್ಮ ಆಶ್ರಮದಲ್ಲಿ ಬೆಳೆದ ಕುಶ–ಲವರಿಗೆ ಅದನ್ನು ಹಾಡಿನ ರೂಪದಲ್ಲಿ ಕಲಿಸಿದರು. ಆ ಮಕ್ಕಳಿಬ್ಬರು ರಾಮನ ಮುಂದೆ ಹಾಡಿದರು. ಇದು ಬಹುತೇಕ ಕೃತಿಗಳಲ್ಲಿ ಕಂಡು ಬರುವ ಸ್ಥೂಲ ನೋಟವಾಗಿದೆ.

ಆದರೆ ಇದನ್ನು ನಿರಾಕರಿಸುವ ಅಂಬೇಡ್ಕರ್‌ರವರು "ರಾಮನ ಹುಟ್ಟು ಒಂದು ಪವಾಡವೆಂಬಂತೆ ಹೇಳಲಾಗಿದೆ. ಅವನು ಶೃಂಗಮುನಿಯ ಪಿಂಡದಿಂದ ಕೌಸಲ್ಯೆಯ ಗರ್ಭದಲ್ಲಿ ಜನ್ಮ ತಾಳಿದನೆಂದು ಬರೆಯಲಾಗಿದೆ. ಕೌಸಲ್ಯೆ ಮತ್ತು ಶೃಂಗಮುನಿಯು ಪತಿ–ಪತ್ನಿಯರಂತಲ್ಲದಿದ್ದರೂ, ಸಂತಾನಕ್ಕಾಗಿ ಒಂದು ಗೂಡಿದವರು ಎಂಬ ಸತ್ಯವನ್ನು ಮರೆ ಮಾಚಲು ಹೆಣೆದಿರುವ ಕಟ್ಟು ಕಥೆಯಿದು. ಅದೇನೇ ಇರಲಿ ರಾಮನ ಹುಟ್ಟಿನ ಮೂಲ ಕಳಂಕಕಾರಿ ಎಂದು ಒಪ್ಪಲಾಗದಿದ್ದರೂ ಸಹಜವಾದ ರೀತಿಯಲ್ಲಂತೂ ಅಲ್ಲವೇ ಅಲ್ಲ." (ಮಂಜುನಾಥ ಬೇವಿನಕಟ್ಟಿ, 2008, ಪುಟ 103) ಹಲವು ಪುರಾಣಗಳಲ್ಲಿ ನಾಯಕರ ಹುಟ್ಟನ್ನು ದೈವೀಕರಣಗೊಳಿಸಿ, ಅವರನ್ನು ಮನುಷ್ಯರಿಗಿಂತ ಮೇಲ್ಮಟ್ಟದಲ್ಲಿ ನಿಲ್ಲಿಸುವ ಪ್ರಯತ್ನವಾಗಿದೆ.

ಅವತಾರ ಪುರುಷರೆಲ್ಲಾ ಮೇಲಿನವರು, ಎತ್ತರದ ಸ್ತರದವರು, ಲೋಕದ ಉದ್ಧಾರಕ್ಕಾಗಿ ಕೆಳಗಿಳಿದು ಬಂದವರು ಎಂಬುದೇ ಭಾರತೀಯರ ಕಲ್ಪನೆ. ಅರವಿಂದರ ದೃಷ್ಟಿಯಲ್ಲಿ "ಅವತಾರವೆಂದರೆ 'ಅವತರಣ' ಕೆಳಗೆ ಇಳಿಯುವುದು ಎಂದೇ ಅರ್ಥ. ದೇವಲೋಕವನ್ನು

ಮಾನುಷ ಲೋಕವನ್ನು ಪ್ರತ್ಯೇಕಿಸುವ ಗೆರೆಗಿಂತ ಕೆಳಗಿಳಿಯುವುದು. ದೇವರು ಮನುಷ್ಯ ರೂಪಧಾರಣೆ ಮಾಡುವ ಅವರೋಹಣ ಅವತರಣಿಕೆಯೇ ಅವತಾರ. ಜೀವನ ಶಿವನಾಗುವುದಕ್ಕೆ, ವಿಕಾಸವಾಗುವುದಕ್ಕೆ, ಆರೋಹಣ ಮಾಡುವುದಕ್ಕೆ, ಸಹಾಯ ಮಾಡುವುದಕ್ಕಾಗಿ ಆವಿರ್ಭವಿಸುವುದೇ ಅವತಾರ. ಮಾನವನಲ್ಲಿರುವ ಊರ್ಧ್ವ ಮುಖ ಪ್ರವೃತಿಗೆ ಒತ್ತಾಸೆ ಕೊಡುವ ಸಲುವಾಗಿ ಭಗವಂತನ ಅವತಾರವಾಗುತ್ತದೆ. ಈ ದೃಷ್ಟಿಯಿಂದ ಅವತಾರ ಮಾನವರಿಗೆ ದಾರಿಯೂ ಹೌದು, ದ್ವಾರವೂ ಹೌದು! ಆದರೆ, ದಾರಿ ಹಿಡಿದು ಅದರ ದ್ವಾರವಾಗಿ ಮನುಷ್ಯತ್ವದಿಂದ ದೈವತ್ವಕ್ಕೆ ದಾಟಿ ಹೋಗಬೇಕಾಗಿದೆ". (ಸರಸ್ವತಿ ಟಿ.ಎಂ, 2000, ಪುಟ 431) ಹಾಗಾಗಿ ಸಾಮಾನ್ಯ ಮನುಷ್ಯರನ್ನು ಕಾವ್ಯ ನಾಯಕನನ್ನಾಗಿಸಿ, ಜನರ ದೃಷ್ಟಿಕೋನಕ್ಕೆ ಹತ್ತಿರವಾಗಲೆಂದು ತಮ್ಮ ಕಾವ್ಯಗಳಲ್ಲಿ ದೈವತ್ವಕ್ಕೆ ಪ್ರಾಶಸ್ತ್ಯವನ್ನು ಕೊಟ್ಟರು.

ಏನೇ ಆಗಲಿ, ಒಬ್ಬ ವ್ಯಕ್ತಿಯ ಆದರ್ಶದ ರೂಪವನ್ನು ಕಟ್ಟಲು ವಾಲ್ಮೀಕಿ ಪ್ರಯತ್ನಿಸಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಲ್ಲಿ ಬರೆಯಲ್ಪಟ್ಟ ರಾಮಾಯಣ ಈವರೆಗೂ ಹಲವು ಪ್ರಕ್ಷೇಪಗಳಿಗೆ ಒಳಗಾಗುತ್ತಾ, ಹೊಸ ರೂಪಗಳನ್ನು ಪಡೆದುಕೊಂಡಿರುವುದು ಅಸಹಜವೇನಲ್ಲ. "ಮೂಲ ವಾಲ್ಮೀಕಿಯಲ್ಲಿ ಇಲ್ಲದ ಅನೇಕ ರೋಚಕ ಅಂಶಗಳು ಮುಂದಿನ ಆನಂದ ರಾಮಾಯಣ, ಅದ್ಭುತ ರಾಮಾಯಣ, ಆಧ್ಯಾತ್ಮ ರಾಮಾಯಣ, ಯೋಗ ವಶಿಷ್ಟ ರಾಮಾಯಣ, ಶೇಷ ರಾಮಾಯಣ". (ಶ್ರೀ ಗೌರೀಶ್ ಕಾಯ್ಕಿಣಿ, 1986, ಪುಟ 42) ಗಳಲ್ಲಿ ವ್ಯಾಪಕವಾಗಿ ಕಂಡು ಬಂದವು. ವಾಲ್ಮೀಕಿಯನ್ನು ಅನುಸರಿಸಿ ಈ ರಾಮಾಯಣಗಳೆಲ್ಲವೂ ಹುಟ್ಟಿರುವುದು.

ಭಾರತವಲ್ಲದೆ ಪ್ರಪಂಚದ ಬಹುತೇಕ ದೇಶಗಳಲ್ಲಿ ರಾಮಾಯಣ ಕಾವ್ಯವು ಚಾಲ್ತಿಯಲ್ಲಿದೆ. ಅವುಗಳೆಂದರೆ ಶ್ರೀಲಂಕಾ, ಕಾಂಬೋಡಿಯಾ, ಟಿಬೆಟ್, ಮಂಗೋಲಿಯಾ, ಸೈಬೀರಿಯಾ, ಥೈಲ್ಯಾಂಡ್, ಇಂಡೋನೇಷಿಯಾ, ಮಲೇಶಿಯಾ, ಜಪಾನ್, ಚೀನಾ ಇತ್ಯಾದಿ. ಥೈಲ್ಯಾಂಡ್‌ನಲ್ಲಿ ಅಯೋಧ್ಯೆ ಎಂಬ ಪಟ್ಟಣವಿದೆ. ಅಲ್ಲಿ ಆಳಿದ ಎಲ್ಲಾ ರಾಜರೂ ರಾಮನ ಹೆಸರೇ ಇಟ್ಟುಕೊಂಡಿದ್ದರು ಎಂಬುದು ರಾಮಾಯಣದ ಪ್ರಸಿದ್ಧತೆಯನ್ನು ಸೂಚಿಸುತ್ತದೆ. ಮೂಲ ಕಥನ ಒಂದೇ ಆದರೂ, ಕಥೆಗಳಲ್ಲಿ ಅಲ್ಲಲ್ಲಿ ಮಾರ್ಪಾಡುಗಳಿರುವುದನ್ನು ಗಮನಿಸಬಹುದು. ವೈದಿಕ, ಜೈನ, ಬೌದ್ಧ, ಹೀಗೆ ಯುಗ ಬದಲಾದರೂ ಕೃತಿ ನಾಶವಾಗದೆ, ಹೊಸ ಹೊಸ ಧಾರ್ಮಿಕ ಚಹರೆಗಳನ್ನು ಹೊತ್ತು ಬಂದಿದೆ. ಇದರ ಜೊತೆಗೆ ಭಾರತದ ಪುರಾಣ, ಚರಿತ್ರೆ, ಪರಂಪರೆಯನ್ನು ದಾಟಿ ಹಲವಾರು ಬದಲಾವಣೆಗಳನ್ನು ಅನುಸರಿಸಿ ಮುಂದುವರಿದಿದ್ದೇವೆ.

ಆದರೂ ಆಯಾಯ ಧಾರ್ಮಿಕ ಪಂಥಗಳ ತಾತ್ವಿಕತೆಗಳನ್ನು ಅವುಗಳು ಪ್ರಚುರ ಪಡಿಸಿದರೂ ಮೂಲ ಕಥೆ ಮಾತ್ರ ಹಾಗೆಯೇ ಇರುತ್ತಿತ್ತು.

ರಾಮಾಯಣದ ಬೆಳವಣಿಗೆಯು ಒಂದು ಕುತೂಹಲಕಾರಿಯಾದ ಅಧ್ಯಯನವಾಗಿದ್ದು, ಸುಮಾರು ಎರಡು ಸಾವಿರ ವರ್ಷಗಳಿಂದ ಅತ್ಯಂತ ಜನಪ್ರಿಯತೆಯಲ್ಲಿ ಇರುವ ರಾಮಾಯಣವನ್ನು ಬೋಧಿಸಿ, ಸಾರ್ವತ್ರೀಕರಣಗೊಳಿಸಿದ ಕೀರ್ತಿ ತುಳಸಿದಾಸರಿಗೆ ಸಲ್ಲಬೇಕು. ಅವರ ಗೀತೆಯ ಪ್ರಚಾರ ಮತ್ತು ಪಠಣಗಳಿಂದ ಇಡೀ ಉತ್ತರಭಾರತದಲ್ಲಿ ರಾಮಾಯಣ ಮತ್ತು ರಾಮನ ಹೆಸರು ಸ್ಥಾಯಿಯಾಯಿತು. ಉತ್ತರದಲ್ಲಿ ತುಳಸಿದಾಸರು ಮಾಡಿದ ಕಾರ್ಯವನ್ನೇ ದಕ್ಷಿಣದಲ್ಲಿ ಅದರಲ್ಲೂ ಮಹಾರಾಷ್ಟ್ರದಲ್ಲಿ ಸಂತ ರಾಮದಾಸರು ಮಾಡಿದರು. ರಾಮ ಮತ್ತು ಹನುಮಂತನ ಪಂಥದ ಪುನರುತ್ಥಾನ ಯಶಸ್ವಿಯಾಗಿ ನಡೆಯಿತು. ದ್ರಾವಿಡ ಮನೋಸ್ಥಿತಿಯಲ್ಲಿರುವ ದಕ್ಷಿಣ ಭಾಗವನ್ನು ಅಷ್ಟು ಸುಲಭವಾಗಿ ಉತ್ತರದಷ್ಟು ವೇಗವಾಗಿ ಪ್ರವೇಶಿಸಲು ಆಗದಿದ್ದರೂ, ಈಗಾಗಲೇ ಪ್ರಚಲಿತದಲ್ಲಿದ್ದ ರಾಮಾಯಣದ ಕಥೆಗೆ ಇನ್ನಷ್ಟು ವೇಗ ದೊರಕಿತು.

ರಾಮಾಯಣ ಪರಂಪರೆಯನ್ನು ಆಧುನಿಕತೆಯಲ್ಲಿ ಮಹಾತ್ಮ ಗಾಂಧೀಜಿಯವರು ರಾಮನನ್ನು ಆಧ್ಯಾತ್ಮಿಕ ಹೋರಾಟದ ಶಕ್ತಿಯನ್ನಾಗಿ ಬಳಸಿಕೊಂಡರು. ತಮ್ಮ ಸತ್ಯ–ಸತ್ಯಾಗ್ರಹ, ಉಪವಾಸಗಳಿಗೆ ರಾಮ–ನಾಮವನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಇನ್ನಷ್ಟು ವಿಸ್ತರಿಸಿದರು. ಮುಂದೆ ಪರಂಪರೆಯನ್ನು ಅನುಸರಿಸಿ, ಮೂಲ ಕಥಾವಸ್ತುವನ್ನು ಬಳಸಿ ಕವಿಗಳು ಕಾವ್ಯ ರಚನೆಯಲ್ಲಿ ತೊಡಗಿದರು. ಡಾ.ಜಿ.ಶಂ.ಪರಮಶಿವಯ್ಯರವರ ಹೇಳಿಕೆಯಂತೆ "ಯಾವುದೇ ಸಾಹಿತ್ಯದಲ್ಲಾದರೂ ಕಥಾ ವಸ್ತು ತುಂಬಾ ಪ್ರಾಚೀನವಾದದ್ದಾಗಿ ತನ್ನದೇ ಆದ ಪರಂಪರೆಯನ್ನು ಬಹು ಮಟ್ಟಿಗೆ ಪಡೆದುಕೊಂಡಿರುತ್ತದೆ. ಅದು ಒಂದು ನಿಮಿತ್ತವಾಗಿ ಮಾತ್ರ ಉಳಿದು ಕವಿಯ ಶಕ್ತಿಯನ್ನು ಅವಲಂಬಿಸಿ, ಆಯಾ ಕಾಲದಲ್ಲಿ ತನ್ನದೇ ಆದ ಸ್ವಂತಿಕೆಯನ್ನು ತುಂಬಿಕೊಂಡು ಅವತರಿಸುತ್ತದೆ. ಹೀಗಾಗಿ ನಮ್ಮಲ್ಲಿ ರಾಮಾಯಣ ಮಹಾಭಾರತಾದಿಗಳು ಅನಂತ ಮುಖವಾಗಿ ಕಾಣಿಸಿಕೊಂಡಿವೆ. ಒಬ್ಬೊಬ್ಬ ಕವಿಯ ಕೈಯಲ್ಲಿ ಒಂದೊಂದು ದಿವ್ಯ ದೃಷ್ಟಿಯನ್ನು ಪಡೆದುಕೊಂಡು, ಮೂಲ ಕಾವ್ಯಗಳ ಹೊಸ ವ್ಯಾಖ್ಯಾನಗಳು ಎಂಬಂತೆ ಭಾಷ್ಯಗಳೆಂಬಂತೆ ಕಥೆಯಲ್ಲಿ ಹೊಸ ಅರ್ಥವನ್ನು ವಿನೂತನತೆಯನ್ನು ತಂದುಕೊಡುತ್ತದೆ". (ಹ.ಕ.ರಾಜೇ ಗೌಡ, 2016, ಪುಟ 170)

ಮಹಾಕಾವ್ಯದಲ್ಲಿ ರಾಮಾಯಣ ಮತ್ತಷ್ಟು ಗಟ್ಟಿಗೊಳ್ಳಲು ಕಾರಣವೇನೆಂದರೆ, ಸಂಸ್ಕೃತ ಕವಿಗಳಾದ ಭಾಸ, ಕಾಳಿದಾಸ, ಕ್ಷೇಮೇಂದ್ರ, ಭವಭೂತಿ, ರಾಜಶೇಖರ, ಜಯದೇವ ಮುಂತಾದ ನಾಟಕಕಾರರು ಹೊಸ ಹೊಸ ವ್ಯಾಖ್ಯಾನಗಳೊಂದಿಗೆ ನಾಟಕಗಳನ್ನು ರಚಿಸಿರುವುದರ ಮೂಲಕ. ಭಾಸ, ಕಾಳಿದಾಸ, ದಿಙ್ನಗ, ಭವಭೂತಿ, ಮುಂತಾದವರ ಕೃತಿಗಳು ರಾಮನನ್ನು ಸಾಂದರ್ಭಿಕವಾಗಿ ವಿಮರ್ಶಿಸಿದ ಕೃತಿಗಳಾದರೆ, ಉಳಿದೆಲ್ಲ ಸಂಸ್ಕೃತ ನಾಟಕಕಾರರು ಬ್ರಾಹ್ಮಣ್ಯವನ್ನು ಪುನರುತ್ಥಾನಗೊಳಿಸುವ ದಿಸೆಯಲ್ಲಿ ರಾಮಾಯಣವನ್ನು ಇನ್ನಷ್ಟು ಪ್ರಚುರಪಡಿಸಿದರು. ರಾಮಾಯಣವು ಭಾರತದ ಸಂಸ್ಕೃತಿಯ ಪ್ರತೀಕ ಹಾಗೂ ಪರಂಪರೆ. ಅದರ ಚಾರಿತ್ರಿಕ ನೋಟ, ಸತ್ಯಾಸತ್ಯತೆ ವಿಮರ್ಶಿಸುವ, ವೈಚಾರಿಕವಾಗಿ ವಿಶ್ಲೇಷಿಸುವ ಕಾರ್ಯ ಅಷ್ಟಾಗಿ ನಡೆಯಲಿಲ್ಲ. ಏಕೆಂದರೆ ಇವುಗಳನ್ನೆಲ್ಲ ಮೀರಿದ ಕೃತಿ ರಾಮಾಯಣವೇ ಎಂಬಂತೆ ಹಿರಿದಾದ ಪ್ರಾಶಸ್ತ್ಯದಿಂದ ನೋಡಲಾಯಿತು. ಹಾಗಾಗಿ ರಾಮಾಯಣಕ್ಕೆ ಒಂದು ನಿರ್ದಿಷ್ಟತೆ ಲಭಿಸಲಿಲ್ಲ. ಹಿತಾಸಕ್ತಿಗಳನ್ನು ಪ್ರಶ್ನಿಸುವುದು ಸಾಹಿತ್ಯದ ಗುಣವಾದ್ದರಿಂದ, ಭವಭೂತಿಯ ಉತ್ತರ ರಾಮಚರಿತೆಯಲ್ಲಿ ರಾಮನ ನಡವಳಿಕೆಯನ್ನು ನೇರವಾಗಿ ಅಲ್ಲದಿದ್ದರೂ, ಲವ–ಕುಶರ ಮೂಲಕ ಪ್ರಶ್ನಿಸುವುದನ್ನು ಕಾಣುತ್ತೇವೆ. ಸ್ಥಾಪಿತವಾದ ಹಿತಾಸಕ್ತಿಗಳನ್ನು ಪ್ರಶ್ನೆ ಮಾಡುವುದು ಸಾಹಿತ್ಯದ ಒಂದು ಪ್ರಮುಖ ಗುಣ ಕೂಡ ಹೌದು.

ಕನ್ನಡದಲ್ಲಿ ಯಕ್ಷಗಾನ, ಬಯಲಾಟ, ಜೋಗಿಯರ ಕಥೆ, ಡಪ್ಪಿನಾಟ, ಸಣ್ಣಾಟಗಳಲ್ಲಿ ಜನಪ್ರಿಯವಾಗಿ ರಾಮಾಯಣ ಹಾಗೂ ಮಹಾಭಾರತದ ಕಥೆಗಳು ಬಳಕೆಗೆ ಬಂದವು. ದಿನ ನಿತ್ಯದ ಬದುಕಿನೊಂದಿಗೆ ಹೋಲಿಕೆಯ ರೂಪದಲ್ಲಿ ಕಥೆ, ಗಾದೆ, ಒಗಟುಗಳಲ್ಲಿ ರಾಮಾಯಣದ ಸಣ್ಣ ಸಣ್ಣ ವಿಚಾರಗಳು ಬಳಕೆಯಾಗತೊಡಗಿದವು. ತ್ರಿಪದಿಗಳಲ್ಲಿ ಗರತಿಯರು ತಮ್ಮ ನೋವು–ನಲಿವುಗಳನ್ನು ರಾಮಾಯಣದ ಪಾತ್ರಗಳಿಗೆ ಅನ್ವಯಿಸಿ ಹಾಡ ತೊಡಗಿದರು. ಉದಾಹರಣೆಯಾಗಿ ಹೇಳುವುದಾದರೆ ಕುಂಭಕರ್ಣನ ನಿದ್ದೆ, ಮಂಥರೆಯ ಚಾಡಿ, ಅಳಿಲ ಭಕ್ತಿ, ಲಕ್ಷ್ಮಣನ ಸಹೋದರತ್ವ, ಸೀತಮ್ಮನ ಗೋಳು, ಹನುಮ ತಂದ ಬೆಟ್ಟ ಇವೆಲ್ಲವೂ ರೂಪಕಗಳಾಗಿ ಜನ ಮನದಲ್ಲಿ ನಿಂತಿವೆ. "ಒಂದು ರೀತಿ ಗಮನಿಸಿದರೆ ದೀನ, ದಲಿತ, ಪತಿತ ಜನರದೆ ಕಾವ್ಯ. ರಾಮನ ದಕ್ಷಿಣ ದಿಗ್ವಿಜಯಕ್ಕೆ ನೆರವಾದವರೆಲ್ಲ ಇಂದಿನ ಅರ್ಥದಲ್ಲಿ ಹಿಂದುಳಿದ ಹರಿಜನ ಗಿರಿಜನರೆ...... ಹನುಮಂತ ಸುಗ್ರೀವಾದಿಗಳನ್ನು ಎದೆಗೆ ಅಪ್ಪಿಕೊಂಡ, ಜಟಾಯುವಂತಹ ವನ್ಯನನ್ನು ಧನ್ಯತೆಯಿಂದ ಕಂಡ, ನಾವಿಕ, ಬೇಡತಿ, ಶಬರಿ, ಜಾಂಬವಂತ, ಸಂಪಾತಿ ಇಂತವರಿಗೆಲ್ಲರಿಗೂ ರಾಮ ಪ್ರಿಯನಾದ". (ಶ್ರೀ ಗೌರೀಶ್ ಕಾಯ್ಕಿಣಿ, 1986, ಪುಟ 71) ಎಂದು ಕೊಂಡಾಡುವ ಬಹುತೇಕ ಲೇಖಕರಿಗೆ ಶಂಭೂಕ ನೆನಪಾಗದೇ ಇರುವುದಿಲ್ಲ. ಶೂರ್ಪನಖಿಯ

ಮೊಲೆ–ಮೂಗುಗಳನ್ನು ಕೊಯ್ದದ್ದು ಸಹಜ ಎನಿಸುವುದು. ವೈದಿಕ ಲೇಖಕರು ರಾಮಾಯಣಕ್ಕೆ ಕೊಟ್ಟ ಪ್ರಾಶಸ್ತ್ಯವನ್ನು ಕಾಣಬಹುದು. ಈ ಲೇಖಕರು ವಾಲ್ಮೀಕಿಯ ರಾಮಾಯಣವನ್ನು ಈಗಲೂ ಈ ರೀತಿ ಕೊಂಡಾಡುತ್ತಾ, ಜನ ಮಾನಸದಲ್ಲಿ ಬೇರೂರಿಸಲು ಪ್ರಯತ್ನಿಸುತ್ತಲೇ ಇದ್ದಾರೆ.

ರಾಮಾಯಣ–ಮಹಾಭಾರತಗಳ ಪ್ರಭಾವವು ಇಡೀ ಭಾರತವನ್ನು ವ್ಯಾಪಿಸಿದ ಹಿನ್ನೆಲೆಯಿಂದ ಹಿಂದೂ ಧರ್ಮದ ಉಪಾಸನೆಯು, ರಾಮ–ಕೃಷ್ಣರ ಅವತಾರದ ಕಲ್ಪನೆಯ ಜೊತೆಗೆ ಹಲವಾರು ದೇವತೆಗಳ ಕಥೆಗಳೂ ನಿರ್ಮಾಣಗೊಂಡು, ಸ್ಪಷ್ಟವಾದ ರೂಪದೊಂದಿಗೆ ಇವುಗಳ ಪೂಜೆಗಳಿಗಾಗಿ ದೇವಾಲಯ, ಗುಡಿಗಳನ್ನು ನಿರ್ಮಿಸುವ ರೂಢಿಯೂ ಮುಂದುವರಿಯಿತು. ಹೀಗೆ ಹಿಂದೂ ಧರ್ಮದ ಆಧಾರದ ಮೇಲೆ ಹಲವಾರು ಮಾರ್ಗಗಳು ರೂಪುಗೊಳ್ಳುತ್ತಿದ್ದಂತೆ, ಸಮಾಜದಲ್ಲಿ ಉದಾತ್ತ ತತ್ವಗಳಾದ ಜೈನ, ಬೌದ್ಧ ಧರ್ಮಗಳು ವ್ಯಾಪಿಸತೊಡಗಿದವು. ಬುದ್ಧ–ಮಹಾವೀರರ ತತ್ವ, ಉಪದೇಶಗಳು ಕ್ರಿ.ಶ.8ನೇ ಶತಮಾನದಲ್ಲಿ ಪ್ರಬಲವಾದ ಪ್ರತಿಭಟನೆಗಳಿಂದ ಬೌದ್ಧ ಧರ್ಮ ದೇಶದಿಂದ ಹೊರಗುಳಿದರೆ, ಜೈನ ಧರ್ಮ ನೆಲೆಯೂರಿತು. ಅದೇ ಸಂದರ್ಭದಲ್ಲಿ ಜಾನಪದ ರಾಮಾಯಣ–ಮಹಾಭಾರತಗಳನ್ನು ವೈದಿಕ ಪರಂಪರೆ ಸ್ವೀಕರಿಸಿ ಕೃತಿ ರಚನೆ ಮಾಡಿದರೆ, ಬೌದ್ಧ ಮತ್ತು ಜೈನಧರ್ಮದ ಪರಂಪರೆಯು ಜಾನಪದಕ್ಕೆ ಹತ್ತಿರವಾಗಿಯೂ, ಬೇರೊಂದು ರೀತಿಯಲ್ಲಿ ಗ್ರಹಿಸಿ ಕೃತಿ ರಚನೆ ಮಾಡಿದವು. ವಾಲ್ಮೀಕಿ ರಾಮಾಯಣದ ನಂತರ ರಚನೆಯಾದ ಆನಂದ, ಅದ್ಭುತ, ಆಧ್ಯಾತ್ಮ ರಾಮಾಯಣಗಳು ಪರಂಪರೆಗೆ ಹತ್ತಿರವಾಗುವಂತೆ ರಚನೆಯಾದರೂ, ವೈದಿಕ ಪರಂಪರೆಯ ರಾಮಾಯಣ ಬಹು ವಿಶಿಷ್ಟವಾಗಿ ಪ್ರತ್ಯೇಕವಾಗಿ ಕಂಡು ಬಂದವು. ಕನ್ನಡದ ಮೊದಲ ಜೈನ ರಾಮಾಯಣ ನಾಗಚಂದ್ರನ ಪಂಪರಾಮಾಯಣವು ವೈದಿಕ ರಾಮಾಯಣದ ಕತೆಯನ್ನು ಅನುಸರಿಸಿ ರಚನೆಯಾದದ್ದು ಎಂದು ಮೊದಲು ಭಾವಿಸಿದರೂ, ಮುಂದೆ ಜೈನರಲ್ಲಿ ವಿಮಲಸೂರಿ ಪರಂಪರೆ, ಗುಣಭದ್ರನ ಪರಂಪರೆ, ಸಂಘ ದಾಸನ ಪರಂಪರೆ (ಕನ್ನಡದಲ್ಲಿಲ್ಲ) ಗಳಿಂದ ಪ್ರತ್ಯೇಕವಾಗಿ ಬೆಳೆದು ಬಂದ ಪರಂಪರೆ ಎಂದು ಭಾವಿಸಲಾಯಿತು.

ಕನ್ನಡದಲ್ಲಿ ರಾಮಾಯಣಗಳನ್ನು ಬರೆದವರಲ್ಲಿ ಬಹುಶ: ಜೈನರೇ ಮೊದಲಿಗರು. ಕನ್ನಡ ಕವಿ ಚಕ್ರವರ್ತಿಗಳಲ್ಲೊಬ್ಬನಾಗಿ **'ಕಾಳಿದಾಸಂಗಂನೂರ್ಮಡಿ'** ಎಂದುಕೊಂಡ ಪೊನ್ನನ **'ಭುವನೈಕ್ಯ ರಾಮಾಭ್ಯುದಯ'**, **'ಬರೆಯೇ ಸುವರ್ಣಂತೇಯೆ ಮಲಯಜಂ'** ಎಂದು ಹೊಗಳಿಕೊಂಡ **'ಕುಮುದೇಂದುವಿನ ರಾಮಾಯಣ'**, **'ಜಗ ಮೆಚ್ಚುವಂತೆ ಹೇಳುವೆನೆಂದು'** ನಾಗಚಂದ್ರನ **'ರಾಮಚರಿತ ಪುರಾಣ'** ಇವೇ ಮೊದಲಾದ ಜೈನ ರಾಮಾಯಣಗಳು. "ಶತ ಶತಮಾನಕ್ಕೆ ಅಲೆ

ಅಲೆಯಾಗಿ ಬಂದರೂ ವಾಲ್ಮೀಕಿ ರಾಮಾಯಣ ಕಥಾ ಸರಣಿಗೆ ಬಳಕೆಗೊಂಡ ಕಿವಿಗೂ ಅಲ್ಲಿನ ಉನ್ನತ, ವಿಶಿಷ್ಟ ಧ್ಯೇಯಗಳನ್ನು ತಣಿದುಂಡ ಆತ್ಮಕ್ಕೂ ಭಿನ್ನವಾಗಿ ಕಂಡು ಬಂದವು". (ಬ್ಯಾತನಾಳ, 1956, ಸಂ1) ಆದ್ದರಿಂದಲೇ ಜೈನ ರಾಮಾಯಣಗಳು ಜನಪ್ರಿಯತೆಯನ್ನು ಕಾಣಲಿಲ್ಲ. ಮೂಲ ವಾಲ್ಮೀಕಿ ರಾಮಾಯಣದ ಕಥಾ ಪದ್ಧತಿಯನ್ನೇ ಅನುಸರಿಸಿ, ಕುಮಾರ ವಾಲ್ಮೀಕಿ ತೊರವೆ ರಾಮಾಯಣವನ್ನು ರಚಿಸಿದನು. ಇದು ಕನ್ನಡ ರಾಮಾಯಣಗಳಲ್ಲಿ ಹೆಚ್ಚು ಕೀರ್ತಿಯನ್ನು ಗಳಿಸಿತು. ನಡುಗನ್ನಡ ಕಾವ್ಯವಾದ ತೊರವೆ ರಾಮಾಯಣ ಭಾಮಿನಿ ಷಟ್ಪದಿಯಲ್ಲಿದ್ದು, ವಾಲ್ಮೀಕಿ ರಾಮಾಯಣದ ಕಥೆಯನ್ನು ಅಂದಗೆಡದಂತೆ ಮೊಟ್ಟ ಮೊದಲ ಬಾರಿಗೆ ಕನ್ನಡಕ್ಕೆ ಕೊಟ್ಟ ಕೀರ್ತಿ ಕುಮಾರ ವಾಲ್ಮೀಕಿಗೆ ಸಲ್ಲುತ್ತದೆ. ಕುಮಾರ ವಾಲ್ಮೀಕಿ ಎನ್ನುವ ಬಿರುದಿನ ಮೂಲಕ ವಾಲ್ಮೀಕಿ ರಾಮಾಯಣವನ್ನು ಕನ್ನಡಿಸಿದ ನರಹರಿ ತನ್ನನ್ನು ಕುಮಾರ ವಾಲ್ಮೀಕಿ ಎಂದೇ ಸಂಬೋಧಿಸಿಕೊಂಡಿದ್ದಾನೆ. ಕನ್ನಡದಲ್ಲಿ ಈತ ವಾಲ್ಮೀಕಿ ರಾಮಾಯಣದ ಆರು ಕಾಂಡಗಳನ್ನು ಮಾತ್ರ ಕನ್ನಡಿಸಿ ರಚಿಸಿದ ತೊರವೆ ರಾಮಾಯಣವು ವೈದಿಕ ಪರಂಪರೆಯ ಮೊದಲ ರಾಮಾಯಣ ಎಂದು ಪ್ರಸಿದ್ಧಿ ಪಡೆದಿದೆ. ಆದರೂ ಸಂಸ್ಕೃತದ ವಾಲ್ಮೀಕಿಯನ್ನು ಅನುಸರಿಸಿ, ಕನ್ನಡದಲ್ಲಿ ಅನೇಕ ರಾಮಾಯಣ ಕೃತಿಗಳು ಅಲ್ಲದೆ ಉತ್ತರ ರಾಮಾಯಣ ಕೃತಿಗಳು ರಚನೆಯಾದವು.

ಕನ್ನಡ ಸಾಹಿತ್ಯ ರಾಮಾಯಣ ಪ್ರಭಾವಕ್ಕೆ ಒಳಗಾಗಿರುವುದನ್ನು, ಕನ್ನಡ ನಾಡು–ನುಡಿ, ಭಕ್ತಿಯ ನೆಲೆಬೀಡಾಗಿರುವುದನ್ನು ಅದಕ್ಕೆ ಸಾಕ್ಷಿ ಎಂಬಂತೆ ಹಳ್ಳಿ ಹಳ್ಳಿಯಲ್ಲಿ ಇಂದಿಗೂ ರಾಮ ಮಂದಿರಗಳು, ರಾಮನ ಭಕ್ತ–ಸೇವಕ ಹನುಮಂತನ ಗುಡಿಗಳು ಜನಪ್ರಿಯತೆಗೆ ಕಾರಣವಾಗಿ, ಅದರ ಜೊತೆಗೆ ಜನ ಮನದಲ್ಲಿ ಭದ್ರವಾಗಿ ನೆಲೆಯೂರಿ ಭಕ್ತಿರಸ, ಕಾವ್ಯರೂಪವಾಗಿ ಹರಿದಿರುವುದನ್ನು ಗಮನಿಸಬಹುದು.

ಅಧ್ಯಯನದ ಉದ್ದೇಶ

ಕನ್ನಡದಲ್ಲಿ ರಚನೆಯಾದ, **'ಕನ್ನಡ ಉತ್ತರ ರಾಮಾಯಣ'** ಗಳ ಕಾವ್ಯಗಳನ್ನು ಆಧರಿಸಿ, ಈ ಸಂಶೋಧನಾ ಮಹಾಪ್ರಬಂಧವು ರಚನಾ ಸ್ವರೂಪವನ್ನು ಪಡೆದುಕೊಂಡಿದೆ. ಕನ್ನಡ ಭಾಷೆಯಲ್ಲಿ ಉತ್ತರ ರಾಮಾಯಣಗಳು, ಕವಿಯಾಧಾರಿತ ಹಾಗೂ ಕಾಲಘಟ್ಟಗಳ ಪ್ರಭಾವದಿಂದಾಗಿ ಹಲವು ಮಾದರಿಗಳಲ್ಲಿ, ಸ್ವರೂಪಗಳಲ್ಲಿ, ವಿಭಿನ್ನ ಚಿಂತನೆಯ ಹಿನ್ನೆಲೆಯಲ್ಲಿ ರಚನೆಯಾಗಿವೆ. ಈ ಕೃತಿಗಳೆಲ್ಲವನ್ನೂ ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ, ಉತ್ತರ

ರಾಮಾಯಣದ ಕಥೆಗಳಲ್ಲಿ ಮೂಡಿ ಬಂದಿರುವ ಸೀತೆಯ ಪಾತ್ರಗಳ, ವಿಭಿನ್ನತೆಗಳ ವಿಚಾರಗಳನ್ನು ಚರ್ಚಿಸುವ ನೆಲೆಗಳನ್ನು ಹೊಂದಿದೆ.

ಉತ್ತರ ರಾಮಾಯಣಗಳು ಒಂದೊಂದು ಕಾಲದ ಮನುಷ್ಯ ಜೀವನದ ಅನುವರ್ತನೆಗಳಿಗೆ, ಸಂವೇದನೆಗಳಿಗೆ ಹೇಗೆ ಸ್ಪಂದಿಸಿವೆ ಹಾಗೂ ಪ್ರತಿ ಕ್ರಿಯಾತ್ಮಕವಾಗಿ ಬೇರೆ ಮಾದರಿಯಲ್ಲಿ ಮತ್ತೆ ಮತ್ತೆ ಸೃಷ್ಟಿಯಾಗಿರುವುದನ್ನು ಸೀತೆಯ ಪಾತ್ರದ ಮೂಲಕವಾಗಿ ಕಾಣಬಹುದು. ಉತ್ತರ ರಾಮಚರಿತೆಯ ಕೃತಿಗಳ ನಿರ್ದಿಷ್ಟ ಕಾಲಘಟ್ಟ ರಚನೆಕಾರರ ವಸ್ತು-ವಿಶೇಷಣ ಕ್ರಮ, ಪಾತ್ರ ಸೃಷ್ಟಿಯ ಪರಿಕಲ್ಪನೆ, ಕೃತಿಯ ಛಂದೋ ರೂಪ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಪರಿಕಲ್ಪನೆ ಹಾಗೂ ಆಶಯಗಳ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಕನ್ನಡ ಉತ್ತರ ರಾಮಾಯಣ ಕಾವ್ಯಗಳ ಚಾರಿತ್ರಿಕ ಹಿನ್ನೆಲೆ, ಕಾವ್ಯ ರಚನೆಗೆ ಪ್ರೇರಣೆ, ವಸ್ತು-ವಿಶ್ಲೇಷಣೆ, ಪಾತ್ರ-ಸನ್ನಿವೇಶಗಳ ಮಹತ್ವಗಳನ್ನು ತಿಳಿಸುತ್ತಾ, ಸೀತೆಯ ಪಾತ್ರದ ಸೃಷ್ಟಿ, ಮೌಲ್ಯ, ಮಾನವೀಯತೆ, ಹೆಣ್ತನ ಮೊದಲಾದವುಗಳನ್ನು ನಿರೂಪಿಸುವ ಉದ್ದೇಶವಿದೆ. ಕನ್ನಡ ಉತ್ತರ ರಾಮಾಯಣದಲ್ಲಿ ಪ್ರಧಾನವಾಗಿರುವ ಸೀತೆಯ ಪಾತ್ರದ ಸ್ವರೂಪ, ಆಧುನಿಕ ಮಹಿಳಾ ಸಂವೇದನೆಗಳಿಗೆ ಪ್ರತಿಸ್ಪಂದಿಸುವ ಪಾತ್ರವಾಗಿ ಸೀತೆಯ ಪಾತ್ರವನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ.

ಆಧುನಿಕ ಯುಗದಲ್ಲಿ ರೂಪುಗೊಳ್ಳುತ್ತಿರುವ ಜೀವನ ಶೈಲಿಗಳು, ಹಿಂದಣದ ಸಂಬಂಧವನ್ನು ಕಳಚಿಕೊಳ್ಳುತ್ತಾ, ನಿರ್ದಿಷ್ಟತೆಯ ಅಂಕಣದ ಅಳತೆಯನ್ನು ಮೀರಿ ವ್ಯಾಪಿಸಿದೆ. ಜೀವನದ ಅರ್ಥ, ಸಂತೃಪ್ತಿ, ನೆಮ್ಮದಿಗಿಂತ ಜನರು ಸಂಪಾದನೆಯ ಹಿಂದೆ ಸಾಗುತ್ತಿದ್ದಾರೆ. ವಾಮಮಾರ್ಗದ ಸಂಪಾದನೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಪಾತ್ರ ಪ್ರಧಾನವಾಗಿದೆ. ಮಹಿಳೆ ಸಂಸಾರದ ಜೀವನದಲ್ಲಿ ಕೇಂದ್ರವಾಗಿದ್ದವಳು. ಅವಳಿಂದಲೇ ಸುಖ-ಶಾಂತಿ-ನೆಮ್ಮದಿ ಕುಟುಂಬಕ್ಕೆ ಪ್ರಾಪ್ತವಾಗುತ್ತದೆ. ಅಂತಹ ಘನವಾದ ಸ್ಥಾನದಲ್ಲಿರುವ ಮಹಿಳೆ ಪ್ರಸ್ತುತ ಸಮಾಜದಲ್ಲಿ ಯಾವೆಲ್ಲ ರೀತಿಯಲ್ಲಿದ್ದಾಳೆ? ಎಂಬುದನ್ನು ವಿವರಿಸುವ ಉದ್ದೇಶವನ್ನು ಹೊಂದಿದೆ.

ಉತ್ತರ ರಾಮಾಯಣಗಳು ನಿರ್ವಚನಗೊಂಡಿರುವ ಶೈಲಿ, ತಂತ್ರಗಳಲ್ಲಿ ಇರುವ ಸಾಮ್ಯತೆ, ಅಂತರ್‍ಭೇದಗಳ ಸ್ವರೂಪ, ಪಾತ್ರ ಚಿತ್ರಣದ ವಿಶೇಷತೆಗಳನ್ನು ಅನುಲಕ್ಷಿಸುವುದು ಅಧ್ಯಯನದ ಧ್ಯೇಯವೂ ಆಗಿದೆ. ಈ ಮೂಲಕವಾಗಿ ಸೀತೆಯ ಪಾತ್ರವು ಯಾಕೆ ಪ್ರಾಮುಖ್ಯತೆಯನ್ನು ಪಡೆದಿದೆ ಎಂಬುದನ್ನು, ವಿವಿಧ ಮಾದರಿಗಳ ಕನ್ನಡ ಉತ್ತರ ರಾಮಾಯಣ ಕೃತಿಗಳ ಮೂಲಕ ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದೆ. ರಾಮಾಯಣದಲ್ಲಿ ಪ್ರಕ್ಷಿಪ್ತ ಭಾಗವೆಂದು ಹಾಗೂ

ವಿಶ್ಲೇಷಣೆಯಲ್ಲಿ ಅಷ್ಟಾಗಿ ಗಮನಿಸದೇ ಇರುವ ಭಾಗವೇ ಉತ್ತರ ರಾಮಾಯಣದ ಭಾಗ. ಈ ಉತ್ತರ ರಾಮಾಯಣದ ಭಾಗದಲ್ಲಿ ಸೀತೆಯ ಪಾತ್ರ ಪ್ರಧಾನ ಭೂಮಿಕೆಯದ್ದು. ಪೂರ್ವ ರಾಮಾಯಣದಲ್ಲಿ ಪತಿವ್ರತೆ, ತಾಳ್ಮೆ, ಸಹಾನುಭೂತಿಯ ಹೆಣ್ಣಾಗಿ ಚಿತ್ರಿತಳಾದರೆ, ಉತ್ತರ ರಾಮಾಯಣದಲ್ಲಿ ಪೂರ್ವ ರಾಮಾಯಣದ ಸ್ವಭಾವದೊಂದಿಗೆ ದಿಟ್ಟ ಮಹಿಳೆಯಾಗಿ, ಜವಾಬ್ದಾರಿಯುತ ತಾಯಿಯಾಗಿ ಕಾಣಿಸಿಕೊಂಡಿದ್ದಾಳೆ.

ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡಿರುವ ರಾಮಾಯಣದ ಕೊನೆಯ ಭಾಗವಾದ ಉತ್ತರ ರಾಮಾಯಣದಲ್ಲಿ ಸೀತೆಯ ಪಾತ್ರದ ಮಹತ್ವವೇನು? ಎಂಬುದು ಬಹು ಮುಖ್ಯವಾದ ಚರ್ಚೆ. ರಾಜಕುಮಾರಿ ಗಂಡನ ಕಠಿಣ ನಿರ್ಧಾರಕ್ಕೆ ಎಡೆಕೊಡದೆ, ಪತಿಯೇ ಪರದೈವ ಎಂಬ ಭಾರತೀಯ ನಂಬಿಕೆಯಂತೆ, ಆತನನ್ನು ಹಿಂಬಾಲಿಸಿ ನಡೆದಳು. ಮುಂದೆ ಸುಖ ಜೀವನದ ನಿರೀಕ್ಷೆಯಲ್ಲಿದ್ದ ಆಕೆ ನಂಬಿದ್ದ ಗಂಡನಿಂದ ಪರಿತ್ಯಕ್ತಳಾಗಿ, ಒಬ್ಬಂಟಿಗಳಾಗಿ, ಅವಳಿ ಮಕ್ಕಳನ್ನು ಕಟ್ಟಿಕೊಂಡು, ಜೀವನ ಸಾಗಿಸಿ, ಕೊನೆಗೆ ಭೂಮಿ ತಾಯಿಯೊಡನೆ ಲೀನವಾಗುವ ಈ ಸನ್ನಿವೇಶ ನಿಜವಾಗಿಯೂ ಕುತೂಹಲಕಾರಿಯೇ. ಉತ್ತರ ರಾಮಾಯಣ ಕೃತಿ ರಚಿಸಿದ ಕವಿಗಳು ಮೂಲ ಕೃತಿಯನ್ನು ಅನುಸರಿಸಿ ಕೃತಿ ರಚನೆ ಮಾಡಿದರೂ, ಈ ಸನ್ನಿವೇಶದಲ್ಲಿ ಕವಿಗಳು ಬದಲಾವಣೆ ತಂದು ಕೊನೆಗೆ ಗಂಡ ಮಕ್ಕಳೊಂದಿಗೆ ಸುಖವಾಗಿ ಬಾಳುವಂತೆ ರಚಿಸಿದ್ದು, ಕವಿಗಳ ಕಲ್ಪನಾ ಶಕ್ತಿಗೆ ಜನಪದ ರಾಮಾಯಣ ಸ್ಫೂರ್ತಿಯಾಗಿರಬೇಕು. ರಾಮಾಯಣದ ಕಥೆ ಸಾಗುವುದೇ ಸೀತಾ ಪಾತ್ರದ ಮೂಲಕ. ಸೀತಾ ವಿವಾಹ, ಸೀತಾ ಅಪಹರಣ, ಸೀತೆಯ ಅಗ್ನಿಪ್ರವೇಶ, ಸೀತಾ ಪರಿತ್ಯಾಗ, ಸೀತಾ ಶಪಥ ಇವೆಲ್ಲವೂ ರಾಮಾಯಣವನ್ನು ಮೇಲ್ಮೈಗೆ ತಂದು ನಿಲ್ಲಿಸಿವೆ. ಸೀತೆ ಇಲ್ಲದೆ ರಾಮಾಯಣಕ್ಕೆ ಶ್ರೇಷ್ಠತೆಯೇ ಇಲ್ಲ. ರಾಮಾಯಣದ ಕಥೆ ಕೊನೆಗೊಳ್ಳಬೇಕಾದರೆ ಸೀತೆ ಬೇಕೇ ಬೇಕು. "ರಾಮಾಯಣ ಎನ್ನುವುದಕ್ಕಿಂತ **'ಸೀತಾಯಣ'** ಎನ್ನಬೇಕಿತ್ತೇನೋ" (ಪೋಲಂಕಿಯವರ ಮಾತು). ರಾಮಾಯಣದ ಕೊನೆಯ ಭಾಗವಾದ ಉತ್ತರ ರಾಮಾಯಣದಲ್ಲಿ ಪ್ರಕ್ಷಿಪ್ತವಾದ ಭಾಗ ಎಂಬುವುದು ವಿದ್ವಾಂಸರ ಮಾತಾದರೂ, ಸೀತೆಯ ಪಾತ್ರವನ್ನು ಹೇಗೆ ನಿರ್ವಹಿಸಲಾಗಿದೆ? ಎಂಬುದನ್ನು ನೋಡುವ ಅಗತ್ಯತೆಯಿಂದ ಉತ್ತರ ರಾಮಾಯಣದಲ್ಲಿ ಸೀತೆಯ ಪಾತ್ರವನ್ನು ಇಲ್ಲಿ ಮುಖ್ಯವಾಗಿ ಚರ್ಚೆಯ ಕಕ್ಷೆಗೆ ತೆಗೆದುಕೊಳ್ಳಲಾಗಿದೆ.

ಭಾರತೀಯ ಪರಂಪರೆಯ ದೃಷ್ಟಿಯಲ್ಲಿ ನೈಜ ನಿರ್ಮಾತೃಗಳೆಂದರೆ ಸ್ತ್ರೀಯರೇ. ಭಾರತೀಯ ಪರಂಪರೆ ಕಲ್ಪಿತ ನೆಲೆಯಾದರೂ, ಈ ಕಲ್ಪಿತ ನೆಲೆಯಲ್ಲಿ ಸ್ತ್ರೀ ತ್ಯಾಗ ಮಾಡಲೇಬೇಕಾದ

ಪ್ರಮುಖ ಪಾತ್ರವಿದೆ. ಅದೆಂದರೆ ತಾನು ಮರೆಯಲ್ಲೇ ಇದ್ದು ತನ್ನ ಪತಿಯ ನೆರಳಲ್ಲಿ ನಿಂತು, ಅವನ ಯಶಸ್ಸಿಗೆ ಪ್ರಯತ್ನಿಸುತ್ತಲೇ ಇರುವುದು, ಇಲ್ಲವೆ ಅವನಿಗಾಗಿ ದುರಂತ ಸಾವನ್ನೋ, ಪ್ರಾಣಾರ್ಪಣೆಯನ್ನೋ ಮಾಡಿಕೊಳ್ಳುವುದು ಭಾರತೀಯ ಸಂಸ್ಕೃತಿಯೊಳಗೆ ಹಾಸು ಹೊಕ್ಕಿವೆ. ರಾಮಾಯಣವೆಂದರೆ ಕೇವಲ ರಾಮನ ಕಥೆ ಮಾತ್ರವಲ್ಲ, ರಾಮನ ಕೀರ್ತಿ ಅಜರಾಮರವಾಗಬೇಕಾದರೆ, ಅವನ ಪಾತ್ರವನ್ನು ಮುನ್ನೆಲೆಗೆ ತಂದ, ಆತನ ಕೀರ್ತಿಗೆ ಪ್ರಮುಖ ಪಾತ್ರವಾದ ಸೀತೆಯನ್ನು ಕುರಿತು ಚರ್ಚಿಸುವುದು ಈ ಹೊತ್ತಿಗೆ ಮುಖ್ಯವಾಗಿದೆ.

ತ್ಯಾಗಕ್ಕೂ, ಪ್ರೀತಿಗೂ, ತಾಳ್ಮೆಗೂ ಹೆಸರಾಗಿ ಜನಮಾನಸದಲ್ಲಿ ಅಖಂಡವಾಗಿ ಬೇರೂರಿ ನೆಲೆ ನಿಂತ ಸೀತೆಯ ಪಾತ್ರವನ್ನು ಕುರಿತು ಗಂಭೀರವಾದ ಅಧ್ಯಯನಗಳು ಈಗಾಗಲೇ ಸಾಕಷ್ಟು ನಡೆದಿವೆ. ಆದರೂ 16ನೇ ಶತಮಾನದಿಂದ 19ನೇ ಶತಮಾನದವರೆಗೆ ನಡುಗನ್ನಡ ಕಾಲಘಟ್ಟದಲ್ಲಿ ಬರೆಯಲ್ಪಟ್ಟ ಪೂರ್ಣ ಪ್ರಮಾಣದ ಉತ್ತರ ರಾಮಾಯಣ ಕೃತಿಗಳಲ್ಲಿ ಸೀತೆಯ ಪಾತ್ರವನ್ನು ಹೇಗೆ ನಿರ್ವಹಿಸಲಾಗಿದೆ? ಎಂಬುದನ್ನು ಈ ಅಧ್ಯಯನದಲ್ಲಿ ಶೋಧಿಸಲಾಗಿದೆ.

ಮೂರುವರೆ ಸಾವಿರ ವರ್ಷಗಳ ಇತಿಹಾಸವಿರುವ ರಾಮಾಯಣದ ಕೊನೆಯ ಭಾಗವಾದ ಉತ್ತರ ರಾಮಾಯಣವನ್ನು ಅನುಸರಿಸಿ ಕನ್ನಡದಲ್ಲಿ ಕೃತಿ ರಚನೆ ಮಾಡಿದರೂ, ಮೂಲ ವಸ್ತು ಒಂದೇ ಆದರೂ, ಮೂಲ ವಸ್ತುವಿನ ಜತೆಗೆ ಕೆಲವೊಂದು ಸನ್ನಿವೇಶಗಳ, ಬದಲಾವಣೆಗಳ, ಸೇರ್ಪಡೆಗಳ ಮೂಲಕ ತಮ್ಮದೇ ಆದ ದೃಷ್ಟಿ ಕೋನಗಳಿಂದ ಭಿನ್ನ ರೀತಿಯಲ್ಲಿ ಕೃತಿ ರಚನೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಉತ್ತರ ರಾಮಾಯಣ ಸೀತಾ ಪಾತ್ರಕ್ಕೆ ಹೆಚ್ಚು ಮಹತ್ವ ನೀಡಿ, ಸೀತೆಯ ಪಾತ್ರ ಬದಲಾಯಿಸಿಕೊಂಡ ಚಹರೆಗಳೇನು? ಹಾಗೆ ಅಭಿವ್ಯಕ್ತಿಸುವಾಗ ಅವುಗಳ ಮೇಲೆ ಉಂಟಾದ ಪ್ರಭಾವಗಳೇನು? ಅದನ್ನು ಕವಿ ಮನಸ್ಸು ಹೇಗೆ ನೀಗಿಸಿಕೊಂಡಿದೆ? ಇದರಿಂದ ಸೀತಾ ಪಾತ್ರದ ಮೇಲೆ ಉಂಟಾದ ತೊಡಕುಗಳೇನು? ಲಾಭಗಳೇನು? ಎಂಬೆಲ್ಲ ಚರ್ಚೆಗಳು ಅವಶ್ಯಕವಾಗಿರುವುದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಭೂಮಿಯಲ್ಲಿ ಅನಾಥಳಾಗಿ ಸಿಕ್ಕ ಮಗುವೊಂದು ಕಾಲಾಂತರದಲ್ಲಿ ತನ್ನ ಮೇಲೆ ನಿರಂತರವಾಗಿ ನಡೆದ ದೌರ್ಜನ್ಯಗಳನ್ನು ಎದುರಿಸಲಾಗದೆ, ಪ್ರತಿಭಟಿಸಲಾಗದೆ, ಅದೆಲ್ಲವನ್ನು ಮನದಲ್ಲಿಯೇ ನುಂಗಿಕೊಳ್ಳುತ್ತಾ, ಭೂಮಿ ತೂಕದ ಹೆಣ್ಣಾಗಿ, ಸಂಸ್ಕೃತಿಯ ಸಾರವಾಗಿ ಕಂಡ ಸೀತೆ ಅಂತಿಮವಾಗಿ ತಾಳ್ಮೆ ಮಿತಿ ಮೀರಿದಾಗ, ಮತ್ತೆ ಸ್ವಯಂ ಪ್ರೇರಣೆಯಿಂದ ಭೂಮಿಯೆಡೆಗೆ ಜಾರುವ ಹಾಗೂ ಕೊನೆಗೆ ಗಂಡ ಮಕ್ಕಳೊಂದಿಗೆ ಸುಖ ಜೀವನವನ್ನು ಕಂಡುಕೊಂಡ ಸೀತಾ

ಪಾತ್ರದಲ್ಲಿನ ಸನ್ನಿವೇಶಗಳನ್ನು ಕವಿಗಳು ತಮ್ಮ ಕೃತಿಗಳಲ್ಲಿ ಕಂಡ ಬಗೆ ಹೇಗೆ? ಎಂಬುದನ್ನು ಕೂಡ ನೋಡಬೇಕಿದೆ.

ಪ್ರಪಂಚದಾದ್ಯಂತ ಹಬ್ಬಿರುವ ಹಲವು ರಾಮಾಯಣಗಳು ಸೀತೆಯ ಬಗ್ಗೆ ಮಮಕಾರದಿಂದ ಮನ ತುಂಬಿ ಹೊಗಳುತ್ತಾ, ತಮ್ಮ ಮನೆಯ ಮಗಳಂತೆ ಗ್ರಹಿಸುತ್ತಾ, ಅವಳ ಸಹನಶೀಲತೆ, ಪಾವಿತ್ರ್ಯತೆಯನ್ನು ಜನಸಮುದಾಯವು ತಮ್ಮ ಜೀವನದೊಂದಿಗೆ ತುಲನೆ ಮಾಡಿಕೊಳ್ಳುವಂತೆ ಮಾಡಿವೆ. 15ರಿಂದ 19ನೇ ಶತಮಾನದ ಕಾಲಘಟ್ಟಗಳಲ್ಲಿ ರಚನೆಗೊಂಡ ಉತ್ತರ ರಾಮಾಯಣಗಳಲ್ಲಿ ಸೀತೆಯನ್ನು ಪರಿಭಾವಿಸುವಾಗ ಕಾಲದ ಒತ್ತಡ ಸಹಜವಾದುದೇ. ಈ ಹಿನ್ನೆಲೆಯಲ್ಲಿ ಸೀತೆಯ ಪಾತ್ರ ಹೇಗೆ ಬಿಂಬಿತಗೊಂಡಿದೆ ಎಂಬುದನ್ನು ಆಯ್ದ ಉತ್ತರ ರಾಮಾಯಣ ಕೃತಿಗಳ ಆಧಾರದ ಮೇಲೆ ಚರ್ಚಿಸಲಾಗಿದೆ. ಆ ಕಾರಣದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕವಿಗಳು ತಮ್ಮ ಉತ್ತರ ರಾಮಾಯಣದ ವಸ್ತುವಿನ ಬಗ್ಗೆ ಚರ್ಚಿಸುವಾಗ, ಉತ್ತರ ರಾಮಾಯಣ ಕಾವ್ಯಗಳ ವಸ್ತುವಿನಲ್ಲಿ ಕಂಡು ಬರುವ ಸಾಮ್ಯತೆ ವೈವಿಧ್ಯತೆಗಳೇನು? ಯಾವ ಸನ್ನಿವೇಶಗಳು ಬದಲಾಗಿವೆ? ಯಾವ ಸನ್ನಿವೇಶಗಳನ್ನು ತಮ್ಮ ನೆಲೆಯಲ್ಲಿ ಸ್ವಲ್ಪ ಭಿನ್ನವಾಗಿ ನಿರೂಪಿಸಿದ್ದಾರೆ? ಕನ್ನಡ ಕವಿಗಳ ಪ್ರತಿಭಾ ಕೌಶಲ್ಯದಿಂದಾಗಿ ಯಾವ ಸನ್ನಿವೇಶಗಳು ಹೊಸದಾಗಿ ಮೈ ತಳೆದಿವೆ ಹಾಗೂ ಯಾವ ಸನ್ನಿವೇಶಗಳು ಕಾವ್ಯಕ್ಕೆ ಅನುಗುಣವಾಗಿ ಹೊಸದಾಗಿ ಸೇರಿವೆ? ಯಾವ ಸನ್ನಿವೇಶಗಳು ವಿಸ್ತೃತಗೊಂಡಿವೆ? ಯಾವ ಸನ್ನಿವೇಶಗಳು ಕಡಿತಗೊಂಡಿವೆ? ಹಾಗಾಗಿ ಕವಿಗಳು ರಚಿಸಿದ ಕಾವ್ಯಗಳಲ್ಲಿ ಕೇವಲ ಹೀಗೆ; ಹೀಗಿಲ್ಲ ಎಂದು ಪೂರ್ಣವಾಗಿ ವಿಶ್ಲೇಷಿಸಲು ಸಾಧ್ಯವಾಗದಿದ್ದರೂ, ಸ್ವಲ್ಪಮಟ್ಟಿಗೆ ಸಾಧ್ಯವಾಗುತ್ತದೆ. ಯಾಕೆಂದರೆ ಒಂದೇ ವಸ್ತುವನ್ನು ಕವಿಗಳು ಕಂಡ ಬಗೆಗಳ ಮೂಲಕ ಸಮಕಾಲೀನತೆಯ ಸೀತಾ ಪಾತ್ರವನ್ನು ಶೋಧಿಸುವ ಪ್ರಯತ್ನ ಇಲ್ಲಿದೆ.

ಕಾವ್ಯಗಳು ಒಂದೇ ಕಾಲದಲ್ಲಿ ಭಿನ್ನ ನೆಲೆಗಳನ್ನು ಒಳಗೊಂಡು ಕವಿಗಳ ಪ್ರತಿಭೆ, ಧರ್ಮ, ಸಾಹಿತ್ಯದ ಪ್ರಚುರತೆ, ಛಂದಸ್ಸಿನ ಪ್ರಯೋಗಶೀಲತೆ ಮೊದಲಾದವುಗಳು ಕೆಲಸ ಮಾಡಿವೆ. ಜೊತೆಗೆ ಇಂತಹ ಅಂಶಗಳೇ ಉತ್ತರ ರಾಮಾಯಣದ ವಸ್ತು–ವಿನ್ಯಾಸದ ಮಹತ್ವವನ್ನು ನಿರೂಪಿಸಲು ನೆರವಾಗಿರುತ್ತದೆ. ಇವುಗಳನ್ನು ಶೋಧಿಸುವ ಪ್ರಯತ್ನವಿದೆ. ಉತ್ತರ ರಾಮಾಯಣಗಳ ಕಥೆಯ ವಸ್ತುವಿನ ಹಿನ್ನೆಲೆಯಲ್ಲಿ ಈ ಪಾತ್ರ ಮುಖ್ಯ, ಅಮುಖ್ಯ ಎಂದು ಹೇಳಲಾಗುವುದಿಲ್ಲ. ಪ್ರತಿಯೊಂದು ಪಾತ್ರವೂ ವಸ್ತುವಿನೊಂದಿಗೆ ತನ್ನದೇ ಆದ ಕ್ರಿಯಾತ್ಮಕ

ಸಂಬಂಧವನ್ನು ಹೊಂದಿವೆ. ಹಾಗಾಗಿ ಎಲ್ಲಾ ಪಾತ್ರಗಳ ವಿಶ್ಲೇಷಣೆ ಮಾಡುವುದು ಸದ್ಯದ ಅಧ್ಯಯನದ ಉದ್ದೇಶವು ಆಗಿರುವುದಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನವು ಪ್ರಾತಿನಿಧಿಕ ಪಾತ್ರವಾದ ಸೀತೆಯನ್ನು ಅರ್ಥೈಸಿ, ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ.

ಶಿಷ್ಟ ರಾಮಾಯಣಗಳು ರಾಮ ಕೇಂದ್ರಿತವಾದರೆ, ಜನಪದ ರಾಮಾಯಣ ಹಾಗೂ ಉತ್ತರ ರಾಮಾಯಣಗಳು ಸೀತಾ ಕೇಂದ್ರಿತವಾಗಿವೆ. ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಪೂರ್ಣ ಪ್ರಮಾಣದ ಐದು ಕೃತಿಗಳನ್ನು, ಅನುಲಕ್ಷಿಸಿದ ಕನ್ನಡ ರಾಮಾಯಣ ಕೃತಿಗಳನ್ನು ಹಾಗೂ ಜನಪದ ರಾಮಾಯಣ ಕೃತಿಗಳಲ್ಲಿ ಸೀತೆಯ ಪಾತ್ರವನ್ನು ಚರ್ಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ಮಹತ್ವ

ಕನ್ನಡದ ಉತ್ತರ ರಾಮಾಯಣ ಕವಿಗಳು ನಡುಗನ್ನಡ ಕಾಲಘಟ್ಟದ ಪ್ರತಿನಿಧಿಗಳಾಗಿದ್ದು, ತಮ್ಮ ಕಾವ್ಯದ ವಸ್ತುವನ್ನು ಅವರವರ ಮೌಲ್ಯಗಳಿಗೆ ಅನುಗುಣವಾಗಿ ಪುನರ್ ಸೃಷ್ಟಿಸಿದ್ದಾರೆ. ಹಾಗಾಗಿ ವಸ್ತುವಿಗೆ ಹೊಸ ಆಯಾಮ ಒದಗಿದೆ. ಭಕ್ತಿ, ವೈದಿಕ ಸಂಪ್ರದಾಯ, ಪಾಂಡಿತ್ಯ ಎಂಬ ಮೌಲ್ಯಗಳೇ ಕೃತಿಗಳಲ್ಲಿ ಸಮ್ಮಿಲನಗೊಂಡು ಕಾವ್ಯಗಳಿಗೆ ಹೊಸತನ ಲಭಿಸಿವೆ. ಇದು ಉತ್ತರ ರಾಮಾಯಣದ ವಸ್ತುವಿಗೆ ಒದಗಿದ ಮಹತ್ವ ಎಂದು ಹೇಳಬಹುದು.

ಸುಮಾರು ಮೂರೂವರೆ ಸಾವಿರ ವರ್ಷಗಳ ರಾಮಾಯಣ ಪರಂಪರೆಯು ಕಾಲದಿಂದ ಕಾಲಕ್ಕೆ ಹೊಸ ವಿನ್ಯಾಸವನ್ನು ಪಡೆದುಕೊಳ್ಳುತ್ತಲೇ ಮರು ಹುಟ್ಟು ಪಡೆಯುತ್ತಾ ಬಂದಿದೆ. ಹೀಗೆ ಮರು ಹುಟ್ಟು ಪಡೆಯುವ ಕಾವ್ಯವೊಂದು ಕಾಲದ ಒತ್ತಡಕ್ಕೆ ಒಳಗಾಗುವುದು ಸಹಜವಾದುದೆ. ಇಂತಹ ಸಂದರ್ಭದಲ್ಲಿ ಉತ್ತರ ರಾಮಾಯಣದ ಸೀತೆಯ ಪಾತ್ರವನ್ನು ಕಟ್ಟಿ ಕೊಟ್ಟ ಬಗೆ ಹೇಗೆ? ಎಂಬುದನ್ನು ಚರ್ಚಿಸುವುದರಿಂದ ಈ ಅಧ್ಯಯನಕ್ಕೆ ಮಹತ್ವ ಬರುತ್ತದೆ. ರಾಮಾಯಣಗಳೆಲ್ಲ ರಾಮ ಕಥೆಗಳಾಗಿ ವೈಭವೀಕರಣಗೊಳ್ಳುತ್ತಿರುವುದರಿಂದ ರಾಮನ ಪಾತ್ರಕ್ಕೆ ಮಹತ್ವ ತಂದು ಕೊಟ್ಟ ಸೀತೆಯ ಪಾತ್ರವು ಮರೆಗೆ ಸರಿದಿದೆ. ಇದು ಉದ್ದೇಶ ಪೂರ್ವಕ ಎನ್ನಲಾಗದಿದ್ದರೂ, ಅಷ್ಟು ಮಹತ್ವ ಇಲ್ಲದಿರುವುದಂತೂ ಸತ್ಯ. ಆಧುನಿಕ ಕಾಲದಲ್ಲಿ ಹೆಣ್ಣೊಂದನ್ನು ಕವಿಗಳು, ಓದುಗರು ನೋಡುವ ಬಗೆ ಹೇಗೆ? ಎಂಬುದರ ಮೂಲಕ ವರ್ತಮಾನಕ್ಕೆ ಮುಖಾಮುಖಿಗೊಳಿಸಲಾಗಿದೆ. ಹೆಣ್ಣು ಪಾತ್ರಗಳೆಲ್ಲವೂ ಗಂಡು ಪಾತ್ರಗಳ ಔನ್ನತ್ಯಕ್ಕೆ ತುಡಿಯಲು

ಹಾ ತೊರೆಯುತ್ತವೆ ಮತ್ತು ಅವುಗಳ ಮಿತಿಗಳನ್ನು ಕೂಡಾ ಆಯಾ ಪಾತ್ರಗಳಿಂದಲೇ ಹೇಳಿಸಲಾಗುತ್ತದೆ. ಆದ್ದರಿಂದ ಈ ಅಧ್ಯಯನವು ಮಹತ್ವ ಪಡೆದಿದೆ ಎನ್ನಬಹುದು.

ಪೂರ್ವ ರಾಮಾಯಣಕ್ಕಿಂತ ಉತ್ತರ ರಾಮಾಯಣಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಾಗೂ ಓದುವಿಕೆಯ ವಿಸ್ತಾರದ ಗತಿಯಲ್ಲಿ ಲೋಕ ರೂಢಿಯಲ್ಲಿ ಚರ್ಚೆಗೆ ಒಳಗಾಗದೆ ಇರುವ ಭಾಗವಾಗಿವೆ. ಇವುಗಳ ಮಹತ್ವವನ್ನು ಅರಿತು ಅಧ್ಯಯನದ ಮಹತ್ವ, ವೈಶಿಷ್ಟತೆ ಕಿರು ದಾರಿಯಾಗಿ ತೆರೆದುಕೊಳ್ಳುತ್ತದೆ.

ಒಟ್ಟಾರೆ ಸೀತೆಯ ಪಾತ್ರವೂ ಎಲ್ಲಾ ಕಾವ್ಯಗಳಲ್ಲೂ ಎರಕ ಹೊಯ್ದಂತೆ ಕಂಡರೂ, ಕಾರುಣ್ಯ ಮೂರ್ತಿಯಂತೆ ರೂಪಿಸಿದರೂ, ಗಂಡನ ಪಡಿ ನೆರಳಂತೆ ಹಿಂಬಾಲಿಸುವ, ಅನುಪಮ ಸ್ತ್ರೀಯಂತೆ ಗೋಚರಿಸಿದರೂ, ಪ್ರತಿ ಕಾವ್ಯಗಳು ಅವಳ ಉಸಿರನ್ನು ಆಲಿಸಿರುವ, ಅವಳ ಕಷ್ಟಕ್ಕೆ ಸಂವಾದಿಸಿರುವ ರೀತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಪಾತ್ರದ ನೈಜ ಚಿತ್ರಣ, ಗ್ರಹಿಸಿರುವ ಬಗೆಯಲ್ಲಿ ಉಂಟಾದ ವ್ಯತ್ಯಾಸ, ನಿರ್ವಹಣೆಯಲ್ಲಿರುವ ತರತಮಗಳ ಚಿತ್ರಣ ಲಭಿಸುತ್ತದೆ. ಈ ಅಧ್ಯಯನವು ತನ್ಮಯತೆಯಿಂದ ಈ ಕಾರ್ಯವನ್ನು ಮಾಡಲು ಪ್ರಯತ್ನಿಸಿದೆ.

ಅಧ್ಯಯನದ ವ್ಯಾಪ್ತಿ

ಭಾರತದ ಹಲವು ಭಾಷೆಗಳಲ್ಲಿ ವಾಲ್ಮೀಕಿ ರಾಮಾಯಣವನ್ನು ಆಧರಿಸಿ ಸಾಕಷ್ಟು ರಾಮಾಯಣ ಪಠ್ಯಗಳು ರಚಿತವಾಗಿವೆ. ಹಾಗೆಯೇ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಜನಪದ (ಜನಸಮುದಾಯ), ಜೈನ, ವೈದಿಕ ನಿಲುವಿನ ಪ್ರತೀಕವಾಗಿ **'ಕನ್ನಡ ರಾಮಾಯಣ'**ಗಳು ಹಲವು ಪ್ರಕಾರಗಳಲ್ಲಿ ರಚನೆಗೊಂಡಿವೆ. ಅವುಗಳಲ್ಲಿ ಮಹಾಕಾವ್ಯ, ನಾಟಕಗಳು, ಗೀತ ನಾಟಕಗಳು, ಕಥೆಗಳು, ಕಾದಂಬರಿ, ಗದ್ಯ ಕಥನಗಳು, ಜನಪದ ಕಾವ್ಯಗಳು, ಪಾತ್ರಗಳಿಗೆ ಸಂಬಂಧಿಸಿದಂತೆ ಭಾವಗೀತೆಗಳು, ಭಕ್ತಿಗೀತೆಗಳು, ಯಕ್ಷಗಾನ ಪ್ರಸಂಗಗಳು, ಬಯಲಾಟಗಳು, ವೃತ್ತಿ ನಾಟಕಗಳು, ಆಧುನಿಕ ರಾಮಾಯಣ ಕಾವ್ಯಗಳನ್ನು ಹೆಸರಿಸಿಕೊಳ್ಳಬಹುದಾಗಿದೆ. ಈ ಪ್ರಕಾರಗಳಿಗೆಲ್ಲಾ ವಸ್ತು ಒಂದೇ ಆಗಿದ್ದರೂ, ಕನ್ನಡದ ಕವಿಗಳು ಬೇರೆ ಬೇರೆ ಹೆಸರುಗಳಿಂದಲೇ ಕರೆದಿದ್ದಾರೆ. ಹಾಗೆಯೇ ಕಥಾವಸ್ತುವನ್ನೂ ಸಹ **'ಪೂರ್ವ'** ಮತ್ತು **'ಉತ್ತರ'** ರಾಮಾಯಣಗಳೆಂದೂ ವಿಭಾಗಿಸಿದ್ದಾರೆ. ಆ ಮೂಲಕ ವಸ್ತುವಿನ ನಿರೂಪಣೆಯ ಏಕರೂಪತೆಯಿಂದಲೂ ಹೊರ ಬರುವಂತೆ ಮಾಡಿದ್ದಾರೆ.

ಈ ನೆಲದಲ್ಲಿ ರಾಮಾಯಣ ಪಠ್ಯಗಳ ರಚನೆಯು ಎಷ್ಟರ ಮಟ್ಟಿಗೆ ನಡೆದಿದೆ ಎಂಬುದನ್ನು ಕವಿ ಕುಮಾರವ್ಯಾಸನು **"ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂಥಿಣಿಯ ರಘುವರನ ಚರಿತೆಯಲಿ ಕಾಲಿಡಲು ತೆರಪಿಲ್ಲ"** ಎಂದು ಉದ್ಗರಿಸಿದ್ದಾನೆ. ಕುಮಾರವ್ಯಾಸನು 'ಭಾರತ'ದ ಕಥೆಯತ್ತಲೂ ಕವಿಗಳು ಗಮನಹರಿಸಬೇಕೆಂದು ಹೇಳಿದಂತಿದೆ. ಇಲ್ಲಿ 'ರಾಮಾಯಣದ ಭಾರ'ಕ್ಕೆ ಸೀಮಿತಗೊಳಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಸಮಗ್ರ ರಾಮಾಯಣಗಳ ಅಧ್ಯಯನವಂತೂ ಅಸಾಧ್ಯವೆನ್ನಬಹುದು.

ಕನ್ನಡ ಉತ್ತರ ರಾಮಾಯಣದ ಗತಿ ಕಿರಿದು. ಅದು ಒಳಗೊಂಡಿರುವ ವಸ್ತು–ವಿಷಯಗಳ ದೃಷ್ಟಿಯಿಂದ ವಿಸ್ತಾರವಾದ ನಡೆಯನ್ನು ಹೊಂದಿದೆ. ಕನ್ನಡ ಉತ್ತರ ರಾಮಾಯಣಗಳ ರಚನೆ, ಸ್ವರೂಪಗಳ ಆಧಾರದ ಮೇಲೆ ಅನೇಕ ವಿವಿಧ ರಾಮಾಯಣ ಕೃತಿಗಳಿವೆ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ, ಉತ್ತರ ರಾಮಾಯಣದ ರಚನೆಯ ಮಾದರಿಗಳಲ್ಲಿ ಸೀತೆಯ ಪಾತ್ರವು ಅಷ್ಟೊಂದು ವಿಸ್ತಾರವಾದ ಗತಿಯನ್ನು ಹೊಂದಿಲ್ಲ. ರಾಮನೇ ಕೇಂದ್ರಿತವಾದ ಪೂರ್ವ, ಉತ್ತರ ಹಾಗೂ ಪೂರ್ಣ ರಾಮಾಯಣಗಳು ಸಾಕಷ್ಟಿವೆ.

ಕಾವ್ಯಗಳು, ನಾಟಕಗಳು, ಕಾದಂಬರಿಗಳು, ಗದ್ಯ ಕೃತಿಗಳು, ವಿಮರ್ಶಾ ಕೃತಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ, ಕನ್ನಡದಲ್ಲಿ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ರಚನೆಯಾದರೂ, ಎಲ್ಲವೂ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿಲ್ಲ.

ಸುಮಾರು 15ನೇ ಶತಮಾನದಿಂದ 19ನೇ ಶತಮಾನದವರೆಗೆ ಕನ್ನಡದಲ್ಲಿ ರಚಿತವಾಗಿರುವ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಕಾವ್ಯ ಕೃತಿಗಳಲ್ಲಿ ಲಕ್ಷ್ಮೀಶನ ಭಾಗಶಃ ಕೃತಿಯನ್ನು ಹೊರತು ಪಡಿಸಿದರೆ, ಸಂಶೋಧನೆಗೆ ಆಯ್ದುಕೊಂಡ ಐದು ಕೃತಿಗಳು ಪೂರ್ಣ ಪ್ರಮಾಣದಲ್ಲಿದ್ದು, ಉತ್ತರ ರಾಮಾಯಣದ ವಸ್ತುಗಳನ್ನು ಕೃತಿಗಳಲ್ಲಿ ತಿಳಿಸುವುದಾಗಿದೆ. ಕನ್ನಡದಲ್ಲಿ **'ಉತ್ತರ ರಾಮಾಯಣ'** ಕಥಾ ವಸ್ತುವನ್ನು ಒಳಗೊಂಡ ಭಾಗಶಃ ಕೃತಿ ಲಕ್ಷೀಶನ **'ಜೈಮಿನಿ ಭಾರತ'** ವು ಪದ್ಮಪುರಾಣ ಪರಂಪರೆಗೆ ಸೇರಿರುವ ವಾಲ್ಮೀಕಿ ವೈದಿಕ ಪರಂಪರೆಯನ್ನು, ಸಂಸ್ಕೃತದ ಜೈಮಿನಿ ಭಾರತವನ್ನು ಅನುಸರಿಸಿರುವ ಕಾವ್ಯವಾಗಿದೆ. ಈ ಕೃತಿಯಲ್ಲಿ ಬರುವ ರಾಮಾಯಣ ಕಥೆ ಉತ್ತರ ರಾಮಾಯಣದ ವಸ್ತುವನ್ನಿರಿಸಿಕೊಂಡು ರಚಿತವಾಗಿರುವುದರಿಂದ ಈ ಕೃತಿಯೊಂದಿಗೆ ನಾಗಚಂದ್ರನ **'ಪಂಪರಾಮಾಯಣ'**, ಮುದ್ದಣ್ಣನ **'ರಾಮಾಶ್ವಮೇಧ'** ಕೃತಿಗಳಲ್ಲಿನ ಸೀತಾ ಪಾತ್ರವನ್ನು ಪ್ರಸ್ತುತ ಸಂಶೋಧನಾ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಜೈನ ಪರಂಪರೆಯನ್ನು ಅನುಸರಿಸಿ ಕನ್ನಡದ ಮೊದಲ

ರಾಮಾಯಣವಾದ ನಾಗಚಂದ್ರನ 'ಪಂಪರಾಮಾಯಣ' ಕೃತಿಯಲ್ಲಿ ಹಾಗೂ ವೈದಿಕ ಪರಂಪರೆಯನ್ನು, ಸಂಸ್ಕೃತದ 'ಜೈಮಿನಿ ಭಾರತ' ವನ್ನು, ಪದ್ಮಪುರಾಣವನ್ನು ಅನುಸರಿಸಿದ ಲಕ್ಷ್ಮೀಶನ 'ಜೈಮಿನಿ ಭಾರತ' ಕೃತಿಯಲ್ಲಿ ಬರುವ ಕಥೆ ರಾಮಾಯಣದ ಕಥೆಯಾಗಿದ್ದು, ಈ ಕೃತಿಯಲ್ಲಿನ ಉತ್ತರ ರಾಮಾಯಣದ ವಸ್ತುವುಳ್ಳ ಸನ್ನಿವೇಶಗಳೇ ಮುಂದಿನ ಕವಿಗಳಿಗೆ ಉತ್ತರ ರಾಮಾಯಣ ಪೂರ್ಣ ಕಾವ್ಯಗಳನ್ನು ರಚಿಸಲು ಪ್ರೇರಣೆಯಾಗಿದೆ. ಮುಂದೆ ಲಕ್ಷ್ಮೀಶನನ್ನು ಅನುಸರಿಸಿ ಗದ್ಯದಲ್ಲಿ ಕವಿ ಮುದ್ದಣ್ಣ 'ರಾಮಾಶ್ವಮೇಧ' ಕೃತಿಯನ್ನು ರಚಿಸಿದರು. ಉತ್ತರ ರಾಮಾಯಣದ ಭಾಗವು ಪ್ರಕ್ಷಿಪ್ತ ಎಂಬ ನೆಲೆಯಿಂದ ಆ ಭಾಗಕ್ಕೆ ಆದ್ಯತೆ ನೀಡದೆ, ಅದೇ ಸಂದರ್ಭದಲ್ಲಿ ಕನ್ನಡದ 'ತೊರವೆ ರಾಮಾಯಣ' ಕೃತಿಯು ರಚನೆಯಾಯಿತು. ಈ ಕೃತಿಯ ಕಡೆಗೆ ಗಮನ ಕೊಡದೆ, ಉತ್ತರ ರಾಮಾಯಣದ ವಸ್ತುವನ್ನಿಟ್ಟು, ಕೃತಿ ರಚಿಸಲು ಕವಿಗಳು ಮೂಲ ಕೃತಿಯ ಕಡೆಗೆ ಗಮನ ಹರಿಸಿ, ತಮ್ಮ ಕೃತಿ ರಚನೆಯ ಮೂಲಕ ಉತ್ತರ ರಾಮಾಯಣ ಕಾವ್ಯಗಳಿಗೆ ಸ್ಫೂರ್ತಿ ನೀಡಿದರು. ಹೀಗೆ ವಾಲ್ಮೀಕಿ ಪರಂಪರೆಯ ರಾಮಾಯಣವನ್ನು ಅನುಸರಿಸಿ ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ ಕವಿಗಳು, ಪದ್ಮಪುರಾಣವನ್ನು ಅನುಸರಿಸಿ ಸೋಸಲೆ ಅಯ್ಯಶಾಸ್ತ್ರಿ ತಮ್ಮ ಕೃತಿಗಳಿಗೆ ಪ್ರೇರಣೆ ಪಡೆದಿದ್ದಾರೆ.

ಐದು ಪ್ರಧಾನ ಕಾವ್ಯ ಪಠ್ಯಗಳು: ನಾರಾಯಣ ಕವಿಯ **'ಉತ್ತರ ರಾಮಕಥೆ'**, ನರಸ ಕವಿಯ **'ಉತ್ತರ ರಾಮಕಥಾ'**, ತಿರುಮಲೆ ವೈದ್ಯ ಕವಿಯ **'ಉತ್ತರ ರಾಮಾಯಣಂ'**, ಯೋಗೀಂದ್ರ ಕವಿಯ **'ಉತ್ತರ ರಾಮಾಯಣಂ'**, ಸೋಸಲೆ ಅಯ್ಯಶಾಸ್ತ್ರಿಗಳ **'ಶೇಷ ರಾಮಾಯಣಂ'** ಗಳಾಗಿವೆ. ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರರ ಉತ್ತರ ರಾಮಾಯಣ ಕೃತಿಗಳು ವಾಲ್ಮೀಕಿಯ ವೈದಿಕ ಪರಂಪರೆಯನ್ನು ಅನುಸರಿಸಿದರೆ, ಸೋಸಲೆ ಅಯ್ಯಶಾಸ್ತ್ರಿಯವರ ಶೇಷ ರಾಮಾಯಣವು ಪದ್ಮಪುರಾಣದ ಪೌರಾಣಿಕ ಪರಂಪರೆಯನ್ನು ಅನುಸರಿಸಿದ ಕೃತಿಗಳಾಗಿವೆ. ಪ್ರಸ್ತುತ ಅಧ್ಯಯನದಲ್ಲಿ ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗಿಂದ್ರ, ಸೋಸಲೆ ಅಯ್ಯಶಾಸ್ತ್ರಿಗಳ ಕನ್ನಡ ಉತ್ತರ ರಾಮಾಯಣ ಕೃತಿಗಳಲ್ಲಿ ಪ್ರಧಾನ ಪಾತ್ರವಾಗಿರುವ ಸೀತೆಯ ಕುರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸರಿ ಸುಮಾರು ಕ್ರಿ.ಶ 1600ರ ಕಾಲದಲ್ಲಿದ್ದಂತಹ ಬ್ರಾಹ್ಮಣ ಕವಿ ನಾರಾಯಣನು **'ಉತ್ತರ ರಾಮಕಥೆ'** ಎಂಬ ಕಾವ್ಯವನ್ನು ರಚಿಸಿದ್ದಾನೆ. ಈ ಹೆಸರಿದ್ದರೂ 'ಉತ್ತರಕಾಂಡ ರಾಮಾಯಣ' ಎಂದೇ ಇದು ಪ್ರಚಾರದಲ್ಲಿದೆ. ಮಂಗೇಶರಾಯರು ಸಹ ತಮ್ಮ ಬರಹದಲ್ಲಿಯೂ

ನಾರಾಯಣನ 'ಉತ್ತರಕಾಂಡ ರಾಮಾಯಣ' ಎಂಬ ಹೆಸರನ್ನೇ ಬಳಸಿದ್ದಾರೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಇದು ಒಟ್ಟು 46 ಸಂಧಿಗಳ 2138 ಪದ್ಯಗಳನ್ನು ಒಳಗೊಂಡಿದೆ. ನಾರಾಯಣನು ಶ್ರೀರಾಮನ ಪಟ್ಟಾಭಿಷೇಕದ ನಂತರದ ಕಥೆಯನ್ನೇ ಪ್ರಧಾನವಾಗಿ ಹೇಳಿದ್ದಾನೆ. ಪೂರ್ವ ವಿಭಾಗ ಮತ್ತು ಉತ್ತರ ವಿಭಾಗ ಎಂದು ಎರಡು ಭಾಗಗಳಾಗಿ ಈ ಕೃತಿಯು ಮುದ್ರಣಗೊಂಡಿದೆ.

ಕನ್ನಡದಲ್ಲಿ **'ಉತ್ತರ ರಾಮಕಥಾ'** ಕಾವ್ಯವನ್ನು ಬರೆದ ನರಸ ಕವಿ ವೈದಿಕ ಧರ್ಮಕ್ಕೆ ಸೇರಿದವನಾಗಿದ್ದಾನೆ. ಕರ್ಣಾಟಕ ಕವಿ ಚರಿತೆಕಾರರು ಈತನ ಹೆಸರನ್ನು 'ನರಸಪ್ಪ' ಎಂದು ಉಲ್ಲೇಖಿಸಿದ್ದಾರೆ. ಇವನ ಕಾವ್ಯದಲ್ಲಿ ಕವಿ 'ನರಸಾ' ಎಂದೇ ಉಕ್ತವಾಗಿದೆ. ಕವಿಚರಿತೆಯಲ್ಲಿ ಇವನ ಕಾಲ ಕ್ರಿ.ಶ 1612 ಎಂದು ಹೇಳಲಾಗಿದೆ. ಈ ನರಸನ ಕಾವ್ಯವೇ ಇದುವರೆಗೂ ಕನ್ನಡದಲ್ಲಿ ದೊರಕಿರುವ ಉತ್ತರ ರಾಮಾಯಣಗಳಿಗಿಂತಲೂ ದೊಡ್ಡದಾಗಿದೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿದ್ದು, ಒಟ್ಟು 56 ಸಂಧಿಗಳು, 2675 ಪದ್ಯಗಳಿಂದ ಕೂಡಿದೆ. ಇವುಗಳಲ್ಲಿ 85 ಪದ್ಯಗಳನ್ನುಳ್ಳ 19ನೇ ಸಂಧಿಯೇ ದೊಡ್ಡದಾಗಿದೆ. 12ನೇ ಸಂಧಿ ಚಿಕ್ಕದ್ದಾಗಿದ್ದು, 19 ಪದ್ಯಗಳನ್ನು ಹೊಂದಿದೆ.

ತಿರುಮಲೆ ವೈದ್ಯನು ಬ್ರಾಹ್ಮಣ ಕವಿ. ಇವನ ಕಾಲ ಸುಮಾರು ಕ್ರಿ.ಶ 1650. ಈತನು ಕನ್ನಡದಲ್ಲಿ **'ಉತ್ತರ ರಾಮಾಯಣಂ'** ಎಂಬ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ ರಾಮಾಯಣದ ಉತ್ತರಕಾಂಡದ ಕಥನವನ್ನು ಕನ್ನಡಿಸಿದ್ದಾನೆ. ತೊರವೆ ರಾಮಾಯಣವನ್ನು ರಚಿಸಿದ ಕುಮಾರ ವಾಲ್ಮೀಕಿಯು ಕನ್ನಡಿಸದೆ ಬಿಟ್ಟಿರುವ ಕಾಂಡವನ್ನು ರಚಿಸಿದ್ದಾನೆ. ಅಂದರೆ ವಾಲ್ಮೀಕಿ ಮಹರ್ಷಿ ಪ್ರಣೀತವಾದ ಉತ್ತರ ರಾಮಾಯಣವೇ ಇದಕ್ಕೆ ಮೂಲವಾಗಿದೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿದೆ. ಇದರಲ್ಲಿ 20 ಸಂಧಿಗಳಿವೆ. 1021 ಪದ್ಯಗಳಿವೆ. 8 ನೇ ಸಂಧಿ ದೊಡ್ಡದ್ದಾಗಿದ್ದು, 98 ಪದ್ಯಗಳನ್ನು ಹೊಂದಿದೆ. 1ನೇ ಸಂಧಿ ಚಿಕ್ಕದಾಗಿದ್ದು, 14 ಪದ್ಯಗಳು ಮಾತ್ರ ಇವೆ.

ಕವಿಚರಿತೆಕಾರರು ಊಹಿಸಿದಂತೆ ಯೋಗೀಂದ್ರನು ಕ್ರಿ.ಶ 1650 ರಲ್ಲಿದ್ದಂತಹ ಒಬ್ಬ ಬ್ರಾಹ್ಮಣ ಕವಿ. ಈ ಕವಿಯು 48 ಸಂಧಿಗಳಲ್ಲಿ 2463 ಷಟ್ಪದಿಗಳಲ್ಲಿ ತನ್ನ ಕಾವ್ಯ **'ಉತ್ತರ ರಾಮಾಯಣಂ'** ವನ್ನು ರಚಿಸಿದ್ದಾನೆ. ಇದರಲ್ಲಿ ಹೆಚ್ಚಾಗಿ ಕುಸುಮ ಷಟ್ಪದಿಗಳಿವೆ. ಜೊತೆಗೆ ರಗಳೆ, ವಾರ್ಧಕ ಷಟ್ಪದಿಗಳಿವೆ. ಕವಿಗೆ ಸೂಕ್ತವಾದ ವೈವಿಧ್ಯ ಪೂರ್ಣವಾದ ಛಂದಸ್ಸನ್ನು ಒಳಗೊಂಡಿದೆ. ಯೋಗೀಂದ್ರನ ಉತ್ತರ ರಾಮಾಯಣ ಕಾವ್ಯವನ್ನು ಪೂರ್ವಾರ್ಧ ಮತ್ತು ಉತ್ತರಾರ್ಧ ಎಂದು

ವಿಭಾಗಿಸಬಹುದಾಗಿದೆ. ಯೋಗೀಂದ್ರನು ತನ್ನ ಕಾವ್ಯಕ್ಕೆ ವಾಲ್ಮೀಕಿ ರಾಮಾಯಣವೇ ಆಕರವಾಗಿದೆ ಎಂಬುದನ್ನು 47ನೇ ಸಂಧಿಯ 66ನೇ ಪದ್ಯದಲ್ಲಿ ಸ್ವತಃ ಹೇಳಿದ್ದಾನೆ.

ಕನ್ನಡ ಸಾಹಿತ್ಯವು ಆಧುನಿಕ ಯುಗವನ್ನು ಪ್ರವೇಶ ಮಾಡುತ್ತಿದ್ದ ಸಂಧಿ ಕಾಲದಲ್ಲಿ ಸೋಸಲೆ ಅಯ್ಯಶಾಸ್ತ್ರಿ (1854–1934) ಕಾವ್ಯ ಮತ್ತು ನಾಟಕಗಳನ್ನು ರಚಿಸಿದವನು. ಈತನು ಕ್ರಿ.ಶ 1901 ರಲ್ಲಿ ವಾರ್ಧಕ ಷಟ್ಪದಿಯಲ್ಲಿ **'ಶೇಷ ರಾಮಾಯಣಂ'** ಎಂಬ ಕಾವ್ಯವನ್ನು ರಚಿಸಿದನು. ಇದರ ಉದ್ದೇಶವು ಉತ್ತರ ರಾಮಾಯಣದ 'ರಾಮಾಶ್ವಮೇಧ' ದ ಕಥಾ ಭಾಗವನ್ನು, ಪದ್ಮಪುರಾಣೋಕ್ತ ರೀತಿಯಿಂದ ಸುಲಭವಾಗಿ ತಿಳಿಯುವಂತೆ ನಿರೂಪಣೆ ಮಾಡುವುದಾಗಿತ್ತು. ಈ 'ಶೇಷ ರಾಮಾಯಣಂ' ಕೃತಿಯು ಒಟ್ಟು 34 ಸಂಧಿಗಳ 1326 ಪದ್ಯಗಳನ್ನು ಒಳಗೊಂಡಿದೆ. ಇದರ 8ನೇ ಸಂಧಿ ದೊಡ್ಡದ್ದಾಗಿದ್ದು, 85 ಪದ್ಯಗಳಿವೆ. ಮೊದಲ ಸಂಧಿ ಚಿಕ್ಕದ್ದಾಗಿದ್ದು 19 ಪದ್ಯಗಳಿವೆ.

ಪ್ರಸ್ತುತ ಅಧ್ಯಯನವು ಈ ಐದು ಕಾವ್ಯಗಳನ್ನು ಆಕರ ಪಠ್ಯಗಳನ್ನಾಗಿ ಇಟ್ಟುಕೊಂಡಿದೆ. ಕನ್ನಡದಲ್ಲಿ ಉತ್ತರ ರಾಮಾಯಣ ವಸ್ತುವನ್ನು ನಿರೂಪಿಸಿದ ಈ ಕಾವ್ಯಗಳನ್ನು ಅನುಲಕ್ಷಿಸಿ ಪೂರಕವಾಗಿಯೂ, ಸಾಂದರ್ಭಿಕವಾಗಿಯೂ ಕಥಾ 'ವಸ್ತು'ವನ್ನು ಚರ್ಚಿಸಿದ ಸಂಶೋಧನಾ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇವು ಅಧ್ಯಯನಕ್ಕೆ ಆನುಷಂಗಿಕ ಆಕರಗಳಾಗಿವೆ. ಇವುಗಳೆಲ್ಲವುಗಳ ತಾತ್ವಿಕ ನಿಲುವುಗಳ ನೆರವಿನಿಂದ ಪ್ರಸ್ತುತ ಅಧ್ಯಯನವನ್ನು ರೂಪಿಸಲು ಪ್ರಯತ್ನಿಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಸಂಶೋಧನಾ ಅಧ್ಯಯನದ ಶೀರ್ಷಿಕೆ **'ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯಗಳಲ್ಲಿ ಸೀತೆ'** ಎಂಬುದಾಗಿದೆ. ಈ ಶೀರ್ಷಿಕೆಯಲ್ಲಿ ಕನ್ನಡ ಉತ್ತರ ರಾಮಾಯಣದಲ್ಲಿ ರಚಿತವಾದ ಪೂರ್ಣ ಕಾವ್ಯಗಳನ್ನು ಮೂಲ ಆಕರವಾಗಿಟ್ಟುಕೊಳ್ಳಲಾಗಿದೆ. ಇವುಗಳ ರಚನೆಯು ಯಾವ ಕಾಲಘಟ್ಟಗಳಲ್ಲಿ ಆಗಿವೆ?, ಅವುಗಳ ವೈವಿಧ್ಯತೆಯೇನು?, ಎಂಬುವುದನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅವುಗಳ ವಿಶೇಷತೆಗಳು, ಮಹತ್ವಗಳು ತಿಳಿಯುತ್ತದೆ. ಕೇವಲ ಮೂಲವಸ್ತುವಿಗೆ ಸೀಮಿತಗೊಳಿಸಿಕೊಳ್ಳದೆ, ಆ ವಸ್ತುವಿಗೆ ರೂಪಿಸಿಕೊಂಡ ಆಶಯಗಳನ್ನು ವಿಶ್ಲೇಷಿಸಲು ವಿಸ್ತರಿಸಿಕೊಳ್ಳಲಾಗಿದೆ.

1.ಸಾಹಿತ್ಯ ಕೃತಿಗಳ ಅಧ್ಯಯನ

ರಾಮಾಯಣಗಳನ್ನು ಕುರಿತಂತೆ ಈವರೆಗೆ ಭಿನ್ನ ಭಿನ್ನ ರೀತಿಯಲ್ಲಿ ತೌಲನಿಕವಾಗಿ, ಪೂರ್ಣ ಕೃತಿಯೊಂದನ್ನು ಇಟ್ಟುಕೊಂಡು, ಪಾತ್ರಗಳ ವಿವೇಚನೆಯನ್ನು, ವಸ್ತುವನ್ನು ಕುರಿತಾದಂತೆ ಹಲವು ಅಧ್ಯಯನಗಳು ನಡೆದಿವೆ ಹಾಗೂ ನಡೆಯುತ್ತಾ ಇವೆ. ಉತ್ತರ ರಾಮಾಯಣದ ಕೃತಿಗಳ ಪಾತ್ರಗಳ ಕುರಿತು ಆಳವಾದ ಅಧ್ಯಯನ ನಡೆದಿಲ್ಲ. ಆದ್ದರಿಂದ ಈ ಅಧ್ಯಯನವು ಕನ್ನಡದ ಉತ್ತರ ರಾಮಾಯಣಕ್ಕೆ ಸಂಬಂಧಪಟ್ಟ ಪೂರ್ಣ ಪ್ರಮಾಣದ ಮೂಲ ಕೃತಿಗಳನ್ನು ಪ್ರಮುಖವಾಗಿ ಒಳಪಡಿಸಿ, ಅಲ್ಲಿ ಸೀತಾ ಪಾತ್ರವನ್ನು ಗುರುತಿಸಿ, ಉತ್ತರ ರಾಮಾಯಣದ ಮೇಲೆ ಬಂದಿರುವ ವಿಮರ್ಶೆಗಳನ್ನು, ಜೊತೆಗೆ ಇತರೆ ಸಂಶೋಧನಾ ಬರಹಗಳನ್ನು ಬಳಸಿಕೊಂಡು ಅನುಲಕ್ಷಿಸಿದ ಕನ್ನಡ ರಾಮಾಯಣ ಕೃತಿಗಳಲ್ಲಿ ಹಾಗೂ ಕನ್ನಡದ ಜನಪದ ರಾಮಾಯಣಗಳಲ್ಲಿ ಸೀತೆ ಹೇಗೆ ಚಿತ್ರಿತಳಾಗಿದ್ದಾಳೆ ಎಂಬುದನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ.

2. ವಿಶ್ಲೇಷಣಾ ವಿಧಾನ

ಪ್ರಸ್ತುತ ಅಧ್ಯಯನವು ಈವರೆಗಿನ ಸಂಶೋಧನಾ ಬರಹಗಳನ್ನು, ಲೇಖನಗಳನ್ನು, ಮೌಖಿಕ ಸಾಹಿತ್ಯ ಪ್ರಕಾರಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದೆ. ಈ ಮೂಲಕ ಸೀತೆಯನ್ನು ಕುರಿತ ಸಾಹಿತ್ಯಿಕ ಕೃತಿಗಳನ್ನು ವಿಶ್ಲೇಷಣಾತ್ಮಕ ಹಾಗೂ ವಿಮರ್ಶಾತ್ಮಕ ವಿಧಾನಗಳ ಮೂಲಕ ಚರ್ಚಿಸಲಾಗಿದೆ. ಪ್ರತಿ ಕೃತಿಯಲ್ಲೂ ಸೀತೆಯ ಪಾತ್ರವನ್ನು ಕಟ್ಟಿದ ಬಗೆ, ಅವಳ ಬಗ್ಗೆ ಕವಿಗಳ ಗ್ರಹಿಕೆಗಳನ್ನು ಜೊತೆ ಜೊತೆಗೆ ವಿಶ್ಲೇಷಿಸುತ್ತಾ, ವಿಮರ್ಶೆಗೆ ಹಚ್ಚಲಾಗಿದೆ. ಕವಿ ಪಾತ್ರವೊಂದನ್ನು ನಿರ್ಮಿಸುವಾಗ ಆತನ ಮೇಲೆ ಬೀರಿದ ಪ್ರಭಾವವನ್ನು, ಅನಿವಾರ್ಯತೆಗಳನ್ನು ಕೂಡಾ ಗ್ರಹಿಸಲಾಗಿದೆ. ಜನಪದ ಪಠ್ಯಗಳ ಸಾಂಸ್ಕೃತಿಕ ವಿವರಣೆ, ಅದರ ಅರ್ಥ ಇವುಗಳನ್ನು ಸಮುದಾಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

3. ತೌಲನಿಕ ವಿಧಾನ

ಕನ್ನಡ ಉತ್ತರ ರಾಮಾಯಣಗಳಲ್ಲಿ ಸೀತೆಯನ್ನು ಕುರಿತಂತೆ ಪ್ರಧಾನವಾಗಿ ಆರಿಸಿಕೊಂಡು ಕೃತಿಗಳಲ್ಲಿ ಸೀತೆಯನ್ನು ಹೇಗೆ ಚಿತ್ರಿಸಲಾಗಿದೆ, ಅನುಲಕ್ಷಿಸಿದ ಕನ್ನಡ ರಾಮಾಯಣ ಕೃತಿಗಳಲ್ಲಿ ಸೀತೆ, ಹಾಗೂ ಜನಪದ ರಾಮಾಯಣಗಳಲ್ಲಿ ಸೀತೆ ಹೇಗೆ ಚಿತ್ರಿತಳಾಗಿದ್ದಾಳೆ ಎಂಬುದನ್ನು

ಗ್ರಹಿಸಲಾಗಿದೆ. ತೌಲನಿಕ ಅಧ್ಯಯನದಲ್ಲಿ ಜನಪದ–ಜಾನಪದ ಪಠ್ಯಗಳ ನಡುವೆ ಇರುವ ಸಾಮ್ಯತೆ ಹಾಗೂ ಭಿನ್ನತೆ, ಜನಪದ ಹಾಗೂ ಶಿಷ್ಟ ರಾಮಾಯಣ ನಡುವೆ ಇರುವ ಸಾಮ್ಯತೆ ಹಾಗೂ ಭಿನ್ನತೆ, ಮೂಲ ಸ್ವರೂಪ- ಸೀತಾ ಪಾತ್ರ ಸೃಷ್ಟಿಯಲ್ಲಿ ಕವಿಗಳು ಕೌಶಲ್ಯ ತೋರಿದ ದಾರಿ–ಭಿನ್ನತೆಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಸೀತಾ ಪಾತ್ರದ ಅಧ್ಯಯನವೆಂದರೆ ಅದೊಂದು ಕೃತಿ ಕೇಂದ್ರಿತ ಅಧ್ಯಯನವಾಗುತ್ತದೆ. ಹಾಗಾಗಿ ಕವಿಗಳ ಸಂಕ್ಷಿಪ್ತವಾದ ಬದುಕಿನ ಹಿನ್ನೆಲೆ, ಕಾವ್ಯಗಳ ರಚನಾ ಕಾಲದ ಒತ್ತಡಗಳಿಗೆ ಆದ್ಯತೆ ನೀಡಲಾಗಿದೆ. ಈ ಐದು ಕಾವ್ಯಗಳಲ್ಲಿ ಕಂಡು ಬರುವ ಸೀತಾ ಪಾತ್ರದ ಸನ್ನಿವೇಶ, ಭಾಷಾ ಬಳಕೆ, ವರ್ಣನೆ, ಅಲಂಕಾರಗಳು ಮೊದಲಾದಂತಹ ಅಭಿವ್ಯಕ್ತಿ ನೆಲೆಯಲ್ಲಿ ವ್ಯಾಖ್ಯಾನಿಸಲು ಯತ್ನಿಸಲಾಗಿದೆ. ಸೀತೆಯ ಪಾತ್ರದ ವಿವಿಧ ವಿನ್ಯಾಸಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಅಲ್ಲಿ ಪುರುಷ ಕೇಂದ್ರಿತ ಪ್ರಭುತ್ವದ ಧೋರಣೆಗಳನ್ನು, ಸ್ತ್ರೀಯ ನೋವು, ಸಂಕಟಗಳನ್ನು ಹಾಗೂ ಮೌಲ್ಯಗಳನ್ನು ಮುನ್ನಲೆಗೆ ತಂದು ಸ್ತ್ರೀವಾದಿ ಅಧ್ಯಯನದ ನೆಲೆಗಳನ್ನು ವಿಶ್ಲೇಷಿಸಲಾಗಿದೆ.

ಈವರೆಗಿನ ಅಧ್ಯಯನಗಳ ಸಮೀಕ್ಷೆ

ಕನ್ನಡ ಸಾಹಿತ್ಯದಲ್ಲಿ ಪೂರ್ವ ರಾಮಕಥಾ ವಸ್ತು ಒಳಗೊಂಡಿರುವ ರಾಮಾಯಣ ಕಾವ್ಯಗಳ ಕುರಿತಾಗಿ ಆಗಿರುವ ಅಧ್ಯಯನಗಳಿಗೆ ಹೋಲಿಸಿದರೆ, ಉತ್ತರ ರಾಮಕಥಾ ಕಾವ್ಯಗಳನ್ನು ಅನುಲಕ್ಷಿಸಿ ಸಾಕಷ್ಟು ಅಧ್ಯಯನಗಳಾಗಿಲ್ಲ. ಅಂದರೆ ಉತ್ತರ ರಾಮಕಥಾ ವಸ್ತುವನ್ನು ಪ್ರಧಾನವಾಗಿ ನಿರೂಪಿಸಿರುವ ಕಾವ್ಯಗಳಿಗೆ ಸಂಬಂಧಿಸಿದ ಅಧ್ಯಯನಗಳ ವ್ಯಾಪ್ತಿ ಕಿರಿದಾಗಿದೆ. ಪ್ರಸ್ತುತ ಸಂಶೋಧನಾ ಅಧ್ಯಯನವು ವ್ಯಾಪ್ತಿಯಲ್ಲಿ ವಿವರಿಸಿಕೊಂಡಂತಹ ಐದು ಕಾವ್ಯಗಳಿಗೆ ಆದ್ಯತೆ ನೀಡಿದೆ. ಹಾಗಾಗಿ ಆ ಕಾವ್ಯಗಳನ್ನೇ ಅನುಲಕ್ಷಿಸಿದಂತಹ ಪ್ರಮುಖ ಬರಹಗಳನ್ನು ಸಂಕ್ಷಿಪ್ತವಾಗಿ ಸಮೀಕ್ಷೆ ಮಾಡುವ ಉದ್ದೇಶವನ್ನು ಈ ಭಾಗವು ಹೊಂದಿದೆ. ಏಕೆಂದರೆ ಇದುವರೆಗಿನ ಅಧ್ಯಯನಗಳು ಕನ್ನಡದ ಉತ್ತರ ರಾಮಾಯಣಗಳನ್ನು ಚರ್ಚಿಸಿದ ನೆಲೆಗಳನ್ನು ಗುರುತಿಸಿಕೊಂಡು ಮುಂದುವರಿಯುವುದು ಅಗತ್ಯವೆಂದು ಭಾವಿಸಲಾಗಿದೆ.

ಕನ್ನಡದಲ್ಲಿ ರಚನೆಯಾದ ಉತ್ತರ ರಾಮಾಯಣ ಕಾವ್ಯಗಳ ಅಧ್ಯಯನಕ್ಕೆ ಒಂದು ವಿಶೇಷತೆಯಿದೆ. ಮೂರು ಶತಮಾನಗಳ ಅವಧಿಯಲ್ಲಿ (ಸು.1600 ರಿಂದ 1854ರ) ರಚನೆಯಾದ ಉತ್ತರ ರಾಮಾಯಣ ಚರಿತ್ರೆಯು ಕಾಲದ ನೆಲೆಯಲ್ಲಿ ವಿಸ್ತಾರತೆಯನ್ನು

ಸಂಕುಚಿತಗೊಳಿಸಿಕೊಂಡಿದೆ. ಕನ್ನಡ ಉತ್ತರ ರಾಮಾಯಣದ ಚರಿತ್ರೆಯ ಕುರಿತ ಅಧ್ಯಯನಕ್ಕೆ ಸಮಗ್ರವಾದ ಮಾಹಿತಿಗಳು ದೊರಕುವುದು ಕಷ್ಟಕರ.

ಇದುವರೆಗಿನ ಕನ್ನಡ ಉತ್ತರ ರಾಮಾಯಣ ಅಧ್ಯಯನದ ಕುರಿತು ಗ್ರಹಿಸಿದಾಗ ಅವುಗಳನ್ನು ಎರಡು ಪ್ರಕಾರದ ಮಾದರಿಗಳಲ್ಲಿ ನೋಡಬಹುದು.

1. ಸಂಶೋಧನಾ ಮಾದರಿ

2. ವಿಮರ್ಶಾತ್ಮಕ ಕೃತಿ ಮಾದರಿ

1. ಸಂಶೋಧನಾ ಮಾದರಿ

ಕನ್ನಡ ಉತ್ತರ ರಾಮಚರಿತೆಯ ನೆಲೆಯಲ್ಲಿ ನಡೆದ ಅಧ್ಯಯನಗಳನ್ನು ಪರಿಗ್ರಹಿಸಿದಾಗ ಪ್ರಮುಖ ಕೃತಿಯೆಂದರೆ: ಟಿ.ಎಂ. ಸರಸ್ವತಿ ಅವರ **'ಕನ್ನಡದಲ್ಲಿ ಉತ್ತರ ರಾಮ ಕಥಾ ಕಾವ್ಯಗಳು'** ಎಂಬ ಸಂಶೋಧನಾ ಕೃತಿ. ಇವರು ಉತ್ತರ ರಾಮಾಯಣ ಕಾವ್ಯಗಳನ್ನೇ ಅನುಲಕ್ಷಿಸಿ ಮೊಟ್ಟಮೊದಲು ಸಂಶೋಧನೆಯನ್ನು ಕೈಗೊಂಡವರು. ಮೈಸೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಮಹಾಪ್ರಬಂಧವು, 2000ರಲ್ಲಿ ಪ್ರಕಟವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಮಹತ್ವಪೂರ್ಣ ಆನುಷಂಗಿಕ ಆಕರಗಳಲ್ಲೊಂದಾಗಿದೆ. ಏಕೆಂದರೆ ಪ್ರಸ್ತುತ ಅಧ್ಯಯನವು ಆಕರವಾಗಿಟ್ಟುಕೊಂಡಿರುವ ಕೃತಿಗಳ ಕುರಿತಾಗಿ ಕನ್ನಡದಲ್ಲಿ ಉತ್ತರರಾಮ ಕಥಾ ಪ್ರಧಾನ ಕಾವ್ಯಗಳ ಭಾಗದಲ್ಲಿ ಪರಿಚಯಾತ್ಮಕವಾಗಿಯೂ, ಸಮಗ್ರವಾಗಿಯೂ ವಿವರಿಸಲು ಯತ್ನಿಸಿದ್ದಾರೆ. ಒಟ್ಟು ಎಂಟು ಅಧ್ಯಾಯಗಳಲ್ಲಿ ತಮ್ಮ ಪ್ರಬಂಧವನ್ನು ಕಟ್ಟಿದ್ದಾರೆ. ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಉತ್ತರ ರಾಮಕಥೆಯ ಉಗಮ–ವಿಕಾಸ–ಪರಂಪರೆ ಮತ್ತು ಕಥಾ ಸ್ವರೂಪವನ್ನು ಸಮಗ್ರವಾಗಿ ವಿಶ್ಲೇಷಿಸಿದ್ದಾರೆ. ಈ ಅಧ್ಯಯನವನ್ನು ಹೊರತುಪಡಿಸಿದರೆ, ಉತ್ತರ ರಾಮಾಯಣ ಕಾವ್ಯಗಳನ್ನು ಅನುಲಕ್ಷಿಸಿ ಮತ್ತಾವ ಗಂಭೀರ ಅಧ್ಯಯನಗಳಾಗಿಲ್ಲವೆಂದೇ ಹೇಳಬಹುದು.

2. ವಿಮರ್ಶಾತ್ಮಕ ಕೃತಿ ಮಾದರಿ

ಕನ್ನಡ ಉತ್ತರ ರಾಮಾಯಣಗಳ ಕುರಿತು ಕನ್ನಡದಲ್ಲಿ ಅನೇಕ ಕೃತಿಗಳು ರಚನೆಯಾಗಿವೆ. ಕೆಲವು ಪೂರ್ಣತೆಯ ಕೃತಿಯಲ್ಲದಿದ್ದರೂ, ಕೃತಿಯ ಕೆಲವು ಭಾಗದಲ್ಲಿ ಉತ್ತರ ರಾಮಾಯಣ

ಕಥೆಯನ್ನು ಒಳಗೊಂಡಿದೆ. ಇದರಂತೆ ಎಸ್. ಎಲ್. ಭೈರಪ್ಪನವರ **'ಉತ್ತರ ಕಾಂಡ'** ಕೃತಿಯು ಉತ್ತರ ರಾಮಾಯಣದ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಕಥೆಯಾಧಾರಿತವಾಗಿ ಗದ್ಯ ರೂಪದಲ್ಲಿ ಹೆಣೆದಿದ್ದಾರೆ. ಈ ಕೃತಿ ಕಾಲ್ಪನಿಕ ಸ್ವರೂಪದಲ್ಲಿದ್ದರೂ ಉತ್ತರ ರಾಮಾಯಣದ ಕಥೆಯನ್ನು ನಿರೂಪಿಸಿದೆ. ಉತ್ತರ ರಾಮಾಯಣದ ಕುರಿತು ರಚನೆಯಾದ ಲಕ್ಷ್ಮಣ ವಿರೂಪಾಕ್ಷ ಜೋಶಿಯವರ **'ಉತ್ತರ ರಾಮಾಯಣ'** ವೆಂಬ ಕೃತಿ ಉತ್ತರ ರಾಮಾಯಣ ಕುರಿತು ಅಧ್ಯಯನಕ್ಕೆ ಪರಾಮರ್ಶನವಾಗಿದೆ. ಈ ಕೃತಿಯು ಉತ್ತರ ರಾಮಾಯಣ ಭಾಗದ ಕಥೆಯನ್ನು ಕಟ್ಟಿಕೊಡುತ್ತದೆ.

ಕೆ. ಕೃಷ್ಣಮೂರ್ತಿ ಅವರ **'ಉತ್ತರ ರಾಮಾಯಣ ಚರಿತೆ'** ಕೃತಿಯು ಉತ್ತರ ರಾಮಾಯಣದ ಕುರಿತ ಆಕರ ಗ್ರಂಥ. ಈ ಕೃತಿಯು ಅನುವಾದಿತ ಕೃತಿಯಾದರೂ ಪೂರ್ಣ ಪ್ರಮಾಣದ ಅಕ್ಷರಶಃ ಅನುವಾದವಲ್ಲ. ಆದರೆ ಉತ್ತರ ರಾಮಾಯಣದ ಕುರಿತಾದ ಸಾಮಾನ್ಯ ತಿಳುವಳಿಕೆಗೆ ಈ ಕೃತಿ ಯೋಗ್ಯ. ಭವಭೂತಿಯ **'ಉತ್ತರ ರಾಮಚರಿತೆ'**ಯು ಛಾಯೆಯಲ್ಲಿ ಕನ್ನಡ ಉತ್ತರ ರಾಮಾಯಣ ಚರಿತೆಯೆಂದು ಕರೆಯಬಹುದಾದರೂ ಅದು ಸಂಸ್ಕೃತದ ಪ್ರಭಾವದಿಂದಲೇ ರಚನೆಯಾಗಿರುವುದಾಗಿದೆ. ಪೋಲಂಕಿ ರಾಮಮೂರ್ತಿ ಅವರ **'ಸೀತಾಯಣ'** ಕೃತಿಯು ರಾಮಾಯಣ ಓದಿನ ಗತಿಯನ್ನು ವಿಶಿಷ್ಟವಾಗಿ ಪರಿಚಯಿಸಿದೆ. ಈ ಕೃತಿಯಲ್ಲಿ ರಾಮಾಯಣವು ಅದು **'ಸೀತಾಯಣ'** ವೆಂದೇ ನಿರ್ದೇಶಿಸಲ್ಪಟ್ಟಿದೆ. ಈ ಕೃತಿಯಲ್ಲಿ ಭಾರತೀಯ ಸಂಸ್ಕೃತಿಯ ಸ್ತ್ರೀ ಪಾತ್ರದ ಮಹತ್ವವನ್ನು ಗುರುತಿಸುವ ಜೊತೆಗೆ ವಾಲ್ಮೀಕಿಯ ಸೀತೆ, ಜನಪದರ ಸೀತೆ, ಉತ್ತರ ರಾಮಾಯಣದ ಸೀತೆ ಮೊದಲಾದವುಗಳ ಬಗ್ಗೆ ವಿಶೇಷ ಗಮನ ಹರಿಸಿರುವುದು ಕಂಡು ಬಂದಿದೆ. ಪ್ರದೀಪ ಕುಮಾರ್ ಅವರ **'ಉತ್ತರ ರಾಮಾಯಣ'** 67 ಭಾಗಗಳಲ್ಲಿ ಚಿತ್ರಿತವಾಗಿರುವ ಈ ಕೃತಿ ಕಥೆಯ ರೂಪದಲ್ಲಿದ್ದು, ತನ್ನ ಶೈಲಿ ಮತ್ತು ಸ್ಪಷ್ಟತೆಯಿಂದ ಓದುಗರನ್ನು ಸೆಳೆಯುವುದಲ್ಲದೆ ರಾಮನ ಪಟ್ಟಾಭಿಷೇಕದ ನಂತರದ ಉತ್ತರ ರಾಮಾಯಣದ ಕಥೆಯನ್ನು ಸುಂದರವಾಗಿ ಚಿತ್ರಿಸಿದೆ.

ಕನ್ನಡದಲ್ಲಿ ರಾಮಾಯಣವನ್ನು ಕುರಿತ ಕೆಲವು ಕೃತಿಗಳಲ್ಲಿ ಉತ್ತರ ರಾಮಾಯಣದ ವಿಚಾರಗಳನ್ನು ತಿಳಿಸುತ್ತವೆ. ಮಾಸ್ತಿಯವರ **'ಉತ್ತರಕಾಂಡ ವಿಚಾರ'**, ಎ.ಎನ್.ಮೂರ್ತಿಯವರ **'ಪೂರ್ವಸೂರಿಗಳೊಡನೆ',** ವರದರಾಯರ **'ಸೀತಾ ಪರಿತ್ಯಾಗ ಪ್ರಸಂಗ'**, ಇವು ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ವಿಮರ್ಶಾ ಕೃತಿಗಳು. ಅ.ನ.ಕೃ ಅವರ **'ಸ್ವರ್ಣಮೂರ್ತಿ'**, ಕುವೆಂಪು ಅವರ **'ಶೂದ್ರತಪಸ್ವಿ', 'ವಾಲ್ಮೀಕಿ ಭಾಗ್ಯ'**, ಚದುರಂಗರ **'ಬಿಂಬ'**, ಗಿರೀಶ ಕಾರ್ನಾಡರ

'ಮಾ ನಿಷಾಧ', ಕೀರ್ತಿನಾಥ ಕುರ್ತಕೋಟಿ ಅವರ **'ರಾಮಾವಸಾನ'** ಮೊದಲಾದ ನಾಟಕಗಳು ಉತ್ತರ ರಾಮಾಯಣಕ್ಕೆ ಸಂಬಂಧಿತವಾಗಿದ್ದು, ಆಯಾ ಲೇಖಕರ ವಿಚಾರ ಲಹರಿಗೆ ಅನುಗುಣವಾಗಿ ರಚಿತವಾದ ಕೃತಿಗಳಾಗಿವೆ.

ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಎಚ್.ವಿ. ಸಾವಿತ್ರಮ್ಮನವರ **'ವಿಮುಕ್ತಿ'** ಕಾದಂಬರಿಯು ಉತ್ತರ ರಾಮಾಯಣದ ಮುನ್ನೋಟದ ಆಕರ ಗ್ರಂಥವಾಗಿದೆ. ಇಲ್ಲಿ ಸೀತೆಯ ಪಾತ್ರವನ್ನು ಆಧುನಿಕ ದೃಷ್ಟಿಕೋನದಿಂದ ನೋಡಲಾಗಿದೆ. ಜೀವನದುದ್ದಕ್ಕೂ ಬೆಂಕಿ, ಕಾಡು, ಶಪಥಗಳಿಂಥ ನೊಂದ ಸೀತೆ ಕೊನೆಯಲ್ಲಿ ಪ್ರತಿಭಟನೆಯ ಸೂಚಕವಾಗಿ ಮೌನವಾಗಿ ಆಶ್ರಮದ ಕಡೆಗೆ ಹೊರಡುವಳೆಂಬ ಮುಕ್ತಾಯವನ್ನು ಲೇಖಕರು ಕೊಡುತ್ತಾರೆ.

ಗ್ರಂಥ ಸಂಪಾದನೆಯಿಂದಲೇ ಕನ್ನಡದಲ್ಲಿ ಸಂಶೋಧನೆ ಆರಂಭವಾಗಿದೆ. ಈ ಸಂಪಾದನಾ ಶಾಸ್ತ್ರಕ್ಕೂ ದೊಡ್ಡ ಇತಿಹಾಸವಿದೆ. ವಸಾಹತು ಕಾಲಘಟ್ಟ ಮತ್ತು ವಸಾಹತೋತ್ತರದ ಕಾಲದಲ್ಲಿ ದೊಡ್ಡ ಮಟ್ಟದಲ್ಲಿ ಗ್ರಂಥ ಸಂಪಾದನಾ ಕಾರ್ಯ ನಡೆದು ಇತ್ತೀಚಿನವರೆಗೂ ಮುಂದುವರೆದಿದೆ. ಈ ಕಾರ್ಯವು ಹಸ್ತಪ್ರತಿಗಳ ಸಂಗ್ರಹ, ಸ್ವೀಕರಣ ವರ್ಜನ, ಪರಿಷ್ಕರಣಗಳಿಗೆ ಮಾತ್ರ ಸೀಮಿತವಾಗದೇ, ಅವುಗಳಿಗೆ ಕವಿ-ಕಾವ್ಯ ವಿವರಣೆಗಳನ್ನು ಒಳಗೊಂಡ ಪ್ರಸ್ತಾವನೆಗೂ ವಿಸ್ತರಿಸಿತು. ಹೀಗೆ ಮಿಶನರಿ ಮತ್ತು ದೇಶೀ ವಿದ್ವಾಂಸರು ಮಾಡಿದ ಗ್ರಂಥ ಸಂಪಾದನಾ ಕಾರ್ಯ ಶ್ಲಾಘನೀಯವಾಗಿದೆ.

ಸೋಸಲೆ ಅಯ್ಯಾಶಾಸ್ತ್ರೀಯವರ ಕಾವ್ಯವೊಂದನ್ನು ಹೊರತು ಪಡಿಸಿದಂತೆ ಉಳಿದ ಕಾವ್ಯಗಳ ಸಂಪಾದನೆಗಳು ಸುಲಭವಾಗಿ ಸಾಧ್ಯವಾದವುಗಳಲ್ಲ. ಅವುಗಳೆನ್ನೆಲ್ಲಾ ಸಂಗ್ರಹಿಸಿ, ಕೂಲಂಕಷವಾಗಿ ಅಧ್ಯಯನ ಮಾಡಿ, ಶುದ್ಧ ಪಾಠವನ್ನು ವಿದ್ವಾಂಸರು ರೂಪಿಸಿದ್ದಾರೆ. ಕವಿ ಕಾವ್ಯ ಪರಿಚಯವನ್ನು ಬರೆದಿದ್ದಾರೆ. ಕವಿಯ ಕಾಲ, ಪ್ರದೇಶ ಮತ್ತಿತರ ಚಾರಿತ್ರಿಕ ಅಂಶಗಳಿಗಾಗಿ ಅನೇಕ ಆಕರಗಳನ್ನು ಶೋಧಿಸಿದ್ದಾರೆ. ಹೀಗೆ ಪ್ರತಿಯೊಬ್ಬ ಸಂಪಾದಕರು ಅನುಸರಿಸಿರುವಂತಹ ವಿಧಾನಗಳು ಬಲುಮಟ್ಟಿಗೆ ಭಿನ್ನ ಮತ್ತು ಸ್ವಕೀಯವಾಗಿವೆ. ಗ್ರಂಥ ಸಂಪಾದಕರ ಅರಿಕೆಯ ನುಡಿಗಳ ಭಾಗವನ್ನು ಅಧ್ಯಯನ ಪರಾಮರ್ಶನ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಈ ಐದು ಕಾವ್ಯಗಳನ್ನು ರಚಿಸಿದ ಕವಿಗಳ ಕುರಿತಾದ ಪರಿಚಯಾತ್ಮಕ ಬರಹಗಳಿವೆ. ಕರ್ಣಾಟಕ ಕವಿಚರಿತೆ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶಗಳಲ್ಲಿ ಕವಿ-ಕಾವ್ಯ ಪರಿಚಯದ ಬರಹಗಳಿವೆ. ಹಾಗೆಯೇ ಟಿ. ವಿ. ವೆಂಕಟಾಚಲ ಶಾಸ್ತ್ರೀ ಯವರ **'ಸೋಸಲೆ ಅಯ್ಯಾಶಾಸ್ತ್ರಿಗಳು: ಜೀವನ, ಕೃತಿಗಳು'** ಎಂಬ ಲೇಖನವು ಕವಿ-ಕಾವ್ಯ ಪರಿಚಯದ ಹಿನ್ನೆಲೆಯಲ್ಲಿ

ಮಹತ್ವದ್ದು, ಸಾಹಿತ್ಯ ಚರಿತ್ರೆಯ ಮಾದರಿಯಲ್ಲಿ ಚಾರಿತ್ರಿಕತೆ ವೈಧಾನಿಕತೆಯನ್ನು ಅನುಸರಿಸಿದ ಬರಹವಾಗಿದೆ. ಇದು ಅವರ 'ಶಾಸ್ತ್ರೀಯ–4'ರಲ್ಲಿದೆ.

ಸುಬ್ರಹ್ಮಣ್ಯ ಭಟ್ಟ ಕೊಣಾಜೆ ಯವರ **'ಉತ್ತರ ರಾಮಕಥೆ'** ಎಂಬ ಲೇಖನವು 'ಪ್ರದೀಪಿಕೆ'ಯಲ್ಲಿ ಪ್ರಕಟವಾಗಿದೆ. ಈ ಬರಹವು ಉತ್ತರ ರಾಮಾಯಣ ಕಾವ್ಯಗಳ ಪರಂಪರೆ ಮತ್ತು ಕನ್ನಡದ ಕವಿಗಳ ಕುರಿತು ವಿಶ್ಲೇಷಿಸಿ, ನಾರಾಯಣ ಕವಿಯ ಕಾವ್ಯವಾದ 'ಉತ್ತರ ರಾಮಕಥೆ' ಯ ಕಾವ್ಯವನ್ನು ಶ್ರೀಮದ್ ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿರುವ ರಾಮಕಥೆಯೊಂದಿಗೆ ತುಲನಾತ್ಮಕವಾಗಿ ವಿಮರ್ಶಿಸಿದೆ.

ಭಾರತೀಯ ರಾಮಾಯಣ ಪರಂಪರೆ, ಕನ್ನಡದಲ್ಲಿ ರಾಮಾಯಣ ಪರಂಪರೆ ಬಗೆಗೆ ಸಾಕಷ್ಟು ಅಧ್ಯಯನ ಸಾಮಾಗ್ರಿಗಳು ಲಭ್ಯವಿದೆ. ಹಾಗೆಯೇ ಪೂರ್ವ ರಾಮಾಯಣ ಕಥಾ ವಸ್ತುವನ್ನಾಶ್ರಯಿಸಿ ರಚಿತವಾದ ಕಾವ್ಯಗಳಲ್ಲಿ ಸೀತೆಯ ಪಾತ್ರವನ್ನು ಅನುಲಕ್ಷಿಸಿ ಸಾಕಷ್ಟು ಅಧ್ಯಯನಗಳಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಮುಂದಿನಂತೆ ವಿವರಿಸಿಕೊಳ್ಳಲಾಗಿದೆ.

ಎಸ್.ವಿ.ಪ್ರಭಾವತಿ ಯವರ **'ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ'** ಎಂಬ ಸಂಶೋಧನಾ ಕೃತಿಯು ಕನ್ನಡ ಪರಂಪರೆಯಲ್ಲಿನ ಒಟ್ಟು ರಾಮಾಯಣ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದೆ. ಹಿಂದೂ ಧರ್ಮ ಮತ್ತು ಪುರಾಣಗಳ ಹಿನ್ನೆಲೆಯಲ್ಲಿ ಪೀಠಿಕೆಯನ್ನು ಒದಗಿಸುತ್ತಾ, ರಾಮಾಯಣ ಪರಂಪರೆಯನ್ನು ಚರ್ಚಿಸಿದೆ. ಜಾನಪದ, ಪ್ರಾಚೀನದಿಂದ ಆಧುನಿಕ ಕಾಲದ ಮಹಾಕಾವ್ಯ, ಪದ್ಯ, ಗದ್ಯಕಾವ್ಯ, ಆಧುನಿಕ ರೂಪಗಳಲ್ಲಿ ಪಠ್ಯಗಳು, ವಿಮರ್ಶೆ, ಅನುವಾದಗಳನ್ನು ವಿಸ್ತೃತವಾಗಿ ಆಕರವನ್ನಾಗಿಟ್ಟುಕೊಂಡ ಮಹತ್ವದ ಅಧ್ಯಯನವಾಗಿದೆ.

ಎ.ಎಸ್.ವತ್ಸಲಾ ಅವರ **'ಕನ್ನಡದ ರಾಮಾಯಣ ಮಹಾಕಾವ್ಯಗಳು'** ಎಂಬ ಸಂಶೋಧನಾ ಕೃತಿಯು ನಾಗಚಂದ್ರನ ರಾಮಚಂದ್ರ ಚರಿತ ಪುರಾಣಂ, ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ, ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕಾವ್ಯಗಳನ್ನು ಅನುಲಕ್ಷಿಸಿದೆ. ಇದು ಉತ್ತರ ರಾಮಾಯಣ ಕಾವ್ಯಗಳ ಕುರಿತಾದ ಅಧ್ಯಯನವಲ್ಲ. ಆದರೆ ರಾಮಾಯಣ ಪರಂಪರೆಯ ಪರಿಚಯದಲ್ಲಿ ಕೃತಿಗಳ ಪ್ರಸ್ತಾಪವಿದೆ.

ಶ್ರೀಧರ ಹೆಗಡೆ ಭದ್ರನ್ ಅವರ **'ಆಧುನಿಕ ಕನ್ನಡ ಮಹಾಕಾವ್ಯಗಳು'** ಎಂಬ ಪ್ರೌಢ ಪ್ರಬಂಧ, ಬಿ.ಶಾಂತರಾಮಪ್ರಭು ಅವರು 'ವಿಶ್ವ ರಾಮಕಥಾ ವಾಹಿನಿ' ಎಂಬ ಕೃತಿಯಲ್ಲಿ ಭಾರತ ಹಾಗೂ ವಿದೇಶಗಳಲ್ಲಿ ರಾಮಾಯಣ ಪರಂಪರೆ ಹೇಗೆ ಭಿನ್ನವಾಗಿ ಪಸರಿಸಿದೆ ಎಂಬುದನ್ನು

ಕಟ್ಟಿಕೊಟ್ಟಿದ್ದಾರೆ. ಎಚ್.ಜೆ.ಲಕ್ಕಪ್ಪ ಗೌಡರ **'ಶ್ರೀರಾಮಾಯಣದರ್ಶನಂ: ಒಂದು ವಿಮರ್ಶಾತ್ಮಕ ಅಧ್ಯಯನ'** ಕೃತಿಯಲ್ಲಿ ಸೀತೆಯ ಪಾತ್ರದ ವಿವೇಚನೆಯಿದೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಮಂದಾಕಿನಿ ಭೀಮಸೇನತವಗ ಅವರ **'ಕನ್ನಡ ಮಹಾಕಾವ್ಯಗಳಲ್ಲಿ ಸೀತೆಯ ಪಾತ್ರ'** ಎಂಬ ಕೃತಿಯಲ್ಲಿ ಶಿಷ್ಟ ಮತ್ತು ಜನಪದ ರಾಮಾಯಣಗಳ ಕುರಿತಾದ ಅಧ್ಯಯನವಾಗಿದ್ದು, ಉತ್ತರ ರಾಮಕಥೆಯನ್ನು ಒಳಗೊಂಡಿಲ್ಲ.

'ಶ್ರೀರಾಮಾಯಣದರ್ಶನಂ' ಕಾವ್ಯದಲ್ಲಿ ಅನಾವರಣಗೊಂಡಿರುವ ಸೀತೆಯ ಸಚಿತ್ರವನ್ನು ಕಟ್ಟಿಕೊಡಲು ಜಿ. ಪ್ರಶಾಂತನಾಯಕರ **'ನೀಮಹಚ್ಛಿಲ್ಪಿ ದಿಟಂ', 'ನಾನಕ್ಕನೆನ್ ನಿನಗೆ, ತಂಗೆ!'** ಎಂಬ ಎರಡು ಕೃತಿಗಳು ಪ್ರಯತ್ನಿಸಿವೆ. ಎ.ಎನ್.ಮೂರ್ತಿ ರಾಯರ **'ಸೀತಾ ಪರಿತ್ಯಾಗ ಪ್ರಸಂಗ' ಹಾಗೂ 'ಸಾಹಿತ್ಯ ಮತ್ತು ಸತ್ಯ'** ಎಂಬ ಕೃತಿಗಳಲ್ಲಿ ಸೀತೆಯ ಕುರಿತು ಚರ್ಚಿಸುತ್ತವೆ. ಬಂಜಗೆರೆ ಜಯಪ್ರಕಾಶ ಅವರ **'ಇದೆ ರಾಮಾಯಣ'** ಕೃತಿ ರಾಮಾಯಣವನ್ನು ಭಿನ್ನವಾಗಿ ಮಂಡಿಸಿದೆ. ರಾಮಾಯಣಗಳ ಬಗ್ಗೆ ಅಪಾರ ಪ್ರಮಾಣದಲ್ಲಿ ವಿಮರ್ಶೆ, ವಿಶ್ಲೇಷಣೆ, ವಿವರಣೆ, ವ್ಯಾಖ್ಯಾನಗಳನ್ನೊಳಗೊಂಡ ಕೃತಿಗಳು ಪ್ರಕಟಗೊಂಡಿವೆ.

ಭಾಷೆ–ಕಾಲಗಳ ಹಿನ್ನೆಲೆಯಲ್ಲಿ ಗಮನಾರ್ಹವಾಗಿರುವ ಕನ್ನಡ ಉತ್ತರ ರಾಮಾಯಣ ಕಾವ್ಯಗಳು ಗದ್ಯಾನುವಾದದ ಮಾದರಿಯಲ್ಲಿಯೂ ಪ್ರಕಟವಾಗಬೇಕಿದೆ. ಆಗ ಪಂಡಿತರಷ್ಟೇ ಅಲ್ಲದೆ, ಅಕ್ಷರ ಬಲ್ಲವರೂ ಕಾವ್ಯಗಳ ತಿರುಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಹಾಗೆಯೇ ಈ ಕಾವ್ಯಗಳನ್ನು ಸಂಕ್ಷೇಪಿಸಿ ಅಥವಾ ಬಿಡಿಬಿಡಿ ಭಾಗಗಳನ್ನು ಅನುವಾದಿಸಲು ಪ್ರಯತ್ನಿಸಬೇಕಿದೆ. ಜೊತೆಗೆ ಗಂಭೀರವಾದಂತಹ ವಿಮರ್ಶಾ ಬರಹಗಳು ಕಡಿಮೆ ಎನ್ನಬಹುದು. ವಿಮರ್ಶಾ ಬರಹಗಳ, ತೌಲನಿಕ, ಪರಿಕಲ್ಪನಾತ್ಮಕ ಅಧ್ಯಯನಗಳನ್ನು ನಿರೀಕ್ಷಿಸಬೇಕಾಗಿದೆ.

ಕನ್ನಡ ಉತ್ತರ ರಾಮಾಯಣ ಕಾವ್ಯಗಳಿಗೆ ಸಂಬಂಧಿಸಿದಂತಹ ಅಧ್ಯಯನಗಳನ್ನು ಈವರೆಗೂ ಗಮನಿಸಲಾಯಿತು. ಇವುಗಳ ನೆರವಿನಿಂದ ಪ್ರಸ್ತುತ ಅಧ್ಯಯನದ ಮೂಲಕ ಸೀತೆಯ ಪಾತ್ರವನ್ನು ವಿಶ್ಲೇಷಿಸಿಕೊಳ್ಳಲಾಗುವುದು.

ಮಹಾಪ್ರಬಂಧದ ಸಂರಚನೆ

ರಾಮಾಯಣ ಒಂದು ಕಾವ್ಯವಾಗಿ, ಶಾಸ್ತ್ರವಾಗಿ, ಇತಿಹಾಸ ಪರಂಪರೆಯಾಗಿ ಮತ್ತು ಆಕರ ದಾಖಲೆಗಳಾಗಿ ರಚನೆಯಾಗಿದೆ. ಈ ರಾಮಾಯಣಗಳನ್ನು ಒಂದು ವಸ್ತುವನ್ನಾಗಿ ಸಾಹಿತ್ಯ

ಪರಂಪರೆ ಸ್ವೀಕರಿಸಿ, ಬೇರೆ ಬೇರೆ ತಲೆಮಾರುಗಳಲ್ಲಿ ಚರ್ಚಿಸುತ್ತಾ-ಪ್ರತಿಕ್ರಿಯಿಸುತ್ತಾ, ವಿವಿಧ ಸ್ವರೂಪದಲ್ಲಿ ಅರಿಯುವ ಪ್ರಯತ್ನ ಮಾಡಿದೆ. ಯಾವುದೋ ಒಂದು ಕಾಲದಲ್ಲಿ ಪರಂಪರೆಯನ್ನು ಅಥವಾ ಮಹಾಕಾವ್ಯವನ್ನು ಗ್ರಹಿಸುವ ಕ್ರಮದಲ್ಲಾದ ಪಲ್ಲಟದಿಂದಾಗಿ ರಾಮಾಯಣ ಕಾವ್ಯಗಳೇ ವಿಕಾಸಗೊಂಡು ವಿವಿಧ ನೆಲೆಗಳಲ್ಲಿ ರಚನೆಯಾದವು. ರಚನೆಯಾದ ರಾಮಾಯಣಗಳು ತನ್ನದೇ ಆದ ಸಾಂಸ್ಕೃತಿಕ ಮಹತ್ವವನ್ನು ಪಸರಿಸಿದವು. ಮರು ರಚನೆಯಾದ ರಾಮಾಯಣ ಕಾವ್ಯಗಳಲ್ಲಿ ಉತ್ತರ ರಾಮಾಯಣವು ಹಲವು ಬಗೆಯ ಅಧ್ಯಯನಗಳಿಗೆ ದಾರಿ ಮಾಡಿಕೊಟ್ಟಿದೆ. ಉತ್ತರ ರಾಮಾಯಣಗಳ ರಚನಾಕ್ರಮ, ಮಾದರಿ, ಪಾತ್ರ ಸನ್ನಿವೇಶ ಮತ್ತು ಕೃತಿ ಸ್ವರೂಪಗಳನ್ನು ಸೀತೆಯ ಪಾತ್ರವನ್ನು ಕೇಂದ್ರೀಕರಿಸಿ ಚರ್ಚೆ ಮಾಡಲಾಗುವುದು.

'ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯಗಳಲ್ಲಿ ಸೀತೆ' ಎಂಬ ಪ್ರಸ್ತುತ ಸಂಶೋಧನಾ ಮಹಾಪ್ರಬಂಧವನ್ನು ಮೇಲೆ ವಿವರಿಸಿದ ವಿಧಾನಗಳ ಹಿನ್ನೆಲೆಯಲ್ಲಿ ಕಟ್ಟಲಾಗಿದೆ. ಹಾಗೆಯೇ **'ಸೀತಾ ಪಾತ್ರದ'** ಹಿನ್ನೆಲೆಯಲ್ಲಿ **ಹತ್ತು** ಅಧ್ಯಾಯಗಳನ್ನು ರೂಪಿಸಿಕೊಳ್ಳಲಾಗಿದೆ.

ಮಹಾಪ್ರಬಂಧದ ಆರಂಭದಲ್ಲಿ **'ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ, ಸಮೀಕ್ಷೆ, ಮಹಾಪ್ರಬಂಧದ ಸಂರಚನೆ'** ಎಂಬುದಾಗಿದೆ. ಇದು ಸಂಶೋಧನಾ ಅಧ್ಯಯನಕ್ಕೆ ಅಡಿಪಾಯವಾಗಿದೆ. ಇಲ್ಲಿ ಸಂಶೋಧನೆಯ ಉದ್ದೇಶ, ಮಹತ್ವಗಳನ್ನು ವಿವರಿಸಿಕೊಳ್ಳಲಾಗಿದೆ. ನಿಗದಿತ ಕಾಲಾವಧಿಯಲ್ಲಿ ಹಾಗೂ ನಿರ್ದಿಷ್ಟ 'ವಸ್ತು'ವನ್ನು ಆಯ್ದುಕೊಂಡು ಅಧ್ಯಯನ ರೂಪಿಸಿರುವುದರಿಂದ ಅದರ ವ್ಯಾಪ್ತಿಯೂ ಮುಖ್ಯವಾದುದು. ಕನ್ನಡ ಉತ್ತರರಾಮಾಯಣ ಕವಿಗಳಾದ ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ, ಸೋಸಲೆ ಅಯ್ಯಾಶಾಸ್ತ್ರಿ-ಕವಿಗಳ ಕೃತಿಗಳನ್ನು ಆಕರ ಪಠ್ಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಅಧ್ಯಯನ ಸಮೀಕ್ಷೆಯಲ್ಲಿ ರಾಮಾಯಣ ಕಾವ್ಯಗಳ ಕುರಿತಾಗಿ ಆಗಿರುವ ಅಧ್ಯಯನಗಳಿಗೆ ಹೋಲಿಸಿದರೆ, ಉತ್ತರ ರಾಮಾಯಣ ಕಾವ್ಯಗಳನ್ನು ಅನುಲಕ್ಷಿಸಿ ಸಾಕಷ್ಟು ಅಧ್ಯಯನಗಳು ಆಗಲಿಲ್ಲ. ಉತ್ತರ ರಾಮಾಯಣ ಕಾವ್ಯಗಳು ಹೊಸತನವನ್ನು ಸೃಷ್ಟಿಸಿದರೂ, ಲೋಕ ರೂಢಿಯಲ್ಲಿ ಚರ್ಚೆಗೆ ಒಳಗಾಗದೆ ಹೋಗಿವೆ. ಆದ್ದರಿಂದ ಈ ಕಾವ್ಯಗಳಿಗೆ ಸಂಬಂಧಿಸಿದ ಅಧ್ಯಯನಗಳ ವ್ಯಾಪ್ತಿ ಕಿರಿದಾಗಿದೆ. ಕನ್ನಡ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಕಾವ್ಯಗಳನ್ನು ಅನುಲಕ್ಷಿಸಿದಂತಹ ಪ್ರಮುಖ ಬರಹಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಹಾಗೂ ಭಾರತೀಯ ರಾಮಾಯಣ ಪರಂಪರೆ, ಕನ್ನಡ ರಾಮಾಯಣ ಪರಂಪರೆಯ ಬಗೆಗೆ ಸಾಕಷ್ಟು ಅಧ್ಯಯನ ಸಾಮಗ್ರಿಗಳು ಲಭ್ಯವಿದೆ. ಪೂರ್ವ ರಾಮಾಯಣದ ಕಥೆಯನ್ನು ಅನುಸರಿಸಿ ರಚನೆಯಾದ ಕಾವ್ಯಗಳಲ್ಲಿ

ಸೀತೆಯ ಪಾತ್ರವನ್ನು ಅನುಲಕ್ಷಿಸಿ ಸಾಕಷ್ಟು ಅಧ್ಯಯನಗಳಾಗಿವೆ. ಅವುಗಳಲ್ಲಿ ಪ್ರಮುಖವಾದುದನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಕೊನೆಯಲ್ಲಿ ಈ ಸಂಶೋಧನೆಯ ವಿಷಯವನ್ನು ಮಂಡಿಸಲು ಅನುಸರಿಸಿರುವ ವಿಧಾನಗಳನ್ನು ವಿವರಿಸಲಾಗಿದೆ.

ಮಹಾಪ್ರಬಂಧದ ಕೊನೆಯ ಅಧ್ಯಾಯ **'ಸಮಾರೋಪ'**. ಇದರಲ್ಲಿ ಪ್ರಸ್ತುತ ಸಂಶೋಧನಾ ಅಧ್ಯಯನದಿಂದ ಕಂಡುಕೊಳ್ಳಲಾದ ಫಲಿತಗಳನ್ನು ನಿರೂಪಿಸಲಾಗಿದೆ. ಹಾಗೆಯೇ ಮುಂದಿನ ಸಂಶೋಧನಾ ಅಧ್ಯಯನದ ಸಾಧ್ಯತೆಗಳನ್ನು ಸೂಚಿಸಲಾಗಿದೆ. ಕನ್ನಡ ಉತ್ತರ ರಾಮಾಯಣ ಕಾವ್ಯಗಳ ತಾತ್ವಿಕ ಅಂಶಗಳನ್ನು ಗ್ರಹಿಸುತ್ತಾ, ಸೀತೆಯ ಪಾತ್ರವು ಇವತ್ತಿಗೂ ಮತ್ತೆ ಮತ್ತೆ ಬರವಣಿಗೆಗೆ ವಸ್ತು–ವಿಷಯವಾಗಿ ಆದರ್ಶವಾಗಿರುತ್ತಾಳೆ ಎಂಬುದನ್ನು ಸಮಕಾಲೀನ ವಿಚಾರ ಹಾಗೂ ವಿಮರ್ಶೆಗಳೊಂದಿಗೆ ಮುಖಾಮುಖಿಯಾಗಿಸುತ್ತ ಈ ಸಂಶೋಧನೆಯು ರೂಪುಗೊಂಡಿದೆ. ಜೊತೆಗೆ ಅನುಬಂಧದಲ್ಲಿ ಮಹಾಪ್ರಬಂಧವನ್ನು ಸಿದ್ಧಪಡಿಸಲು ಬಳಸಿಕೊಳ್ಳಲಾದ ಆಕರ ಕೃತಿಗಳು, ಪರಾಮರ್ಶನ ಗ್ರಂಥಗಳು, ಲೇಖನಗಳು, ಪಿಹೆಚ್.ಡಿ ಮಹಾಪ್ರಬಂಧಗಳು, ಅಂತರ್ಜಾಲ ಲೇಖನಗಳು, ಶಬ್ದಕೋಶಗಳು – ಇವುಗಳ ಪಟ್ಟಿಯನ್ನು ನೀಡಲಾಗಿದೆ.

ಸಮಾರೋಪ

'ಆ ಚಂದ್ರ ತಾರಾಂಬರಂ' ಸೂರ್ಯ ಚಂದ್ರರಿರುವವರೆಗೂ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಲೋಕ ಪ್ರಸಿದ್ಧವಾಗಿರುತ್ತದೆ. ಇದು ಸಾಹಿತ್ಯ ಮಾತ್ರವಲ್ಲ, ಜನರ ಜೀವನದಲ್ಲೂ ವಸ್ತು ವಿಷಯವಾಗಿ ಜೀವಂತವಾಗಿರಿಸಿದೆ. "ಇಡೀ ಭರತ ಖಂಡದ ಸಂಸ್ಕೃತಿಯ ಸಮಗ್ರ ಸ್ವರೂಪದ ಇತಿಹಾಸವನ್ನು ಅವು ಚಿತ್ರಿಸುತ್ತವೆ. ಪ್ರಾಚೀನ ಭಾರತದ ಸರ್ವಸ್ವವನ್ನು ಅವು ಒಳಗೊಂಡಿವೆ. ಮಾನವತೆಯು ಬಯಸಬಹುದಾದ ಅತ್ಯುಚ್ಚ ಸಂಸ್ಕೃತಿಯ ಶಿಖರಗಳನ್ನು ಇವುಗಳಲ್ಲಿ ಕಾಣುತ್ತೇವೆ. ಕೇವಲ ಶಿಖರಗಳನ್ನು ಮಾತ್ರವಲ್ಲದೆ ಜೀವನದ ಎಲ್ಲಾ ಮುಖಗಳನ್ನು ಇವು ಚಿತ್ರಿಸುತ್ತವೆ. ತಗ್ಗು ಹಳ್ಳಗಳನ್ನು, ಕಣಿವೆ ಜಾರುಗಳನ್ನು ತೋರಿಸಿ ಆ ಮೂಲಕ ಶಿಖರದ ಔನ್ನತ್ಯವು ನಮಗೆ ಮನವರಿಕೆಯಾಗುವಂತೆ ಮಾಡುತ್ತವೆ". (ಹೆಚ್.ತಿಪ್ಪೇರುದ್ರ ಸ್ವಾಮಿ, 2015, ಪುಟ 43)

ಭಾರತೀಯರಿಗೆ ವಾಲ್ಮೀಕಿಯೇ ಆದಿಕವಿ. ವಾಲ್ಮೀಕಿಯ ರಾಮಾಯಣವೇ ಆದಿಕಾವ್ಯವೆಂದು ಒಪ್ಪಿತವಾಗಿದೆ. ವಾಲ್ಮೀಕಿ, ವಾಲ್ಮೀಕಿ ಕಾವ್ಯವನ್ನು ಮೊದಲ ಗುರುತುಗಳೆಂದು ಪರಿಗಣಿಸಿಕೊಂಡರೆ ಇವು ಕೇವಲ ಸಂಸ್ಕೃತ ಭಾಷೆ ಮೂಲ ಕಾವ್ಯವೆಂದು ಅಥವಾ ಸಂಸ್ಕೃತದ ಮೊದಲ ಕಾವ್ಯವೆಂದು ನಿರ್ಧರಿಸಿಕೊಳ್ಳಬಹುದಾಗುತ್ತದೆ. ಆದರೆ ಪ್ರಪಂಚದಾದ್ಯಂತ ಲಕ್ಷಾಂತರ ರಾಮಾಯಣ ಕಾವ್ಯಗಳು ಬೇರೆ ಬೇರೆ ದೇಶದಲ್ಲಿ, ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಪರಂಪರೆಗಳಲ್ಲಿ ಕಂಡುಬರುತ್ತವೆ. ನಮ್ಮಲ್ಲಿ ಬೌದ್ಧ ಪರಂಪರೆ, ಜೈನ ಪರಂಪರೆ, ವೈದಿಕ ಪರಂಪರೆ ಎಂಬುದಾಗಿ ಗುರುತಿಸಿಕೊಳ್ಳುತ್ತೇವೆ. ಆದರೆ ರಾಮಾಯಣದ ಮೂಲ ಕಾವ್ಯ ಯಾವುದೆಂದು ಚರ್ಚೆಗೆ, ಜಿಜ್ಞಾಸೆಗೆ ನಿಂತಾಗ ಭಾರತೀಯರು ವಾಲ್ಮೀಕಿ ರಾಮಾಯಣ ಎಂದು ತೀರ್ಮಾನಕ್ಕೆ ಬಂದಂತೆ ಬೇರೆ ಬೇರೆ ದೇಶದವರು ತಮ್ಮ ತಮ್ಮ ದೇಶದ ಮೂಲ ಕಾವ್ಯಗಳನ್ನೇ ಮೂಲ ಕಾವ್ಯವೆಂದು ವಾದಕ್ಕೆ ನಿಂತುಬಿಡುತ್ತಾರೆ. ಪ್ರಪಂಚದ ಯಾವುದೇ ರಾಮಾಯಣದ ವಸ್ತುವನ್ನು ಒಳಗೊಂಡ ಕಾವ್ಯವಾದರೂ ಅದರ ಮೇಲೆ ಮತ್ತೊಂದು ಭಾಷೆ ಮತ್ತೊಂದು ದೇಶದ ರಾಮಾಯಣದ ಪ್ರಭಾವ ಇದೆ. ಕನ್ನಡ ರಾಮಾಯಣಗಳ ಮಟ್ಟಿಗೆ ಹೇಳುವುದಾದರೆ ಎಲ್ಲಾ ಪರಂಪರೆಗಳು ಕಲಸು ಮೇಲೋಗರವಾದಂತೆ ಕಂಡುಬರುತ್ತವೆ. ಉದಾಹರಣೆಗೆ, ನಾವು ವೈದಿಕ ಪರಂಪರೆ ಎಂದು ಕರೆಯುವ ರಾಮಾಯಣ ಕಾವ್ಯಗಳ ಮೇಲೆ ಜೈನ ಮತ್ತು ಜಾನಪದ ಕಥೆಗಳ ಪ್ರಭಾವವೂ, ಜೈನ ಪರಂಪರೆಯ ಕಾವ್ಯಗಳ ಮೇಲೆ ವೈದಿಕ ಕಥೆಯ ಪ್ರಭಾವವೂ ಕಂಡುಬರುತ್ತವೆ. ಹಾಗೆಯೇ ವೈದಿಕ ಪರಂಪರೆಯಲ್ಲೇ ಕಂಡು ಬರುವ ಪುರಾಣದ

ರಾಮಕಥೆಗಳು ವಾಲ್ಮೀಕಿಯ ರಾಮನ ಕಥೆಯಿಂದ ದೂರ ಸರಿದು ಜೈನ ಕಥೆಗಳ ಪ್ರಭಾವಕ್ಕೆ ಒಳಗಾಗಿವೆ. ಆದರೆ ಮೂಲ ವಾಲ್ಮೀಕಿ ಬರೆದ ರಾಮಾಯಣ ಕಾವ್ಯದಲ್ಲಿ ಮಾತ್ರ ಬೇರೆ ಪರಂಪರೆಯ ಪ್ರಭಾವವನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ನಮಗೆ ವಾಲ್ಮೀಕಿ ರಾಮಾಯಣವೇ ಮೂಲ ಕಾವ್ಯವಾಗಿ ನಿರ್ಧರಿಸಲ್ಪಟ್ಟಿದೆ.

ಜನಜೀವನ ವಿಕಾಸಗೊಂಡಂತೆ, ರಾಮಾಯಣಗಳ ರಚನೆಗಳು ಇಮ್ಮಡಿಯಾಗುತ್ತಾ ಬಂದಿದೆ. ಅದರಲ್ಲೂ ಉತ್ತರ ರಾಮಾಯಾಣ ರಚನೆಗೆ ಹೆಚ್ಚು ಪ್ರಾಮುಖ್ಯತೆಗಳಿವೆ ಹಾಗೂ ಸಾಂಸ್ಕೃತಿಕ ಮೌಲ್ಯಗಳೂ ಇವೆ. ಈ ಸಂದರ್ಭದಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಕನ್ನಡ ಉತ್ತರ ರಾಮಾಯಣ ಕಾವ್ಯಗಳಲ್ಲಿ ಸೀತೆಯ ಪಾತ್ರದ ಸ್ವರೂಪವನ್ನು ಪರಿಶೀಲಿಸಲಾಗಿದೆ. ಜೊತೆಗೆ ಕನ್ನಡ ಸಂಗ್ರಹಿತ ಜನಪದ ರಾಮಾಯಣಗಳಲ್ಲಿ ಹಾಗೂ ಕನ್ನಡ ರಾಮಾಯಣ ಕಾವ್ಯಗಳನ್ನು ಅನುಲಕ್ಷಿಸಿ ಸೀತೆಯ ಪಾತ್ರದ ಮಹತ್ವವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಮೊದಲನೇಯ ಅಧ್ಯಾಯದಲ್ಲಿ **ರಾಮಾಯಣ ಪರಂಪರೆ** ಶೀರ್ಷಿಕೆಯಡಿಯಲ್ಲಿ ಕನ್ನಡ ರಾಮಾಯಣ ಪರಂಪರೆ, ಉತ್ತರ ರಾಮಾಯಣ ಪರಂಪರೆ, ಕನ್ನಡ ಉತ್ತರ ರಾಮಾಯಣ ಪರಂಪರೆ, ಜನಪದ ರಾಮಾಯಣ ಪರಂಪರೆ ಸಮೀಕ್ಷೆಯನ್ನು ಮಾಡಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಅನುಲಕ್ಷಿಸಿದ **ಕನ್ನಡ ರಾಮಾಯಣ ಕೃತಿಗಳಲ್ಲಿ ಸೀತಾ ಪಾತ್ರ ಚಿತ್ರಣ**ದಲ್ಲಿ ನಾಗಚಂದ್ರನ ಪಂಪ ರಾಮಾಯಣದಲ್ಲಿ ಸೀತಾ ಪಾತ್ರ ವಿಶ್ಲೇಷಣೆ, ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಸೀತಾ ಪರಿತ್ಯಾಗ, ಮುದ್ದಣ್ಣನ ರಾಮಾಶ್ವಮೇಧದಲ್ಲಿ ಸೀತಾ ಪಾತ್ರ ಸೃಷ್ಟಿ ಇವುಗಳನ್ನು ವಿಶ್ಲೇಷಿಸಲಾಗಿದೆ. ಮುಂದಿನ ಅಧ್ಯಾಯಗಳ ರಚನೆಗೆ ಈ ಅಧ್ಯಾಯವು ತಳಪಾಯವಾಗಿ ಕೆಲಸ ಮಾಡಿದೆ.

ಮೂರನೇ ಅಧ್ಯಾಯದಲ್ಲಿ **ಕನ್ನಡ ಉತ್ತರ ರಾಮಾಯಣಗಳು: ಕವಿ–ಕಾವ್ಯ ಪರಿಚಯ** ಮೂಲಕ ನಾರಾಯಣ–ಉತ್ತರ ರಾಮಕಥೆ, ನರಸ–ಉತ್ತರ ರಾಮಕಥಾ, ತಿರುಮಲೆ ವೈದ್ಯ–ಉತ್ತರ ರಾಮಾಯಣಂ, ಯೋಗೀಂದ್ರ–ಉತ್ತರ ರಾಮಾಯಣಂ, ಸೋಸಲೆ ಅಯ್ಯಶಾಸ್ತ್ರೀ–ಶೇಷ ರಾಮಾಯಣಂ ಎಂಬ ಐದು ಕೃತಿಗಳನ್ನು ಪರಿಚಯಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ **ನಾರಾಯಣ ಕವಿಯ ಉತ್ತರ ರಾಮಕಥೆಯಲ್ಲಿ ಸೀತಾ ಸನ್ನಿವೇಶ** ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ವೇದವತಿ–ಸೀತೆ, ಸೀತೆಯೊಡನೆ ರಾಮ–ದಾಂಪತ್ಯದಲ್ಲಿ; ಗರ್ಭಿಣಿಯಾಗಿ; ಅಪವಾದದ ಸುಳಿಯಲ್ಲಿ; ಸೀತಾ ಸ್ವೀಕಾರದ ಸಂದರ್ಭದಲ್ಲಿ. ವನವಾಸ ಪ್ರಿಯೆಯೊಡನೆ ಲಕ್ಷ್ಮಣ – ಕಾನನದಲ್ಲಿ ಸೀತೆ; ವಾಲ್ಮೀಕಿಯೊಡನೆ ಸೀತೆ–

ಮಾತೃತ್ವದಲ್ಲಿ ಸೀತೆ; ಸಭಾ ಮಧ್ಯದಲ್ಲಿ ಸೀತೆ; ಸೀತಾ ಶಪಥ-ಭೂಮಡಿಲಲ್ಲಿ ಸೀತೆ. ಎಂದು ಸೀತಾ ಪಾತ್ರವನ್ನು ಇಲ್ಲಿ ವಿವೇಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ **ನರಸ ಕವಿಯ ಉತ್ತರ ರಾಮಕಥಾ ಕಾವ್ಯದಲ್ಲಿ ಸೀತಾ ಪಾತ್ರ ಚಿತ್ರಣ** ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ವೇದವತಿ-ಸೀತೆ, ಸೀತೆಯೊಡನೆ ರಾಮ, ಪರಿತ್ಯಕ್ತಳಾದ ಸೀತೆ, ಸೀತೆಯೊಂದಿಗೆ ಲಕ್ಷ್ಮಣ, ಆಶ್ರಮದಲ್ಲಿ ಸೀತೆ, ಸೀತಾ ಪರಿತ್ಯಾಗ. ಎಂದು ಸೀತಾ ಪಾತ್ರವನ್ನು ಇಲ್ಲಿ ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ **ತಿರುಮಲೆ ವೈದ್ಯನ ಉತ್ತರ ರಾಮಾಯಣದಲ್ಲಿ ಸೀತಾ ಪಾತ್ರ ಸ್ವರೂಪ** ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ವೇದವತಿ-ಸೀತೆ, ದಾಂಪತ್ಯ ಜೀವನದಲ್ಲಿ ಸೀತೆ, ಸೀತಾ-ಲಕ್ಷ್ಮಣ ಬಾಂಧವ್ಯ, ವನವಾಸಿ ಸೀತೆ, ಸೀತಾ ಶಪಥ. ಎಂದು ಸೀತಾ ಪಾತ್ರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಏಳನೇ ಅಧ್ಯಾಯವು **ಯೋಗೀಂದ್ರ ಕವಿಯ ಉತ್ತರ ರಾಮಾಯಣದಲ್ಲಿ ಸೀತಾ ಪಾತ್ರದ ಸಮೀಕ್ಷೆ** ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ವೇದವತಿ-ಸೀತೆ, ಅನ್ಯೋನ್ಯ ದಾಂಪತ್ಯದಲ್ಲಿ ಸೀತೆ-ರಾಮ, ಅನ್ಯೋನ್ಯ ಬಾಂಧವ್ಯದಲ್ಲಿ ಸೀತೆ-ಲಕ್ಷ್ಮಣ, ಆಶ್ರಯದಾತನಲ್ಲಿ ಸೀತೆ, ತಾಯಿಯಾಗಿ ಸೀತೆ, ಸೀತಾ ಭಾಷೆ ಎಂದು ಸೀತಾ ಪಾತ್ರವನ್ನು ಇಲ್ಲಿ ವಿಮರ್ಶಿಸಲಾಗಿದೆ.

ಎಂಟನೇಯ ಅಧ್ಯಾಯವು **ಸೋಸಲೆ ಅಯ್ಯಾಶಾಸ್ತ್ರೀಯವರ ಶೇಷ ರಾಮಾಯಣಂ ಕಾವ್ಯದಲ್ಲಿ ಸೀತಾ ಪಾತ್ರದ ವೈಶಿಷ್ಟ್ಯತೆ** ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ಸೀತೆ-ರಾಮ, ಸೀತೆ-ಲಕ್ಷ್ಮಣ, ಸೀತೆ-ವಾಲ್ಮೀಕಿ, ಸೀತೆ-ಅಗಸ್ತ್ಯ ಮುನಿ, ಸೀತೆಯ ದಿಟ್ಟನಡೆ ಎಂದು ಸೀತಾ ಪಾತ್ರವನ್ನು ಇಲ್ಲಿ ಚರ್ಚಿಸಲಾಗಿದೆ.

ಒಂಭತ್ತನೇಯ ಅಧ್ಯಾಯವು **ಉತ್ತರ ರಾಮಾಯಣದ ಸೀತಾ ಪಾತ್ರ ಚಿತ್ರಣ** ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ಸಾಹಿತ್ಯದ ಕನ್ನಡಿಯಲ್ಲಿ ಸೀತಾ ಪಾತ್ರ ಸನ್ನಿವೇಶ-ಸೀತಾ ವ್ಯಕ್ತಿತ್ವ, ಅಸ್ತಿತ್ವ, ಮಹತ್ವ, ಪೂರ್ವಜನ್ಮದಲ್ಲಿ ಸೀತೆ, ಮಗಳಾಗಿ ಸೀತೆ, ಪ್ರಭುತ್ವದ ನಿರಾಕಣೆಯಲ್ಲಿ ಸೀತೆ, ವಾಲ್ಮೀಕಿಯಲ್ಲಿ ಸೀತೆ, ಕ್ರೌಂಚ ಪಕ್ಷಿಯ ನೋವಿನಲ್ಲಿ ಸೀತೆ, ಅಗಸನ ನುಡಿಯಲ್ಲಿ ಸೀತೆ, ಪತಿವ್ರತೆಯಾಗಿ-ತಾಯಿಯಾಗಿ ಸೀತೆ, ಲಿಂಗ ರಾಜಕಾರಣತ್ವದಲ್ಲಿ ಸೀತೆ, ದಿಟ್ಟ ಹೆಣ್ಣಾಗಿ ಸೀತೆ, ಶೀಲವಂತೆ-ಸಹಧರ್ಮಿಣಿ ಸೀತೆ, ಆಧುನಿಕ ಸ್ತ್ರೀವಾದ ದೃಷ್ಟಿಕೋನದಲ್ಲಿ ಸೀತೆ ಎಂದು ಸೀತಾ ಪಾತ್ರವನ್ನು ಇಲ್ಲಿ ಚರ್ಚಿಸಿ, ಮೂಲ ಸ್ವರೂಪ- ಸೀತಾ ಪಾತ್ರ ಸೃಷ್ಟಿಯಲ್ಲಿ ಕವಿಗಳು ಕೌಶಲ್ಯ ತೋರಿದ ದಾರಿ-

ಭಿನ್ನತೆಗಳನ್ನು ಹಾಗೂ ಕೃತಿ ವಸ್ತು, ಕಾಲಘಟ್ಟ, ಭಾಷೆ, ಛಂದಸ್ಸು, ಶೈಲಿ ಇವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಹತ್ತನೆಯ ಅಧ್ಯಾಯವು **ಜನಪದ ರಾಮಾಯಣಗಳಲ್ಲಿ ಸೀತಾ ಪಾತ್ರ** ಇಲ್ಲಿ ಜನಪದ–ಜಾನಪದ, ಶಿಷ್ಟ–ಜನಪದ ರಾಮಾಯಣಗಳ ಬಗ್ಗೆ ಚರ್ಚಿಸಿ ಆ ಮೂಲಕ ಜನಪದ ರಾಮಾಯಣಗಳಲ್ಲಿ ಸೀತಾ ಪಾತ್ರ ಶೀರ್ಷಿಕೆಯಲ್ಲಿ ಉಪ ಶೀರ್ಷಿಕೆಯಾಗಿ ರಾವಣನ ಮಗಳಾಗಿ ಸೀತೆ, ಸ್ವಯಂವರದಲ್ಲಿ ಸೀತೆ, ಅಪಹರಣದಲ್ಲಿ ಸೀತೆ, ಸೀತಾ ಪರಿತ್ಯಾಗ, ತಾಯಿಯಾಗಿ ಸೀತೆ, ಸೀತಾ ಪರೀಕ್ಷೆ, ಸಾಧ್ವಿ ಸೀತೆ. ಎಂದು ಸೀತಾ ಪಾತ್ರವನ್ನು ಇಲ್ಲಿ ಗ್ರಹಿಸಲಾಗಿದೆ.

ಕೊನೆಯದಾಗಿ ಸಮಾರೋಪವಾಗಿದ್ದು, ಇಲ್ಲಿ ಪ್ರಬಂಧದ ಮುಖ್ಯ ಫಲಿತಗಳನ್ನು, ಮುಂದಿನ ಅಧ್ಯಯನದಲ್ಲಿ ಕೈಗೊಳ್ಳಬೇಕಾದ ಸಾಧ್ಯತೆಗಳನ್ನು ಇಲ್ಲಿ ಸೂಚಿಸಲಾಗಿದೆ.

ಒಟ್ಟಾರೆಯಾಗಿ ಕನ್ನಡ ಉತ್ತರ ರಾಮಾಯಣ ಕೃತಿಗಳಲ್ಲಿ ಸೀತೆಯನ್ನು ಗ್ರಹಿಸಿರುವ ಬಗೆಯನ್ನು ತಾತ್ವಿಕವಾಗಿ ಚರ್ಚಿಸಲು ಶೋಧಿಸಲಾಗಿದೆ.

ಅಧ್ಯಯನದ ಫಲಿತಗಳು

ಮೂಲ ರಾಮಾಯಣ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕಥೆಯೊಂದಿಗೆ ಉತ್ತರ ರಾಮಾಯಣಗಳು ರಚನೆಯಾದರೂ, ಅವುಗಳ ವೈಶಿಷ್ಟತೆಯ ದೃಷ್ಟಿಯಿಂದ ಉತ್ತರ ರಾಮಾಯಣ ಅಧ್ಯಯನಕ್ಕೆ ಯೋಗ್ಯವಾದ ಭಾಗವಾಗಿದೆ. ಉತ್ತರ ರಾಮಾಯಣದ ಸೀತೆ ಪ್ರಧಾನ ಭೂಮಿಕೆಯಲ್ಲಿದ್ದಾಳೆ. ರಾಮಾಯಣದ ನಂತರದ ಭಾಗವಾಗಿರುವ ಉತ್ತರ ರಾಮಾಯಣ ರಾಮ ಕಥೆಯಾಗದೆ, ಸೀತಾ ಕಥೆಯಾಗಿ ರಚನೆಯಾಗಿರುವುದು ರಾಮಾಯಣದ ವೈಶಿಷ್ಟ್ಯತೆಯ ದೊಡ್ಡ ವ್ಯತ್ಯಾಸವನ್ನು ತೋರಿಸುತ್ತದೆ. ರಾಮಾಯಣದ ರಾಮನ ಪಾತ್ರದ ಪ್ರಧಾನತೆಗೆ ಸಮಾನವಾಗಿ ಸೀತೆಯ ಪಾತ್ರ ಚಿತ್ರಣವಿದ್ದರೂ ಉತ್ತರ ರಾಮಾಯಣದ ಸೀತೆಯಷ್ಟು ಪ್ರಧಾನವಾಗಿಲ್ಲ. ಇಲ್ಲಿ ಸೀತಾ ಪಾತ್ರದ ಹಿರಿಮೆಗೆ, ಮಹೋನ್ನತಿಗೆ ಕಾರಣವಾಗುತ್ತದೆ. ಸೀತೆಯ ಪಾತ್ರ ಚಿತ್ರಣ, ಸೀತಾ ಪಾತ್ರದ ಸನ್ನಿವೇಶಗಳು ಜವಾಬ್ದಾರಿಯುತವಾದ ಧರ್ಮ ಮತ್ತು ಮನುಷ್ಯತ್ವವನ್ನು ಬಿಚ್ಚಿಡುತ್ತದೆ. ಇದನ್ನೆಲ್ಲವನ್ನೂ ಇಟ್ಟುಕೊಂಡು ಫಲಿತಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಜನಪದ ಪರಂಪರೆಗಳಲ್ಲಿ, ವಾಲ್ಮೀಕಿ ಪರಂಪರೆಗಳಲ್ಲಿ, ಉತ್ತರ ರಾಮಾಯಣದ ಕಥಾ ವಸ್ತುವನ್ನು ಒಳಗೊಂಡರೂ, ಕನ್ನಡದಲ್ಲಿ ಉತ್ತರ ರಾಮಾಯಣ ವಸ್ತುವುಳ್ಳ ಕೃತಿ ಸುಮಾರು

11ನೇ ಶತಮಾನದ ಹಿಂದೆ ಕಾವ್ಯಗಳಲ್ಲಿ ಪ್ರಸ್ತಾಪಗೊಂಡಿದೆ ಎನ್ನಲು ಯಾವುದೇ ಆಧಾರಗಳಿಲ್ಲ. ಆದರೆ ಕನ್ನಡದ ಮೊದಲ ಜೈನ ಕಾವ್ಯವಾದ ನಾಗಚಂದ್ರನ ಪಂಪ ರಾಮಾಯಣದಲ್ಲಿ ಹಾಗೂ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ 'ಕಥಾ ಭಾಗ'ವಾಗಿ ಕಾಣಿಸಿಕೊಂಡಿದೆ. ಇವುಗಳ ಭಾಗಶಃ ಸನ್ನಿವೇಶಗಳೇ ಮುಂದಿನ ಕವಿಗಳು ಉತ್ತರ ರಾಮಾಯಣ ವಸ್ತುವುಳ್ಳ ಪೂರ್ಣ ಕೃತಿ ರಚಿಸಲು ಪ್ರೇರಣೆ ನೀಡಿದವು. ಮೂಲ ವಾಲ್ಮೀಕಿ ರಾಮಾಯಣದ ಉತ್ತರಕಾಂಡ ಭಾಗವು ಪ್ರಕ್ಷಿಪ್ತ ಎಂದು ಕನ್ನಡದಲ್ಲಿ ಕುಮಾರ ವಾಲ್ಮೀಕಿ ತೊರವೆ ರಾಮಾಯಣ ಕೃತಿ ರಚಿಸುವಾಗ ಉತ್ತರಕಾಂಡ ಭಾಗವನ್ನು ಬಿಟ್ಟು ರಚಿಸಿದರು. ಹಾಗಾಗಿ ಮೂಲ ವಾಲ್ಮೀಕಿ ರಾಮಾಯಣದ ಉತ್ತರಕಾಂಡ ಭಾಗವನ್ನು ವಸ್ತುವನ್ನಾಗಿರಿಸಿ ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ ಕವಿಗಳು ಕೃತಿಗಳನ್ನು ರಚಿಸಿದರೆ, ಮೂಲ ವಾಲ್ಮೀಕಿ ರಾಮಾಯಣ, ಸಂಸ್ಕೃತದ ಜೈಮಿನಿ ಭಾರತ, ಪದ್ಮಪುರಾಣವನ್ನು ಅನುಸರಿಸಿ ಲಕ್ಷೀಶ, ಲಕ್ಷ್ಮೀಶನನ್ನು ಅನುಸರಿಸಿ ಸೋಸಲೆ ಅಯ್ಯ ಶಾಸ್ತ್ರಿ, ಗದ್ಯದಲ್ಲಿ ಮುದ್ದಣ್ಣ ರಾಮಾಶ್ವಮೇಧ ಕೃತಿಗಳನ್ನು ರಚಿಸಿದರು.

- ಕನ್ನಡದಲ್ಲಿ ಉತ್ತರ ರಾಮಾಯಣ ಸಾಹಿತ್ಯವನ್ನು ಒಳಗೊಂಡ ಕೃತಿಗಳು 16ನೇ ಶತಮಾನದಿಂದ ಇತ್ತೀಚಿನವರೆಗೂ ರಚಿತವಾಗುತ್ತಲೇ ಇದೆ. ಅವುಗಳಲ್ಲಿ ಪೂರ್ಣ ಪ್ರಮಾಣದ ಸ್ವತಂತ್ರ ಕೃತಿಗಳನ್ನು ರಚಿಸಿದ ಕವಿಗಳಾದ ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ, ಸೋಸಲೆ ಅಯ್ಯಶಾಸ್ತ್ರಿ.
- ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ, ಸೋಸಲೆ ಅಯ್ಯಶಾಸ್ತ್ರಿ ಕನ್ನಡ ಉತ್ತರ ರಾಮಾಯಣ ಕವಿಗಳಾದ ಇವರು ಕನ್ನಡ ಸಾಹಿತ್ಯದಲ್ಲಿ ಅಲಕ್ಷಿತಕ್ಕೆ ಒಳಪಟ್ಟ ಕವಿಗಳು. ರಾಮಾಯಣ ಕಥೆಯಾದರೂ ಕನ್ನಡ ವಾಙ್ಮಯದಲ್ಲಿ ಉತ್ತರ ರಾಮಾಯಣ ಚರ್ಚೆಗೆ ಒಳಪಟ್ಟಿಲ್ಲ. ಇವರು ಸಂಸ್ಕೃತದ ಮೂಲ ರಾಮಾಯಣದ ವಸ್ತುವನ್ನು ಹಾಗೂ ಪದ್ಮಪುರಾಣದ ವಸ್ತುವನ್ನು ಅನುಸರಿಸಿ, ಕನ್ನಡದಲ್ಲಿ ಉತ್ತರ ರಾಮಾಯಣ ಕೃತಿಯನ್ನು ಸಮರ್ಥವಾಗಿ ರಚಿಸಿದರೂ, ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿಲ್ಲ. ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ – ವೈದಿಕ ಪರಂಪರೆಯ ಭಕ್ತಿ ನೆಲೆಯಲ್ಲಿ ಕಾವ್ಯವನ್ನು ರಚಿಸಿದರೆ, ಸೋಸಲೆ ಅಯ್ಯಶಾಸ್ತ್ರಿಯವರು ಪೌರಾಣಿಕ ಪರಂಪರೆಯ ರಾಜಾಶ್ರಯದೊಂದಿಗೆ ಕಾವ್ಯ ರಚಿಸಿದರು. ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ ಕವಿಗಳಿಗೆ ವೈದಿಕ ಸಂಪ್ರದಾಯದ ಸ್ತುತಿ ಮುಖ್ಯವಾದರೆ, ಸೋಸಲೆ ಅಯ್ಯಶಾಸ್ತ್ರಿ ಅವರಿಗೆ ಪದ್ಮಪುರಾಣವೇ ಮುಖ್ಯವಾಗುತ್ತದೆ. ಮೊದಲ ನಾಲ್ಕು ಕವಿಗಳಲ್ಲಿ ದೈವಭಕ್ತಿಯಾದರೆ, ಒಬ್ಬ ಕವಿಯದ್ದು ರಾಜಭಕ್ತಿ. ಹೀಗೆ ಉತ್ತರ

ರಾಮಾಯಣದಲ್ಲಿ ಕೃತಿ ರಚಿಸಿದ ಅವರ ಉದ್ದೇಶಗಳು, ಕಾವ್ಯ ಧೋರಣೆಗಳು ಬೇರೆ ಬೇರೆಯಾಗಿದ್ದರೂ, ಕಥಾ ವಸ್ತು ಮಾತ್ರ ಒಂದೇ ಆಗಿದೆ.

- ನಾರಾಯಣ, ತಿರುಮಲೆ ವೈದ್ಯ, ಸೋಸಲೆ ಅಯ್ಯ ಶಾಸ್ತ್ರಿ ಅವರ ಕೃತಿಗಳು ಅಚ್ಚಾಗಿದ್ದರೂ ನೋಡಲು ಕಷ್ಟ ಸಾಧ್ಯ. ಯೋಗೀಂದ್ರ ಕವಿಯ ಕೃತಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಅಚ್ಚಾಗಿದೆ. ನರಸ ಕವಿಯ ಕೃತಿಯ ಮುದ್ರಣ ಕೆಲಸ ನಡೆಯುತ್ತಿದೆ.
- ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ ಕವಿಗಳು ಸ್ವತಂತ್ರವಾಗಿ ಭಾಮಿನಿ ಷಟ್ಪದಿಯಲ್ಲಿ ಕೃತಿ ರಚಿಸಿದರೆ, ಸೋಸಲೆ ಅಯ್ಯಶಾಸ್ತ್ರಿ ಅವರು ರಾಜಾಶ್ರಯದಲ್ಲಿದ್ದು, ವಾರ್ಧಕ ಷಟ್ಪದಿಯಲ್ಲಿ ಕಾವ್ಯ ರಚನೆ ಮಾಡಿದ್ದಾರೆ. ಈ ಕೃತಿಗಳೆಲ್ಲ ನಡುಗನ್ನಡ ಭಾಷೆಯಲ್ಲಿ ರಚಿತವಾಗಿರುವ ಕೃತಿಗಳು ಎಂದು ತಿಳಿದು ಬಂದಿದೆ.
- ನಾರಾಯಣ, ತಿರುಮಲೆ ವೈದ್ಯ, ಯೋಗೀಂದ್ರ, ಸೋಸಲೆ ಅಯ್ಯಾ ಶಾಸ್ತ್ರಿ ಕವಿಗಳು, ತಮ್ಮ ಕೃತಿಗಳಲ್ಲಿ ಸೀತಾ ಪಾತ್ರವನ್ನು ವಿವರಣಾತ್ಮಕವಾಗಿ ನೀಡಿದರೆ, ನರಸ ಕವಿ ತಮ್ಮ ಕೃತಿಯಲ್ಲಿ ಸೀತಾ ಪಾತ್ರವನ್ನು ಮೊಟಕುಗೊಳಿಸಿದ್ದಾರೆ.
- ನಾರಾಯಣ, ಯೋಗೀಂದ್ರ, ಸೋಸಲೆ ಅಯ್ಯಶಾಸ್ತ್ರಿಗಳು ಸೀತೆಯನ್ನು ಭೂದೇವಿಯೊಡನೆ ಕಳುಹಿಸದೆ ಗಂಡ ಮಕ್ಕಳೊಡನೆ ಮತ್ತೆ ಸುಖಮಯ ಜೀವನ ಕಂಡುಕೊಳ್ಳುವ ಹಾಗೆ ಬದಲಾವಣೆಯೊಂದಿಗೆ ಜನಪದ ರಾಮಾಯಣವನ್ನು ಹಾಗೂ ಲಕ್ಷ್ಮೀಶನನ್ನು ಅನುಸರಿಸಿ ರಚಿಸಿದರೆ, ನರಸ, ತಿರುಮಲೆ ವೈದ್ಯ ಕವಿಗಳು ಸೀತೆಯನ್ನು ಭೂದೇವಿಗೆ ಒಪ್ಪಿಸುವ ಮೂಲಕ ಸೀತಾ ಪಾತ್ರವನ್ನು ಮೂಲ ಸ್ವರೂಪದ ನೆಲೆಯಲ್ಲಿ ಚಿತ್ರಿಸಿದ್ದಾರೆ.
- ಉತ್ತರ ರಾಮಾಯಣ ಕೃತಿಗಳಲ್ಲಿ ಸೀತಾ ಪಾತ್ರವನ್ನು ಐದು ಮಂದಿ ಕವಿ ಶ್ರೇಷ್ಠರು ತಮ್ಮ ತಮ್ಮ ಮನೋಧರ್ಮಗಳಿಗೆ ಅನುಗುಣವಾಗಿ ತಮ್ಮ ದೃಷ್ಟಿಕೋನಗಳಿಂದ ಚಿತ್ರಿಸಿ, ಸೀತೆಯ ಪಾತ್ರಕ್ಕೆ ಹೊಸ ಮೆರುಗನ್ನು ನೀಡಿ ಸಾಹಿತ್ಯ ಲೋಕದಲ್ಲಿ ಉದಾತ್ತ ಸ್ತ್ರೀಯಾಗಿ ಚಿತ್ರಿಸಿದ್ದಾರೆ.
- ಬಹುತೇಕ ರಾಮಾಯಣಗಳು ರಾಮನ ಪಾತ್ರವನ್ನು ಪ್ರಧಾನವಾಗಿ ಕೇಂದ್ರೀಕರಿಸಿಕೊಂಡಿರುವುದರಿಂದ ಸ್ತ್ರೀ ಪಾತ್ರಗಳು ಸಹ ಪಾತ್ರಗಳಾಗಿ ಪುರುಷ ಪಾತ್ರಗಳೇ ಪ್ರಧಾನವಾಗಿ ಕಾಣುತ್ತವೆ. ಉತ್ತರ ರಾಮಾಯಣಗಳಲ್ಲಿ ಸೀತೆಯ ಪಾತ್ರವೇ ಕೇಂದ್ರ ಬಿಂದು. ಸೀತಾ ಪಾತ್ರವಿಲ್ಲದೆ ಉತ್ತರ ರಾಮಾಯಣದ ಸನ್ನಿವೇಶಗಳಿಗೆ ಮಹತ್ವವಿಲ್ಲ ಎಂದು ಈ ಅಧ್ಯಯನದಿಂದ ಗುರುತಿಸಿಕೊಳ್ಳಲಾಗಿದೆ.

- ಸೀತೆಯು ಪೂರ್ವ ಜನ್ಮದಲ್ಲಿ ವೇದವತಿಯಾಗಿದ್ದಳೆಂಬ ಅಂಶ ಉತ್ತರ ರಾಮಾಯಣದಲ್ಲಿ ಮಾತ್ರ ಬರುತ್ತದೆ. ಬೃಹಸ್ಪತಿಯ ಪುತ್ರನಾದ ಕುಶಧ್ವಜನು ವೇದವನ್ನು ಪಠಿಸುತ್ತಿರುವಾಗ ಹುಟ್ಟಿದವಳಾದ ಈಕೆಯನ್ನು ದೇವ-ಗಂಧರ್ವಾದಿಗಳಿಗೆ ಮಗಳನ್ನು ಕೊಡದೆ ಮಹಾವಿಷ್ಣುವೇ ಅಳಿಯನಾಗಬೇಕೆಂಬ ಇಚ್ಛೆಯನ್ನು ಹೊಂದಿದ್ದದರೆ ಕುಶಧ್ವಜನನ್ನು ಶಂಭುವೆಂಬ ರಾಕ್ಷಸನು ಕೊಲ್ಲತ್ತಾನೆ. ತಂದೆಯ ಮನೋರಥವು ಈಡೇರಲೆಂದು ಮಗಳಾದ ವೇದವತಿ ಕಾಡಿನಲ್ಲಿ ಕಠಿಣ ತಪಸ್ಸನ್ನು ಆಚರಿಸುತ್ತಿದ್ದಾಗ, ಅದೇ ಸಂದರ್ಭದಲ್ಲಿ ದಿಗ್ವಿಜಯಕ್ಕಾಗಿ ಹೊರಟ ರಾವಣ ಭೂಮಂಡಲವನ್ನೆಲ್ಲಾ ಸಂಚರಿಸುವಾಗ ಆಕೆಯ ರೂಪಕ್ಕೆ ಮನಸೋತು ಆಕೆಯನ್ನು ಓಲೈಸಲು ಪರಿಪರಿಯಾಗಿ ಹೊಗಳಿ, ಮಹಾವಿಷ್ಣುವನ್ನು ತೆಗಳಿ, ತನ್ನ ಪರಾಕ್ರಮದ ವರ್ಣನೆಯನ್ನು ಮಾಡಿ, ಹಲವು ಆಮಿಷಗಳನ್ನು ತೋರಿಸಿದರೂ ಅವಳು ಮಣಿಯದಿರಲು ಅವಳ ಕೂದಲನ್ನು ಹಿಡಿದಾಗ, ಆಕೆ ಕೂದಲನ್ನು ಕತ್ತರಿಸಿ ರಾವಣನ ವಧೆಗಾಗಿ ಮತ್ತೆ ಹುಟ್ಟಿ ಬರುವುದಾಗಿ ಘೋಷಿಸಿ ಅಗ್ನಿಪ್ರವೇಶ ಮಾಡಿದಳು. ಅಶ್ವಮೇಧಯಾಗ ಕೈಗೊಳ್ಳುವ ಸಂದರ್ಭದಲ್ಲಿ ಅಗಸ್ತ್ಯಮುನಿ ರಾಮನಿಗೆ ವೇದವತಿಯೇ ಜನಕ ಸುತೆ ಸೀತೆಯೆಂದು ಹೇಳುವ ಸನ್ನವೇಶವಿದೆ.
- ವಾಲ್ಮೀಕಿ ವಿರಚಿತ ರಾಮಾಯಣಗಳನ್ನು ಅನುಸರಿಸಿ ವೈದಿಕ ಪರಂಪರೆಯಲ್ಲಿ ನಾರಾಯಣ, ನರಸ, ಯೋಗಿಂದ್ರ, ತಿರುಮಲೆ ವೈದ್ಯ ಕೃತಿ ರಚಿಸಿದರೆ, ಸೋಸಲೆ ಅಯ್ಯ ಶಾಸ್ತ್ರಿಯವರು ಪದ್ಮಪುರಾಣವನ್ನು ಅನುಸರಿಸಿ ಕೃತಿ ರಚಿಸಿದ್ದಾರೆ. ಇವರ ಕೃತಿ ಕನ್ನಡದಲ್ಲಿ ಪದ್ಮ ಪುರಾಣವನ್ನು ಆಧರಿಸಿ ಪೌರಾಣಿಕ ಪರಂಪರೆಯಲ್ಲಿ ರಚಿತವಾಗಿರುವ ಪೂರ್ಣ ಪ್ರಮಾಣದ ಏಕೈಕ ಕೃತಿ. ಇದು ಪಾಂಡಿತ್ಯಪೂರ್ಣ ಭಾಷೆಯಲ್ಲಿದೆ.
- ನಾರಾಯಣನ ಉತ್ತರ ರಾಮ ಕಥೆ ಕನ್ನಡದ ಮೊದಲ ವೈದಿಕ ಪರಂಪರೆಯ ಸ್ವತಂತ್ರ ಉತ್ತರ ರಾಮಾಯಣ ಪೂರ್ಣ ಪ್ರಮಾಣದ ಕಾವ್ಯವಾಗಿದ್ದು, ಉಳಿದ ಉತ್ತರ ರಾಮಾಯಣ ಕೃತಿಗಳಿಗಿಂತ ಗುಣ, ಗಾತ್ರಗಳಲ್ಲಿ ಸಮಗ್ರತೆಯಿಂದ ಕೂಡಿದ ದೀರ್ಘವಾದ ಕಾವ್ಯವಾಗಿದ್ದು, ಉತ್ತರ ರಾಮಾಯಣದ ಪೂರ್ಣ ಕಥಾ ಹಂದರವನ್ನು ಒಳಗೊಂಡಿದೆ. ಸಂಸ್ಕೃತ ಕಾವ್ಯ ವಾಲ್ಮೀಕಿ ರಾಮಾಯಣವನ್ನು ಓದಲಾಗದವರು ಈ ಕೃತಿಯನ್ನು ಗ್ರಹಿಸಬಹುದು.
- ಉತ್ತರ ರಾಮಾಯಣ ಕೃತಿಗಳಿಗೆ ಕಾರುಣ್ಯವೇ ಪ್ರಧಾನವಾಗಿದೆ. ಆದ್ದರಿಂದ ಸೀತೆಯನ್ನು ಕಾರುಣ್ಯ ಮೂರ್ತಿಯನ್ನಾಗಿ ಚಿತ್ರಿಸಿ ಕೊನೆಗೆ ದಿಟ್ಟ ಹೆಣ್ಣಾಗಿ ಚಿತ್ರಿಸಿರುವುದನ್ನು ಕಂಡುಕೊಳ್ಳಲಾಗಿದೆ.

- ಉತ್ತರ ರಾಮಾಯಣದ ಸೀತೆಯನ್ನು ನಾಗರಿಕ ಜಗತ್ತಿನ ಹೆಣ್ಣಾಗಿ ಗ್ರಹಿಸಲಾಗಿದ್ದು, ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳನ್ನು ಪ್ರಶ್ನೆ ಮಾಡುವ ಜ್ಞಾನವಂತ ಸ್ತ್ರೀಯಂತೆ ಸೀತೆ ಕಾಣುತ್ತಾಳೆ.
- ಜನಪದ ರಾಮಾಯಣದಲ್ಲಿ ಸೀತೆ ಅನಿಸಿದ್ದನ್ನು ಹೇಳುವ, ಪಡೆದುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದ್ದಾಳೆ. ಆದರೆ ಅಂತಹ ಅವಕಾಶವನ್ನು ಆದರ್ಶ ರಾಜ್ಯದ ಹೆಸರಿನಲ್ಲಿ ಹರಣ ಮಾಡಲಾಗುತ್ತದೆ.
- ಸೀತೆಯ ಆತ್ಮಹತ್ಯೆಯನ್ನು ಭೂದೇವಿ ತೆರೆದ ಬಾಹುಗಳಲ್ಲಿ ಸ್ವಾಗತಿಸುತ್ತಾಳೆ. ಹಾಗೂ ಪತಿಯೊಡನೆ ಸೇರಿ ಬಾಳುವಂತೆ ಮಾಡುತ್ತಾಳೆ. ಆ ಮೂಲಕ ಸೀತೆಯ ಸ್ವಾತಂತ್ರ್ಯವನ್ನು ಭೂದೇವಿ ಪ್ರತ್ಯಕ್ಷಗೊಳಿಸಿದಂತೆ ಕಾಣುತ್ತದೆ.
- ಜನಪದ ರಾಮಾಯಣವೂ ಪ್ರೇಕ್ಷಕರನ್ನು ಹಿಡಿದಿಡುವ ಅನಿವಾರ್ಯತೆ ಇರುವುದನ್ನು ಕರುಣಾಮಯಿ ಕಾವ್ಯವನ್ನಾಗಿಸುವ ಪ್ರಯತ್ನ ನಡೆದಿರುವುದರಿಂದ ರಾಮನ ನೆರಳಲ್ಲಿ ನಡೆಯುವ ಸೀತೆಯ ಪಾತ್ರವಿದ್ದರೂ ನಂತರ ಸಮಕಾಲೀನ ಸಮಾಜ ಬಿಂಬದಂತೆ ಸೀತೆಯ ಪಾತ್ರ ಗೋಚರಿಸುತ್ತದೆ.
- ಜನಪದರಲ್ಲಿ ಪ್ರತಿ ಹೆಣ್ಣು ತನ್ನ ದುಃಖವನ್ನು ಸೀತೆಯ ಸಂಕಷ್ಟಕ್ಕೆ ಹೋಲಿಸುತ್ತಾ ಸಾಂತ್ವನ ಪಡೆದುಕೊಳ್ಳುತ್ತಾಳೆ. ಸೀತೆಯಷ್ಟು ಘನವಾದ ಕಷ್ಟ ನನ್ನದಲ್ಲ ಎಂಬುದರ ಮೂಲಕ ದಾಂಪತ್ಯದ ಪರಿಧಿಗೆ ಒಳಗಾಗುತ್ತಾಳೆ.
- ಜನಪದ ಕಾವ್ಯದಲ್ಲಿ ಸೀತೆ ಪುರುಷ ಪ್ರಧಾನ ಸಮಾಜ ನಿರ್ಮಿಸಿದ ದಿವ್ಯಗಳನ್ನು ಎದುರಿಸಿ ಗೆಲ್ಲುತ್ತಾ ಹೋಗುವುದು ಸೀತೆಯ ಶ್ರೇಷ್ಠತೆಯನ್ನು ಗಡಸುತನವನ್ನು ಕಾಣಬಹುದು. ಗಂಡನನ್ನು ತ್ಯಜಿಸಿ ಭೂಮಿಗೆ ಸೇರುವುದರ ಮೂಲಕ ಹಾಗೂ ಗಂಡ ಮಕ್ಕಳೊಡನೆ ಜೊತೆಯಾಗಿ ಜೀವಿಸುವಲ್ಲಿ ಅವಳ ಧೈರ್ಯವನ್ನು ತಿಳಿಯಬಹುದು.
- ಈ ಐದು ಕೃತಿಗಳಲ್ಲಿ ಸೀತೆಯ ದುಃಖ ಸಾಮಾನ್ಯ ಹೆಣ್ಣಿನ ದುಃಖ. ಆ ದುಃಖ ಸೀತೆಯನ್ನು ಮತ್ತಷ್ಟು ಗಟ್ಟಿಗೊಳಿಸುವಲ್ಲಿ ಸಫಲವಾಗುತ್ತದೆ. ಗಂಡಿನ ಅಡಿಯಾಳಾಗುವುದು ಅಲ್ಲ, ಧೈರ್ಯದಿಂದ ಮುನ್ನುಗ್ಗುವುದೇ ಜೀವನ ಎನ್ನುವ ಹಾಗೆ ಚಿತ್ರಣಗೊಂಡಿದೆ. ಹಾಗೂ ಈ ಕೃತಿಗಳ ಮೂಲಕ ಸ್ತ್ರೀಗಿರುವ ನಿರ್ಬಂಧಗಳ ಬಗ್ಗೆ ಪ್ರತಿಭಟಿಸುತ್ತಾ ಪಾರಂಪರಿಕ ಬಂಧನದಿಂದ ಹೊರಬಂದು ಸ್ವಾತಂತ್ರ್ಯ ಪಡೆದವಳಂತೆ ಸೀತೆ ಕಂಡು ಬರುತ್ತಾಳೆ ಅಲ್ಲದೆ ಸೀತಾ ಪಾತ್ರ ಆಧುನಿಕ ಕಾಲಕ್ಕೆ ಹೊಸ ಆಶಯವನ್ನು ನೀಡುವ ಪಾತ್ರದಂತೆ ಚಿತ್ರಿತವಾಗಿದೆ.

• ಶಿಷ್ಟ ರಾಮಾಯಣದಲ್ಲಿ ಜನಕಸುತೆಯಾಗಿ, ಭೂಮಿಯಲ್ಲಿ ಹುಟ್ಟಿದ ಮಗು ಭೂಮಿಯಲ್ಲಿಯೇ ಐಕ್ಯಳಾಗುತ್ತಾಳೆ. ಜನಪದ ರಾಮಾಯಣದಲ್ಲಿ ರಾವಣನ ಮಗಳಾಗಿ ಸೀತೆ ಚಿತ್ರಿತವಾಗಿದ್ದಾಳೆ.

• ಛಲದಿಂದ ಏನನ್ನು ಸಾಧಿಸಬಹುದು ಎಂಬುದನ್ನು ಸೀತೆ ಧೈರ್ಯದಿಂದ ಮಕ್ಕಳ ಹಿತಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು, ಸುಖವನ್ನು ಕಾಣದಿದ್ದರೂ, ಸಹೃದಯರ ಅನುಕಂಪಕ್ಕೆ ಪಾತ್ರಳಾಗುವುದನ್ನು, ಲೋಕೋತ್ತರ ಗುಣಗಳು ಸರ್ವಕಾಲದಲ್ಲಿ ಸರ್ವರ ಮನಸ್ಸನ್ನು ಆಕರ್ಷಿಸುತ್ತದೆ. ಸೀತೆಯ ಮುಗ್ಧ, ಮಧುರ ಸ್ವಭಾವ, ಪತಿ ಪಾರಾಯಣತೆ, ಅನನ್ಯ ಅಸಾಧಾರಣ ಪತಿ ಪ್ರೇಮ, ದಿಟ್ಟತನದ ಜೀವನ ಇವುಗಳಿಂದ ಆದರ್ಶ ಮಹಿಳೆ ಎನಿಸಿದ್ದಾಳೆ. ಎಂಬುದನ್ನು ಈ ಐದು ಕೃತಿಗಳ ಮೂಲಕ ತಿಳಿದುಕೊಳ್ಳಬಹುದು.

• ಭಾರತೀಯ ಸ್ತ್ರೀ ಜನಾಂಗದ ಮುಂದೆ ಸೀತೆಯ ಪಾತ್ರದ ಮೂಲಕ ಕವಿಗಳು ಇಟ್ಟ ಪಾತಿವ್ರತ್ಯದ ಆದರ್ಶ ತ್ರಿಕಾಲ ಭಾದಿತವಾದುದು ಎಂಬುದನ್ನು ಉತ್ತರ ರಾಮಾಯಣ ಕೃತಿಗಳ ಮೂಲಕ ಗುರುತಿಸಬಹುದು.

• ಸೀತೆ ರಾಮನಿಗೆ ತಕ್ಕ ಪತ್ನಿ ಶ್ರೀ ರಾಮ. ಪರಿತ್ಯಾಗ ಸೀತೆಯ ಆಯ್ಕೆಯ, ಸ್ವಾತಂತ್ರ್ಯ ಜೀವನದ ಪ್ರವೇಶ ದ್ವಾರ ಎನ್ನಬಹುದು. ಅರಮನೆಯಿಂದ ಹೊರ ಪ್ರಪಂಚದಲ್ಲಿ ಅನುಭವಗಳ ಮೂಲಕ ಪರಿಪಕ್ವಗೊಂಡ ಸೀತೆ ಧೈರ್ಯದಿಂದ ಒಂಟಿಯಾಗಿ ತನ್ನ ಜೀವನವನ್ನು ತಾನೇ ಕಂಡುಕೊಂಡು ಆ ಮೂಲಕ ತನ್ನ ಅಸ್ತಿತ್ವವನ್ನು ನಿರ್ಮಾಣ ಮಾಡಿಕೊಂಡವಳು. ರಾಮನಿಂದ ಪರಿತ್ಯಕ್ತಳಾದ್ದು ದೈಹಿಕವಾಗಿ, ಸಾಮಾಜಿಕವಾಗಿಯೇ ಹೊರತು ಮಾನಸಿಕವಾಗಿ ಅಲ್ಲ. ಆದ್ದರಿಂದ ಸೀತೆ ಸೀತೆಯಾಗಿಯೇ ಅಸಾಮಾನ್ಯ ಹೆಣ್ಣಾಗಿ ಉಳಿದಳು ಇಂದು ಅದೇ ಸೀತೆ ಭಾರತೀಯ ನಾರಿಯರಿಗೆ ಆದರ್ಶದ ಹೆಣ್ಣು ಎಂಬುದಕ್ಕೆ ಸಾಧ್ಯವಾಯಿತು.

• ಸೀತಾ ಕಥನದ ಸುಖಾಂತ್ಯವೇ ರಾಮಾಯಣದ ಮುಖ್ಯ ಆಶಯ. ಆದ್ದರಿಂದ ರಾಮಾಯಣದ ಉತ್ತರ ರಾಮಾಯಣ ಭಾಗವು ಪ್ರಕ್ಷಿಪ್ತ ಎನ್ನುವ ಮಾತು ಸಮಂಜಸವಲ್ಲ. ಈ ಭಾಗವನ್ನು ತಿರಸ್ಕರಿಸುವುದಾದರೆ ಮಹಾಕಾವ್ಯದ ಸ್ವರೂಪಕ್ಕೆ ಧಕ್ಕೆ ಹಾಗೂ ಪೂರ್ಣ ಕಾವ್ಯವಾಗಲು ಸಾಧ್ಯವಿಲ್ಲ.

• ಸೀತೆ ಸಂಪ್ರದಾಯಿಕ ನೆಲೆಯಲ್ಲಿ ಮುಂದುವರಿದಂತೆ ಕಂಡರೂ ಅದನ್ನು ದಾಟಿ ಸ್ತ್ರೀ ಸಹಜವಾದ ಭಾವನೆಗಳು ಆಕೆಯಲ್ಲಿ ಎದ್ದು ಕಾಣುತ್ತದೆ. ರಾಮನು ಸಾಮಾನ್ಯತೆಯಲ್ಲಿ ಸೀತೆಯನ್ನು ಕಂಡರೂ ತನ್ನ ವಂಶದ ಮುಂದುವರಿಕೆಗಾಗಿ ಪತಿತಾ ಭಾವನೆಯಿಂದ ಕೊನೆಗೆ ಆತನೊಡನೆ ನಡೆದಳು. ಪವಿತ್ರತೆ, ಕಾಯಾ–ವಾಚ–ಮನಸಾ ಪತಿಯಲ್ಲಿರುವ ನಿಷ್ಠೆಯ

ಕಾರಣದಿಂದ ಮಾನುಷ ವ್ಯಕ್ತಿತ್ವದಿಂದ ದೇವೀತ್ವದೆಡೆಗೆ ಕೊಂಡೊಯ್ದು ಜಗತ್ತಿಗೆ ಮಾತೆಯಾಗಿದ್ದಾಳೆ.

- ಕನ್ನಡದಲ್ಲಿ ರಚನೆಯಾದ ಉತ್ತರ ರಾಮಾಯಣದ 5 ಕೃತಿಗಳಲ್ಲಿ ನಾರಾಯಣನ ಉತ್ತರ ರಾಮ ಕಥೆ, ಸೋಸಲೆ ಅಯ್ಯಶಾಸ್ತ್ರಿ ಅವರ ಶೇಷ ರಾಮಾಯಣ ಕಾವ್ಯಗಳಲ್ಲಿ ಸೀತೆಯು ರಾಮನ ಆಸ್ಥಾನದಲ್ಲಿ ಪ್ರತಿಜ್ಞಾ ಬದ್ಧಳಾದಾಗ ಭೂದೇವಿ ಪ್ರತ್ಯಕ್ಷಳಾಗಿ, ಸೀತೆಯನ್ನು ಪರಿಗಣಿಸುವಂತೆ ರಾಮನಿಗೆ ಒಪ್ಪಿಸಿದುದು, ಮುಂದೆ ಶ್ರೀರಾಮ ಸೀತೆಯರು ಜೊತೆಯಾಗಿ ರಾಜ್ಯಭಾರ ಮಾಡುತ್ತಾ, ಮುಂದೆ ಮಕ್ಕಳಿಗೆ ರಾಜ್ಯವನ್ನು ವಹಿಸುತ್ತಾ ಸುಖ ಜೀವನವನ್ನು ಕಂಡುಕೊಳ್ಳುವಂತೆ ರಚಿಸಿದ ಈ ಎರಡು ಕಾವ್ಯಗಳು ನವ್ಯ ಕೃತಿಯೆನ್ನಬಹುದು. ಯೋಗೀಂದ್ರ ಕವಿಯ ಕೃತಿಯಲ್ಲಿ ಅಂತಿಮ ಪಯಣದಲ್ಲಿ ಭೂಮಾತೆಯೊಡನೆ ಸೀತೆಯೂ ಆಗಮಿಸಿ, ರಾಮನು ಪಶ್ಚಾತ್ತಾಪ ಪಟ್ಟು, ಕೊನೆಗೆ ಸೀತೆಯೊಡನೆ ಜೊತೆಗೂಡುವಂತೆ ರಚಿಸಿದ್ದಾರೆ. ನರಸ, ತಿರುಮಲೆ ವೈದ್ಯರ ಕೃತಿಗಳಲ್ಲಿ ಸೀತೆ ಶಪಥಗೈದು ಭೂದೇವಿಯನ್ನು ಆಹ್ವಾನಿಸಿ, ತಾಯಿಯೊಡನೆ ಐಕ್ಯಳಾಗುವ ಪರಿ, ದುಃಖ ತಪ್ತನಾದ ರಾಮನನ್ನು ಬ್ರಹ್ಮದೇವನು ಸಂತೈಸುವ ರೀತಿ ಮೂಲ ಕೃತಿಯ ಅನುಕರಣೆ ಎನ್ನಬಹುದು.

ಅಧ್ಯಯನದ ಸಾಧ್ಯತೆಗಳು

'ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯಗಳಲ್ಲಿ ಸೀತೆ' ಎಂಬುದು ಪ್ರಸ್ತುತ ಸಂಶೋಧನಾ ಅಧ್ಯಯನದ ವಿಷಯವಾಗಿದೆ. ಈ ಶೀರ್ಷಿಕೆಯಲ್ಲಿರುವ ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯ ಎಂಬುದು ಅಧ್ಯಯನದ ಆಕರ ಪಠ್ಯಗಳನ್ನು ಸೂಚಿಸುತ್ತದೆ. ಹಾಗೆಯೇ ರಾಮಾಯಣದ ಪೂರ್ವಾರ್ಧ ಭಾಗವನ್ನು ಹೊರತು ಪಡಿಸಿದ ವಸ್ತುವನ್ನು ವ್ಯಕ್ತಪಡಿಸುತ್ತದೆ. ಉತ್ತರ ಭಾಗದ ಕಥಾವಸ್ತುವನ್ನಾಶ್ರಯಿಸಿ ಕಾವ್ಯ ಕಟ್ಟಿದ ಕನ್ನಡದ ಕವಿಗಳನ್ನೂ ಹೇಳುತ್ತದೆ. ಉಳಿದಂತೆ 'ಸೀತೆ' ಎಂಬುದು ಸಂಶೋಧನೆಯ ಕೇಂದ್ರವಾಗಿದೆ. ಅಂದರೆ ಒಂದು ಸ್ತ್ರೀ ಪಾತ್ರವಾಗಿಯೂ, ಪ್ರಧಾನ ಪಾತ್ರವಾಗಿಯೂ ಮತ್ತು ಧ್ಯೇಯವಾಗಿಯೂ ಬಳಸಲಾಗಿದೆ. ಇದಕ್ಕೆ ಪೂರಕವಾಗಿಯೇ ಅಧ್ಯಯನದ ವಿಧಾನಗಳನ್ನು, ಉದ್ದೇಶಗಳನ್ನು ರೂಪಿಸಿಕೊಳ್ಳಲಾಗಿದೆ. ಹೀಗೆ ಪ್ರಸ್ತುತ ಮಹಾ ಪ್ರಬಂಧದ ಒಟ್ಟು ಹತ್ತು ಅಧ್ಯಾಯಗಳನ್ನು ಸಿದ್ಧಪಡಿಸಲಾಗಿದೆ. ಸದ್ಯ ಸೀತೆಯ ಪಾತ್ರವನ್ನು ಹಲವು ನೆಲೆಗಳ ಮೂಲಕ ವಿಶ್ಲೇಷಿಸಲು ಯತ್ನಿಸಲಾಗಿದೆ. ಉತ್ತರ ರಾಮಾಯಣ

ಆಧಾರಿತ ಕಾವ್ಯಗಳು ಹೇಗೆ ಸೀತಾ ದೇವಿಯ ಪಾತ್ರವನ್ನು ನಿರ್ವಹಿಸಿವೆ ಎಂಬುದನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ.

ಕಾಲದಿಂದ ಕಾಲಕ್ಕೆ ಮನುಷ್ಯನ ಜೀವನ ತನ್ನ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳುವುದರಿಂದ ರಾಮಾಯಣ ಕಾವ್ಯವೂ ತನ್ನ ವಿಭಿನ್ನವಾದ ವಿಸ್ತಾರತೆಯನ್ನು ಪಡೆಯುತ್ತದೆ. ಇದು ಬಹು ದೊಡ್ಡ ಜೀವನದ ಸೃಜನ ಶೀಲ ಗುಣವೂ ಹೌದು. ಪ್ರತಿಯೊಂದು ಅಧ್ಯಯನದಂತೆ ಈ ಸಂಶೋಧನಾ ಮಹಾಪ್ರಬಂಧವು ಆರಂಭವಷ್ಟೇ. ಯಾವುದೂ ಇದಮಿತ್ಥಂ ಅಲ್ಲ. ಈ ಹಾದಿಯಲ್ಲಿ ಪ್ರಸ್ತುತ ಅಧ್ಯಯನದ ಮುಂದುವರಿಕೆಗಾಗಿ ಕೆಲವು ಪೂರಕ ಸಲಹೆಗಳನ್ನು ಸೂಚಿಸಲಾಗಿದೆ.

- ಕನ್ನಡದಲ್ಲಿ ಉತ್ತರರಾಮಾಯಣದ ಒಂದೇ ವಸ್ತುವನ್ನು ಈ ಐದು ಕವಿಗಳು ತಮ್ಮ ದೃಷ್ಟಿಕೋನದಲ್ಲಿ ವಿಭಿನ್ನವಾಗಿಯೇ ರಚಿಸಿದ್ದಾರೆ. ಈ ರೀತಿಯ ಕಾವ್ಯಗಳನ್ನು ನಿಗದಿತ ಸಮಯದಲ್ಲಿ ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸುವುದು ಕಷ್ಟ ಸಾಧ್ಯವಾದುದು. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ಸೀತೆ ಪಾತ್ರಕ್ಕೆ ಚೌಕಟ್ಟನ್ನು ನಿರ್ಮಿಸಿಕೊಳ್ಳಲಾಗಿದೆ. ಇದನ್ನು ಅಧ್ಯಯನದ ಮಿತಿ ಎನ್ನುವುದಕ್ಕಿಂತ ವ್ಯಾಪ್ತಿ ಎಂದು ಭಾವಿಸಿಕೊಳ್ಳಲಾಗಿದೆ. ಆದ್ದರಿಂದ ಉತ್ತರರಾಮಾಯಣದ ಕಥಾ ವಸ್ತು ಉಳ್ಳ ಕಾವ್ಯಗಳ ಪ್ರತಿ ಪ್ರಸಂಗವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಬಹುದಾಗಿದೆ.
- ಕನ್ನಡದಲ್ಲಿರುವ ಉತ್ತರ ರಾಮಾಯಣದ ಕಥಾವಸ್ತುವನ್ನು ಹೊಂದಿರುವ ಪ್ರಾಚೀನ, ಮಧ್ಯಕಾಲೀನ ಸಾಹಿತ್ಯವನ್ನು ಹಾಗೂ ಹೊಸಗನ್ನಡದ ಗದ್ಯ, ಅನುವಾದ, ನಾಟಕ ಹೀಗೆ ಹಲವು ಪ್ರಕಾರಗಳ ಹಿನ್ನೆಲೆಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಕೈಗೊಳ್ಳುವ ಸಾಧ್ಯತೆ ಇದೆ.
- ಕನ್ನಡದಲ್ಲಿ ಉತ್ತರ ರಾಮಾಯಣದ ಪೂರ್ಣ ಪ್ರಮಾಣ ಕೃತಿಗಳೊಂದಿಗೆ ಭಾಗಶಃ ಉತ್ತರ ರಾಮಾಯಣದ ಕೃತಿಗಳನ್ನು ಕಾಲಘಟ್ಟ, ಪಾತ್ರ ಚಿತ್ರಣ, ಸನ್ನಿವೇಶ, ಮೂಲ ಸ್ವರೂಪ, ಭಿನ್ನತೆಗಳೊಂದಿಗೆ ಹಾಗೂ ತೌಲನಿಕವಾಗಿಯೂ ಅಧ್ಯಯನ ಕೈಗೊಳ್ಳಲು ಅವಕಾಶ ಇದೆ.
- ಶಿಷ್ಟ ರಾಮಾಯಣ, ಉತ್ತರ ರಾಮಾಯಣ, ಜನಪದ ರಾಮಾಯಣಗಳಲ್ಲಿನ ಸನ್ನಿವೇಶ, ಪಾತ್ರಗಳನ್ನು ಕುರಿತು ತುಲನಾತ್ಮಕವಾಗಿ ಅಧ್ಯಯನ ಮಾಡಬಹುದಾಗಿದೆ.
- ಕನ್ನಡ ಸಾಹಿತ್ಯದ ಉತ್ತರ ರಾಮಾಯಣದ ಪರಂಪರೆಯಲ್ಲಿ ಮೂಡಿಬಂದಿರುವ ಸೀತೆಯ ಪಾತ್ರವನ್ನು ಇತರೆ ಸ್ತ್ರೀ ಪಾತ್ರಗಳೊಂದಿಗೆ ತೌಲನಿಕವಾಗಿಯೂ, ಬಹುಶಿಸ್ತೀಯ ಅಧ್ಯಯನಗಳ ಹಿನ್ನೆಲೆಗಳಿಂದಲೂ ವಿವಿಧ ಪಾತ್ರಗಳನ್ನಿಟ್ಟು ಅಧ್ಯಯನ ನಡೆಸಬಹುದಾಗಿದೆ.

- ವಿಶೇಷವಾಗಿ ಸೀತೆಯನ್ನು ರಾಮನೆಂಬ ಪುರುಷ ಪಾತ್ರದೊಂದಿಗಿಟ್ಟು ವಿಶ್ಲೇಷಿಸದೆ, ಲಕ್ಷ್ಮಣನ ಕಣ್ಣಲ್ಲಿ ಸೀತೆ; ಸೀತೆಯ ಕಣ್ಣಲ್ಲಿ ಲಕ್ಷ್ಮಣನ ಚಿತ್ರಣವು ಹೇಗಿದೆ ಎಂಬುದನ್ನು ಶೋಧಿಸಬಹುದಾಗಿದೆ. ಸ್ತ್ರೀವಾದಿ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಉತ್ತರ ರಾಮಾಯಣಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು.

- ಉತ್ತರ ರಾಮಾಯಣ ಕಾವ್ಯಗಳಲ್ಲಿ ವರ್ಣನಾತ್ಮಕ ನೆಲೆಯಲ್ಲಿ ಬೇರೆ ಬೇರೆ ಕವಿಗಳು ಗ್ರಹಿಸಿದ ಚಿಂತನೆ ಹಾಗೂ ಮಾರ್ಪಾಡುಗಳಲ್ಲಿ ಅಧ್ಯಯನ ಕೈಗೊಳ್ಳಬಹುದು.

- ಕನ್ನಡ ಉತ್ತರ ರಾಮಾಯಣ ಕಾವ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಸಾಂಸ್ಕೃತಿಕ ಮಾದರಿಯ ಅಧ್ಯಯನಗಳು ಆಗಬೇಕಿದೆ. ಆ ಮೂಲಕ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಆಯಾಮಗಳಲ್ಲಿ ಚರ್ಚಿಸಬಹುದಾಗಿದೆ.

- ಉತ್ತರ ರಾಮಾಯಣದ ಕೃತಿಗಳಲ್ಲಿ ಸ್ತ್ರೀ–ಪುರುಷ ಪಾತ್ರಗಳನ್ನು ಕೇಂದ್ರವಾಗಿಟ್ಟುಕೊಂಡು ಸಂಶೋಧನೆ ಒಳಪಡಿಸಿ ಆ ಮುಖೇನ ಪಾತ್ರಗಳ ವ್ಯಕ್ತಿತ್ವ, ಮನೋಧರ್ಮ, ಉತ್ತರ ಕಥಾ ವಸ್ತುವಿನಲ್ಲಿ ಅವುಗಳ ಸ್ಥಾನಮಾನ, ನಿಲುವುಗಳನ್ನು ಚರ್ಚೆಗೆ ಒಳಪಡಿಸಬಹುದಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಪ್ರಸ್ತುತ ಅಧ್ಯಯನವು ಕನ್ನಡ ಉತ್ತರ ರಾಮಾಯಣ ಪಾತ್ರಗಳ ಅಧ್ಯಯನದ ಪಾರಂಭದ ಸೆಲೆ ಅಷ್ಟೇ. ಸಾಹಿತ್ಯದ ಪರಿಕಲ್ಪನೆಗಳು ನವೀನಗೊಳ್ಳುತ್ತಿದ್ದಂತೆ ರಾಮಾಯಣದ ಪಾತ್ರಗಳನ್ನು ಗ್ರಹಿಸುವ ಪರಿಕ್ರಮಗಳು ಬದಲಾಗಿದೆ. ಕೆಲವು ಸಂದರ್ಭಗಳಲ್ಲಿ ರಾಮಾಯಣದ ಮರು ನಿರ್ವಚನವೇ ಭಿನ್ನ ಶೈಲಿಯಲ್ಲಿ ರಚನೆಯಾಗಿದೆ. ಅಧ್ಯಯನದ ಹೊಸ ಹೊಸ ಸಾಧ್ಯತೆಗಳಿಂದಾಗಿ ಪರಂಪರೆಗೆ ಮತ್ತಷ್ಟು ಸೋಪಜ್ಞತೆ ದೊರಕಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಒಂದು ಹೊಸ ಅಲೋಚನೆಯ ಮುಂದುವರಿಕೆಗೆ ಸಹಾಯವಾದೀತು.

ಅನುಬಂಧ

1. ಆಕರ ಗ್ರಂಥಗಳು

1. ತಿರುಮಲೆ ವೈದ್ಯ, 1910, ಉತ್ತರ ರಾಮಾಯಣಂ, ಮಂ.ಅ.ರಾಮಾನುಜಯ್ಯಂಗಾರ್ಯ(ಸಂ.), ಕರ್ನಾಟಕ ಕಾವ್ಯಕಲಾ ನಿಧಿ ಸಂಖ್ಯೆ 32.ಜಿ.ಟಿ.ಎ. ಮುದ್ರಣ ಶಾಲೆ, ಮೈಸೂರು
2. ನರಸಕವಿ, ಉತ್ತರ ರಾಮಕಥಾ, ಕೆ.604 ತಾಳೆಪ್ರತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.
3. ನಾರಾಯಣ ಕವಿ, ಪೂರ್ವ ಭಾಗ– 1962, ಉತ್ತರ ಭಾಗ– 1963, ಉತ್ತರರಾಮಕಥೆ, ವೆಂಕಟರಾಯಾಚಾರ್ಯ (ಸಂ.), ವಿಜಯ ಸಾಹಿತ್ಯ ಮಾಲೆ, ಸುರತ್ಕಲ್.
4. ಯೋಗೀಂದ್ರ ಕವಿ, 2011, ಉತ್ತರ ರಾಮಾಯಣಂ, ನೇತ್ರಾವತಿ (ಸಂ.), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.
5. ಸೋಸಲೆ ಅಯ್ಯಶಾಸ್ತ್ರಿ, 1927, ಶೇಷರಾಮಾಯಣಂ, ಬೆಂಗಳೂರು ಪ್ರೆಸ್ ಬೆಂಗಳೂರು.

2. ಪರಾಮರ್ಶನ ಗ್ರಂಥಗಳು

1. ಅಂಬಳಿಕೆ ಹಿರಿಯಣ್ಣ (ಸಂ), 1980, ತಂಬೂರಿ ಸಂಪ್ರದಾಯದ ಕಾವ್ಯಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.
2. ಅನುಸೂಯಾ ಕದಂ, 2011, ಮಹಿಳಾ ಶೋಷಣೆಯ ನೆಲೆಗಳು, ಸಖಿ ಪ್ರಕಾಶನ, ಹೊಸಪೇಟೆ.
3. ಆರುದ್ರ, 1994, ರಾಮನಿಗೆ ಸೀತೆ ಏನಾಗಬೇಕು, ನವಕರ್ನಾಟಕ ಬೆಂಗಳೂರು.
4. ಆಶಾಕುಮಾರಿ, 1998, ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ, ಮೈಸೂರು ವಿಶ್ವವಿದ್ಯಾಲಯ.
5. ಇರಾವತಿ ಕರ್ವೆ, 2016, ರಾಮಾಯಣ–ಮಹಾಭಾರತ ಮತ್ತು ಧರ್ಮ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

6. ಕಾಣೆ ಪಿ.ವಿ., 2013, ಎರಡು ಮಹಾಕಾವ್ಯಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
7. ಕುವೆಂಪು, 2000, ಶ್ರೀರಾಮಾಯಣದರ್ಶನಂ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
8. ಕೃಷ್ಣಕುಮಾರ್ ಸಿ.ಪಿ., 1974, ಕುವೆಂಪು ಸಾಹಿತ್ಯದ ಕೆಲವು ಮುಖಗಳು, ಪ್ರಬುದ್ಧ ಪ್ರಕಾಶನ, ಮೈಸೂರು.
9. ಕೃಷ್ಣಕುಮಾರ್ ಸಿ.ಪಿ., 2012, ಶ್ರೀರಾಮಾಯಣದರ್ಶನಂ ವಿವೇಚನೆ, ಪೊಡವಿ ಪ್ರಕಾಶನ, ಮೈಸೂರು.
10. ಕೃಷ್ಣಮೂರ್ತಿ ಕೆ., 1994, ಕನ್ನಡ ಉತ್ತರರಾಮ ಚರಿತೆ, ಕಾವ್ಯಾಲಯ, ಮೈಸೂರು.
11. ಗುಂಡಪ್ಪ ಡಿ.ವಿ., 1945, ಶ್ರೀರಾಮಪರೀಕ್ಷಣಂ, ಕರ್ನಾಟಕ ಪ್ರಕಟಣಾಲಯ, ಬೆಂಗಳೂರು.
12. ಗೋಪಾಲಕೃಷ್ಣಯ್ಯ ಕೆ.ಎಲ್., 1987, ಕನ್ನಡ ಸಾಹಿತ್ಯದಲ್ಲಿ ಪೂರ್ಣಪ್ರಜ್ಞೆ, ಕ.ಸಾ.ಪ. ಬೆಂಗಳೂರು.
13. ಗೌರೀಶ್ ಕಾಯ್ಕಿಣಿ, 1986, ವಾಲ್ಮೀಕಿ ತೂಕಡಿಸಿದಾಗ, ಐ.ಬಿ.ಎಚ್. ಪ್ರಕಾಶನ ಬೆಂಗಳೂರು.
14. ಛಾಯಾಪತಿ ಟಿ.ಎಸ್., 1994, ಪುಟ್ಟನ ಸಚಿತ್ರ ರಾಮಾಯಣ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು.
15. ತಲ್ವಾಡಿ ಬಿ.ಎಸ್., 2013, ತಂಬೂರಿ ಸಂಪ್ರದಾಯದ ಜನಪದ ಸಂಪೂರ್ಣ ರಾಮಾಯಣ, ಅನ್ನಪೂರ್ಣ ಪಬ್ಲಿಷರ್ಸ್ ಬೆಂಗಳೂರು.
16. ತಿಪ್ಪೇರುದ್ರಸ್ವಾಮಿ ಎಚ್., 2015, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
17. ತೇಜಸ್ವಿನಿ ನಿರಂಜನ, 1994, ಸ್ತ್ರೀ ವಾದಿ ಸಾಹಿತ್ಯ ವಿಮರ್ಶೆ, ಅಭಿನವ ಪ್ರಕಾಶನ ಬೆಂಗಳೂರು.
18. ದೇ.ಜ.ಗೌ., 1954, ಶ್ರೀರಾಮಾಯಣ ದರ್ಶನಂ ವಚನ ಚಂದ್ರಿಕೆ, ಸಾಹಿತ್ಯ ದರ್ಶನ ಮಾಲೆ ಮೈಸೂರು.
19. ದೇರಾಜೆ ಸೀತಾರಾಮಯ್ಯ, 1986, ರಾಮ ರಾಜ್ಯದ ರುವಾರಿ, ಲಲಿತ ಪ್ರಕಾಶನ ಪುತ್ತೂರು.

20. ದೇರಾಜೆ ಸೀತಾರಾಮಯ್ಯ, 2015, ಶ್ರೀರಾಮ ಚರಿತಾಮೃತಂ, ಜ್ಞಾನಗಂಗಾ ಪುಸ್ತಕ ಮಳಿಗೆ ಪುತ್ತೂರು.

21. ದೇವುಡು-ಶಿವಮೂರ್ತಿ ಶಾಸ್ತ್ರಿ, 1985, ಜೈಮಿನಿ ಭಾರತ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.

22. ನಂಜುಂಡ ಶಾಸ್ತ್ರಿ ಎಂ., 2006, ರಾಮಾಯಯದಲ್ಲಿ ಬೆಳಕು ಚೆಲ್ಲಿದವರು, ಮಂಗಳ ಪ್ರಕಾಶನ ಬೆಂಗಳೂರು.

23. ನಾಗಪ್ಪ ಗೌಡ ಆರ್, 2018, ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಕೊಣಾಜೆ.

24. ನಾಗಭೂಷಣ ಓ.ಎಲ್., 1998, ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ ಬೆಂಗಳೂರು.

25. ನಾಯಕ ಜಿ.ಎಚ್., 2006, ಕೃತಿಸಾಕ್ಷಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

26. ಎನ್.ಆರ್.ನಾಯಕ, 1982, ಕಾರವಾರ ಜಿಲ್ಲೆಯ ಜಾನಪದ ಗೀತೆಗಳು. ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

27. ನಾರಾಯಣ ಕೆ.ವಿ., 2010, ಸಾಮಾಜಿಕ ಚಹರೆಯಾಗಿ ದಲಿತಭಾಷೆ, ತೊಂಡುಮೇವು, ಕಂತೆ-6, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.

28. ನಾರಾಯಣಾಚಾರ್ಯ ಕೆ.ಎಸ್., 2013, ಶ್ರೀ ರಾಮಾಯಣ ಪಾತ್ರ ಪ್ರಪಂಚ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

29. ನಾರಾಯಣಾಚಾರ್ಯ ಕೆ.ಎಸ್., 1999, ಶ್ರೀರಾಮಾಯಣ ಪಾತ್ರ ಪ್ರಪಂಚ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ.

30. ಪರಮಶಿವಯ್ಯ ಜಿ.ಶಂ, 1979, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು ಮೈಸೂರು ವಿಶ್ವ ವಿದ್ಯಾನಿಲಯ ಪ್ರಸಾರಾಂಗ ಮೈಸೂರು.

31. ಪರಿಮಳ ಬಾಯಿ ಎನ್.ಬಿ., 2011, ಕನ್ನಡ ಭಾಗವತ ಕಾವ್ಯಗಳ ಸಮೀಕ್ಷೆ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

32. ಪುಟ್ಟಸ್ವಾಮಿ ಬಿ., 2015, ಜನಪದ ಕಾವ್ಯದಲ್ಲಿ ರಾಮಾಯಣ ಮಹಾಭಾರತ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು.

33. ಪೆರ್ಲ ಕೃಷ್ಣ ಭಟ್ಟ, 1996, ರಾಮಾಯಣ ಉಪನ್ಯಾಸಗಳು, ಕರ್ನಾಟಕ ಸಂಘ ಪುತ್ತೂರು.
34. ಪೋಲಂಕಿ ರಾಮಮೂರ್ತಿ, 2017, ಸೀತಾಯಣ. ಸಮ್ಯೈಕ್ಯ ಪಬ್ಲಿಕೇಷನ್ ಮೈಸೂರು.
35. ಪ್ರಭಾವತಿ ಎಸ್.ವಿ., 2005, ಕನ್ನಡ ರಾಮಾಯಣಗಳು, ಸುಮುಖ ಪ್ರಕಾಶನ ಬೆಂಗಳೂರು.
36. ಪ್ರಭಾವತಿ ಎಸ್.ವಿ., 2012, ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು ಒಂದು ತೌಲನಿಕ ಅಧ್ಯಯನ, ಶ್ರೀ ಅನ್ನಪೂರ್ಣ ಪ್ರಕಾಶನ ಬೆಂಗಳೂರು.
37. ಪ್ರಭಾವತಿ ಎಸ್.ವಿ., 2001, ಸೀತಾ, ವಸಂತ ಪ್ರಕಾಶನ ಬೆಂಗಳೂರು.
38. ಪ್ರಶಾಂತ ನಾಯಕ ಜಿ., 2013, ನಾನಕ್ಕನ್ ನಿನಗೆ, ತಂಗೆ!, ಗೀತಾಂಜಲಿ ಪ್ರಕಾಶನ, ಶಿವಮೊಗ್ಗ.
39. ಪ್ರಶಾಂತ ನಾಯಕ ಜಿ., 2009, ನೀಂ ಮಹಚ್ಛಿಲ್ಪಿ ದಿಟಂ, ಗೀತಾಂಜಲಿ ಪ್ರಕಾಶನ, ಶಿವಮೊಗ್ಗ.
40. ಬಂಜಗೆರೆ ಜಯಪ್ರಕಾಶ, ಇದೇ ರಾಮಾಯಣ, ಮೈಸೂರು ಪ್ರಕಾಶನ, 1994.
41. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
42. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
43. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಸಾಮಾಜಿಕ ಸ್ಥಿತ್ಯಂತರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
44. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
45. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
46. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
47. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 2006, ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

48. ಬರಗೂರು ರಾಮಚಂದ್ರಪ್ಪ (ಪ್ರ.ಸಂ), 1993, ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
49. ಬರಗೂರು ರಾಮಚಂದ್ರಪ್ಪ (ಸಂ.), 1993, ಕನ್ನಡ ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು.
50. ಬರಗೂರು ರಾಮಚಂದ್ರಪ್ಪ, 2005, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಬೆಂಗಳೂರು.
51. ಬಸವರಾಜ ಸಬರದ (ಸಂ.), 1922, ಆಧುನಿಕ ಕನ್ನಡ ಮಹಾಕಾವ್ಯಗಳು. ಕನ್ನಡ ಸಂಘ ಕ್ರೈಸ್ಟ್ ಕಾಲೇಜು ಬೆಂಗಳೂರು.
52. ಬಸವರಾಜು ಎಲ್., 1958, ರಾಮಾಯಣ ನಾಟಕ ತ್ರಿವೇಣಿ, ಡಿ.ವಿ.ಕೆ. ಮೂರ್ತಿ ಮೈಸೂರು.
53. ಬಸವಾರಾಧ್ಯ ಎನ್., 2007, ತೊರವೆರಾಮಾಯಣ, ಕುಮಾರ ವಾಲ್ಮೀಕಿ ಪ್ರಶಸ್ತಿ, ಭಾರತ ಸಂಸ್ಕೃತಿ ಪ್ರತಿಷ್ಠಾನ. ಬೆಂಗಳೂರು.
54. ಬ್ಯಾತನಾಳ ಎಸ್.ಎಸ್, 1956, ಕುಮಾರ ವಾಲ್ಮೀಕಿ; ತೊರವೆ ರಾಮಾಯಣ, ಸಂ 1.
55. ಬ್ಯಾತನಾಳ ಎಸ್.ಎಸ್., 1981, ತೊರವೆ ರಾಮಾಯಣದ ಕಥಾ ವಸ್ತು ವಿವೇಚನೆ, ಕನ್ನಡ ಸಾಹಿತ್ಯ ಪರಿಷತ್ ಮೈಸೂರು.
56. ಭಟ್ಟ ಜಿ.ಎನ್., 1966, ವಾಲ್ಮೀಕಿ ರಾಮಾಯಣ ಮತ್ತು ಪರಂಪರೆ, ಕೆನರಾ ಅಸೋಸಿಯೇಶನ್ಸ್ ಮಂಗಳೂರು.
57. ಭಟ್ಟ ಜಿ.ಕೆ., 1984, ಭವಭೂತಿ, ಸಾಹಿತ್ಯ ಅಕಾಡೆಮಿ ದೆಹಲಿ.
58. ಭಟ್ಟ.ಜಿ.ಎಸ್(ಸಂ), 1992, ನಾಗಚಂದ್ರ ಒಂದುಅವಲೋಕನ, ಚೇತನಬುಕ್ ಹೌಸ್, ಮೈಸೂರು.
59. ಮಂಜುನಾಥ ಬೇವಿನಕಟ್ಟಿ, 2008, ರಾಮಾಯಣ ಮರುದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
60. ಮಂದಾಕಿನಿ ತವಗ, 1976, ಸೀತಾರಾಮರ ಮೂರು ಚಿತ್ರಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
61. ಮಂದಾಕಿನಿ ಭೀಮಸೇನರಾವ್ ತವಗ, 1995, ಕನ್ನಡ ಮಹಾಕಾವ್ಯಗಳಲ್ಲಿ ಸೀತೆಯ ಪಾತ್ರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

62. ಮಂದಾರ ಕೇಶವಭಟ್ಟ, 2001, ಮಂದಾರ ರಾಮಾಯಣ, ಮೂಲ ತುಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು.

63. ಮಲ್ಯ ಸು.ನಾ., 1973, ಶ್ರೀರಾಮನ ಕಥೆಯಲ್ಲಿ ಆದರ್ಶಗಳು, ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು.

64. ಮಹರ್ಷಿ ವಾಲ್ಮೀಕಿ ವಿರಚಿತ ಶ್ರೀಮದ್ ವಾಲ್ಮೀಕಿ ರಾಮಾಯಣ 2013, ಗೀತಾ ಪ್ರೆಸ್, ಗೋರಖಪುರ, ಕನ್ನಡ ಅನುವಾದ.

65. ಮಾಸ್ತಿ ವೆಂಕಟೇಶ್ ಅಯ್ಯಾಂಗಾರ್, 1995, ಆದಿಕವಿ ವಾಲ್ಮೀಕಿ, ಜೀವನ ಕಾರ್ಯಾಲಯ ಬೆಂಗಳೂರು.

66. ಮಾಸ್ತಿ ವೆಂಕಟೇಶ ಅಯ್ಯಾಂಗಾರ್, 1981, ಉತ್ತರಕಾಂಡ ವಿಚಾರ, ಚೇತನ ಟ್ರಸ್ಟ್, ಬೆಂಗಳೂರು.

67. ಮಾಸ್ತಿ ವೆಂಕಟೇಶ ಅಯ್ಯಾಂಗಾರ್, 1978, ಆದಿಕವಿ ವಾಲ್ಮೀಕಿ, ಜೀವನ ಕಾರ್ಯಾಲಯ, ಬೆಂಗಳೂರು.

68. ಮುಗಳಿ ರಂ.ಶ್ರೀ., 2014, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.

69. ಮುಗಳಿ ರಂ.ಶ್ರೀ, 1986, ಮಹಾಕೃತಿ, ಸಹ್ಯಾದ್ರಿ ಪ್ರಕಾಶನ ಮೈಸೂರು.

70. ಮುಗಳಿ ರಂ.ಶ್ರೀ, 1963, ಕನ್ನಡ ಸಾಹಿತ್ಯದ ಇತಿಹಾಸ, ಸಾಹಿತ್ಯ ಅಕಾಡೆಮಿ ನವದೆಹಲಿ.

71. ರಂಗನಾಥ ಶರ್ಮ, 1996, ವಾಲ್ಮೀಕಿ ರಾಮಾಯಣದ ನಾಲ್ಕು ಪಾತ್ರಗಳು, ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.

72. ರಾಗೌ, ಪಿ.ಕೆ.ರಾಜಶೇಖರ, ಎನ್ ಬಸವಯ್ಯ (ಸಂ.), 1973, ಜನಪದ ರಾಮಾಯಣ, ಶ್ವೇತಾದ್ರಿ ಪ್ರಕಾಶನ. ಮೈಸೂರು.

73. ರಾಜೇ ಗೌಡ, 2016, ಹ.ಕ. ಕುವೆಂಪು ಸಾಹಿತ್ಯ ಲೋಕ, ಸಿ.ವಿ.ಜಿ. ಪಬ್ಲಿಕೇಷನ್ ಬೆಂಗಳೂರು.

74. ರಾಜೇಂದ್ರ ಬುರಡಿಕಟ್ಟಿ, 2019, ಯುಗಧರ್ಮ ಮತ್ತು ಆಧುನಿಕ ಕನ್ನಡ ಮಹಾಕಾವ್ಯಗಳು, ಪೂರ್ಣ ಪ್ರಕಾಶನ, ಶಿವಮೊಗ್ಗ.

75. ರಾಜೇಂದ್ರ ಬುರಡಿಕಟ್ಟಿ, 2013, ಯುಗಧರ್ಮ ಮತ್ತು ಆಧುನಿಕ ಕನ್ನಡ ಮಹಾಕಾವ್ಯಗಳು, ಪೂರ್ಣಪ್ರಕಾಶನ ಶಿವಮೊಗ್ಗ.

76. ರಾಜೇಂದ್ರ. ಡಿ.ಕೆ, 2003, ಜಾನಪದ–ಶಿಷ್ಟಪದ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
77. ರಾಮಚಂದ್ರನ್ ಸಿ.ಎನ್., 2011, ಆಖ್ಯಾನ–ವ್ಯಾಖ್ಯಾನ, ಸಪ್ನ ಬುಕ್‌ಹೌಸ್. ಬೆಂಗಳೂರು.
78. ರಾಮಚಂದ್ರನ್ ಸಿ.ಎನ್., 2007, ಹೊಸ ಮಡಿಯ ಮೇಲೆ ಚದುರಂಗ, ಸ್ವಪ್ನ ಬುಕ್‌ಹೌಸ್.
79. ರಾಮೇಗೌಡ (ರಾಗೌ), 2015, ಪ್ರಾಚೀನ ಕಾವ್ಯ ಚಿಂತನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
80. ಲಕ್ಕಪ್ಪಗೌಡ ಎಚ್.ಜೆ., 1992, ಶ್ರೀ ರಾಮಾಯಣ ದರ್ಶನಂ ವಿಮರ್ಶಾತ್ಮಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ ಮೈಸೂರು.
81. ಲಕ್ಷ್ಮಣ ವಿರುಪಾಕ್ಷ ಜೋಶಿ, 1989, ಉತ್ತರ ರಾಮಾಯಣ, ಪ್ರತಿಭಾ ಗ್ರಂಥಮಾಲೆ ಧಾರವಾಡ.
82. ಲೀಲಾವತಿ ಎಸ್.ಆರ್., 2000, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆ ಮೈಸೂರು.
83. ವತ್ಸಲಾ ಎ.ಎಸ್. 2011, ಕನ್ನಡದಲ್ಲಿ ರಾಮಾಯಣ ಮಹಾಕಾವ್ಯಗಳು, ಅನನ್ಯ ಪ್ರಕಾಶನ, ಮೈಸೂರು.
84. ವೀರಣ್ಣ ಸಿ., 1999, ಕನ್ನಡ ಕಾವ್ಯ ಕಂಡ ಹೆಣ್ಣು, ಶಕ್ತಿ ಪ್ರಕಾಶನ ಬೆಂಗಳೂರು.
85. ವೀರಣ್ಣ ಸಿ., 2012, ಕನ್ನಡ ಸಾಹಿತ್ಯ, ಚಾರಿತ್ರಿಕ ಬೆಳವಣಿಗೆ–1, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.
86. ವೀರಪ್ಪಮೊಯಿಲಿ ಎಂ., 2007, ಶ್ರೀರಾಮಾಯಣ ಮಹಾನ್ವೇಷಣಂ. ಮಹೇಶ್ವರಿ ಪ್ರಕಾಶನ, ಬೆಂಗಳೂರು.
87. ವೆಂಕಟಸುಬ್ಬಯ್ಯ ಜಿ., 2011, ಒಂದಿಷ್ಟು ರಾಮಾಯಣ, ಒಂದಿಷ್ಟು ಮಹಾಭಾರತ, ಸಪ್ನ ಬುಕ್‌ಹೌಸ್, ಬೆಂಗಳೂರು.
88. ವೆಂಕಟಾಚಲ ಶಾಸ್ತ್ರಿ ಟಿ.ವಿ., 1998, ಕನ್ನಡ ರಾಮಾಯಣ ಗ್ರಂಥ ಸೂಚಿ, ಶ್ರೀ ಪ್ರೇಮಸಾಯಿ ಪ್ರಕಾಶನ ಬೆಂಗಳೂರು.
89. ಶಂಕರನಾರಾಯಣ.ತೀ.ನಂ (ಸಂ), 1998, ಕರ್ನಾಟಕ ಜನಪದ ಮಹಾಕಾವ್ಯಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

90. ಶಾಂತಾರಾಮ ಪ್ರಭು ಪಿ., 2009, ವಿಶ್ವ ರಾಮಕಥಾ ವಾಹಿನಿ, ಪ್ರಸಕ್ತ ನಿಧಿ ಕುಂದಾಪುರ.
91. ಶಿವರುದ್ರಪ್ಪ ಜಿ.ಎಸ್., 1989, ಹೊಸಗನ್ನಡ ಸಾಹಿತ್ಯದಲ್ಲಿ ಮಹಾಕಾವ್ಯ ಪರಂಪರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
92. ಶಿವಲಿಂಗಯ್ಯ ಬಿ.ಎ. (ಸಂ.), 2007, ಶೇಷಗಿರಿ ವಿರಚಿತ ಶ್ರೀರಾಮಚರಿತೆ, ಶಿವಕವಿ ಪ್ರಕಾಶನ ಮೈಸೂರು.
93. ಶ್ರೀಧರ ಹೆಗಡೆ, 2002, ಆಧುನಿಕ ಕನ್ನಡ ಮಹಾಕಾವ್ಯಗಳು: ಒಂದು ಅಧ್ಯಯನ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
94. ಶ್ರೀಪಾದ ರಘುನಾಥ ಬಿಡೆ (ಮೂ), ಸರಸ್ವತಿ ಗಜಾನನ ರಿಸಬೂಡ (ಅನು), 2011, ವಾಲ್ಮೀಕಿ ರಾಮಾಯಣ, ಶಾಪ ಮತ್ತು ವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
95. ಸಂಕಾಲಿಯಾ ಎಚ್.ಡಿ., 2011, ಇತಿಹಾಸದ ಕಣ್ಣಲ್ಲಿ ರಾಮಾಯಣ, ನವಕರ್ನಾಟಕ ಪ್ರಕಾಶನ ಬೆಂಗಳೂರು.
96. ಸಂಧ್ಯಾ ರೆಡ್ಡಿ ಕೆ.ಆರ್., 1995, ಜನಪದ ಸಾಹಿತ್ಯದಲ್ಲಿ ಮಹಿಳೆ. ಕ.ಸಾ.ಪ ಬೆಂಗಳೂರು.
97. ಸರಸ್ವತಿ ಟಿ.ಎಂ., 2000, ಕನ್ನಡದಲ್ಲಿ ಉತ್ತರ ರಾಮ ಕಥಾ ಕಾವ್ಯಗಳು, ರೂಪ ಪ್ರಕಾಶನ ಮೈಸೂರು.
98. ಸರಸ್ವತಿ ರಾಜೆಂದ್ರ, 2004, ಸಂಚೇತನ, ರಾಜ್ ಪ್ರಕಾಶನ ಮೈಸೂರು.
99. ಸರ್ವಪಲ್ಲಿ ರಾಧಕೃಷ್ಣನ್, ಕೆ.ವಿ.ಪುಟ್ಟಪ್ಪ (ಪ್ರ.ಸಂ), 1971, ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ 2, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
100. ಸಾವಿತ್ರಮ್ಮ ಎಚ್.ವಿ., 1990, ವಿಮುಕ್ತಿ, ಕಾವ್ಯಾಲಯ ಮೈಸೂರು.
101. ಸಿಂಹ ಎಸ್.ಎಲ್.ಎನ್., 1968, ಆಧುನಿಕ ಯುಗಕ್ಕೆ ರಾಮಾಯಣ, ಗೀತಾಬುಕ್ ಹೌಸ್ ಮೈಸೂರು.
102. ಸೀತಾರಾಮಯ್ಯ ವಿ., 1998, ಇತಿಹಾಸ ಕಾವ್ಯಗಳು, ವಿ.ಸಿ.ಸಂಪದ ಬೆಂಗಳೂರು.
103. ಸೀತಾರಾಮಯ್ಯ ವಿ., 1975, ವಾಲ್ಮೀಕಿ ರಾಮಾಯಣ, ಕೇಂದ್ರ ಸಾಹಿತ್ಯ ಅಕಾಡೆಮಿ.
104. ಸೀತಾರಾಮಯ್ಯ ವಿ., 1976, ನಾಗಚಂದ್ರ, ಸಪ್ನ ಬುಕ್ ಹೌಸ್ ಬೆಂಗಳೂರು.

105. ಸೀತಾರಾಮಯ್ಯ ವಿ., ಲಕ್ಷ್ಮೀಶ, ಸಪ್ನ ಬಕ್ ಹೌಸ್ ಬೆಂಗಳೂರು.

106. ಸೀತಾರಾಮಯ್ಯ ವಿ., (ಸಂ), 2012, ಮುದ್ದಣ, ಸಪ್ನ ಬುಕ್ ಹೌಸ್ ಬೆಂಗಳೂರು.

107. ಸೀತಾಸುತ, 1973, ಸೀತಾದರ್ಶನ, ನಭಶ್ರೀ ಪ್ರಕಾಶನ ಮೈಸೂರು.

108. ಸ್ವಾಮಿ ಬಿ.ಎಸ್., 2009, ಶ್ರೀರಾಮಾಯಣ ಮಹಾನ್ವೇಷಣಂ ಒಂದು ಸಮೀಕ್ಷೆ, ದಿವ್ಯಚಂದ್ರ ಪ್ರಕಾಶನ ಬೆಂಗಳೂರು.

109. ಹಿರೇಮಠ್ ಆರ್.ಸಿ., 1975 ನಾಗಚಂದ್ರವಿರಚಿತ ರಾಮಚಂದ್ರ ಚರಿತ ಪುರಾಣ ಭಾರತೀಯ ಜ್ಞಾನಪೀಠ ಪ್ರಕಾಶನ.

3. ಲೇಖನಗಳು

1. ಅಂಬೇಡ್ಕರ್ ಬಿ.ಆರ್., 2008, ರಾಮ, ಕೃಷ್ಣ–ಹಿಂದೂಧರ್ಮದ ಒಗಟುಗಳು, ರಾಮಾಯಣ ಮರುದರ್ಶನ, ಮಂಜುನಾಥ ಬೇವಿನಕಟ್ಟಿ (ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

2. ಅಮೃತ ಸೋಮೇಶ್ವರ, 1978, ಅವಿಲು, ಕನ್ನಡ ಸಂಘ, ಪುತ್ತೂರು.

3. ಅರುದ್ರ, 2008, ರಾಮನಿಗೆ ಸೀತೆ ಏನಾಗಬೇಕು?, ರಾಮಾಯಣ ಮರುದರ್ಶನ, ಕನ್ನಡ ವಿಶ್ವವಿದ್ಯಾಲಯ ಹಂಪಿ.

4. ಅಶೋಕ್ ನರೊಡೆ, 2010, ಸಮಕಾಲಿನ, ಸಚಿನ್ ಪಬ್ಲಿಕೇಶನ್ಸ ಬೆಂಗಳೂರು.

5. ಆರ್ಕೆ, 1988, ಸಾಹಿತ್ಯ ಆಶಯ ಮತ್ತು ವಿನ್ಯಾಸ, ಸಂಕ್ರಮಣ ಪ್ರಕಾಶನ, ಧಾರವಾಡ.

6. ಉಷಾ ವಿಜಯ ಮೊಳೆಯೂರ, 2006, ಸ್ತ್ರೀವಾದಿ ಚಿಂತನೆ, ಸಿ.ವಿ.ಸಿ.ಪಬ್ಲೀಷರ್ಸ್, ಬೆಂಗಳೂರು.

7. ಉಷಾದೇವಿ ಜಿ.ಎನ್., 2006, ಕುವೆಂಪುರವರ ಸ್ತ್ರೀ ಪಾತ್ರ ಸೃಷ್ಟಿ, ಅಭಿರುಚಿ ಪ್ರಕಾಶನ, ಬೆಂಗಳೂರು.

8. ಕೀರ್ತಿನಾಥ ಕುರ್ತಕೊಟಿ, 1998, ಪ್ರತ್ಯಭಿಜ್ಞಾನ, ಮನೊಹರ ಗ್ರಂಥಮಾಲ, ಧಾರವಾಡ.

9. ಕುಮಾರಚಲ್ಯ, 2019, ಕನ್ನಡ ರಾಮಾಯಣ ಕಾವ್ಯಗಳಲ್ಲಿ ಸ್ಥಳೀಯ ಸಂಸ್ಕೃತಿಗಳ ಪ್ರತಿನಿಧೀಕರಣ,ಲೋಕಜ್ಞಾನ, ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

10. ಕುಮಾರಚಲ್ಯ, ಜೂನ್ 2020, ನಾಗಚಂದ್ರನ ರಾಮಚಂದ್ರಚರಿತ ಪುರಾಣ, ಮಯೂರ.

11. ಕುವೆಂಪು, 1946, ಲಕ್ಷ್ಮೀಶನ ಸೀತಾವನವಾಸ ಕಾವ್ಯವಿಹಾರ, ಉದಯರವಿ ಪ್ರಕಾಶನ, ಮೈಸೂರು.

12. ಕೇಶವ ಶರ್ಮ ಕೆ., 2005, ಪಂಪನ ಕೃತಿಗಳು: ಒಂದು ಸ್ತ್ರೀವಾದಿ ಅಧ್ಯಯನ, ಸ್ತ್ರೀವಾದಿ ಆಖ್ಯಾನ, ಸಾರಾ ಎಂಟರ್ ಪ್ರೈಸಸ್, ಮೈಸೂರು.

13. ಗೀತಾ ಶೆಟ್ಟಿ, 2010, ಅಂಬಿಕ, ಬೆಂಗಳೂರು.

14. ಜಯಶೀಲ ಬಿ.ಎಂ., 2004, ರಾವಣನ ಆತ್ಮೋದ್ಧಾರಕೆ ಪ್ರೇರಕ ಶಕ್ತಿಗಳು. ಕುವೆಂಪು: ಪುನರ್ಮನನ, ಮೈಸೂರು ವಿಶ್ವವಿದ್ಯಾಲಯ, ಪ್ರಸಾರಾಂಗ.

15. ಜಿ.ಎಸ್.ಎಸ್., 1967, ರಾಮಾಯಣದಲ್ಲಿ ರಾಮನ ಪಾತ್ರ–ಪರಿಶೀಲನಾ, ಶಾರದಾ ಪ್ರಕಾಶನ, ಬೆಂಗಳೂರು.

16. ಜಿ.ಎಸ್.ಎಸ್., 1960, ರಾಮಾಯಣ ಕಥೆಯಲ್ಲಿ ರಜಕನ ಪಾತ್ರ, ಪ್ರಬುದ್ಧ ಕರ್ನಾಟಕ ಸಂ 42 ಮೈಸೂರು ವಿ.ವಿ.

17. ದೇ.ಜ.ಗೌ., 2006, ಪೂರ್ವ ಕವಿಗಳಿಗೆ ನಮನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

18. ನಾಯಕ.ಹಾ.ಮಾ., 2014, ಜಾನಪದ ಸ್ವರೂಪ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.

19. ನಾಯಕ. ಹಾ.ಮಾ, 1989, ಸಪ್ತಕ, ಕಾವ್ಯಾಲಯ ಪ್ರಕಾಶಕರು, ಮೈಸೂರು.

20. ನಾಗಪುಷ್ಪಲತಾ ಕೆ., ಜೂನ್ 2007, ಜನಪದ ರಾಮಾಯಣಗಳು, ಕೆಲವು ವಿಲಕ್ಷಣ ಪ್ರಸಂಗಗಳು–ವಿವೇಚನೆ, ಜಾನಪದ ಕರ್ನಾಟಕ, ಕನ್ನಡ ವಿಶ್ವವಿದ್ಯಾಲಯ ಹಂಪಿ.

21. ಪಾದೆಕಲ್ಲು ವಿಷ್ಣುಭಟ್ಟ, 2003, ಸಾವಿರ ಗದ್ಯ, ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

22. ಪಾರ್ವತಿ ಹೆಚ್.ಎಸ್., 1999, ನೊವನುಂಗಿ ನಕ್ಕವರು, ಶ್ರೀಸಾಯಿ ಪ್ರಕಾಶನ.

23. ಪ್ರಭಾವತಿ ಎಸ್.ವಿ., 2004, ಹೊರಳು ನೋಟ, ವಸಂತ ಪ್ರಕಾಶನ, ಮೈಸೂರು.

24. ಬಂಜಗೆರೆ ಜಯಪ್ರಕಾಶ, 2008, ರಾಮಾಯಣ ನಮ್ಮ ನೆಲೆಗಟ್ಟೇನು?, ರಾಮಾಯಣ ಮರುದರ್ಶನ, ಕನ್ನಡ ವಿಶ್ವವಿದ್ಯಾಲಯ ಹಂಪಿ.

25. ಬಾಲಚಂದ್ರ ಜಯಶೆಟ್ಟಿ, 2003, ಚಿಂತನ –ಮಂಥನ, ಸಿದ್ದಲಿಂಗೇಶ್ವರ ಪ್ರಕಾಶನ ಗುಲ್ಬರ್ಗ.

26. ಬೇಂದ್ರೆ ದ.ರಾ., 1978, ಸಾಹಿತ್ಯ ವಿರಾಟ ಸ್ವರೂಪ, ಸಮಾಜ ಪುಸ್ತಕಾಲಯ ಧಾರವಾಡ.
27. ಬೇಂದ್ರೆ ದ.ರಾ., 1940, ಸಾಹಿತ್ಯ ಸಂಶೋಧನೆ ಮನೋಹರ ಗ್ರಂಥ ಮಾಲೆ.
28. ಮಧುಸೂಧನ ಕೆ.ಎಸ್., 15/11/2015, ಚಾಮರಾಜ ಒಡೆಯರ ಕನ್ನಡ ರಾಮಾಯಣ, ಹಳತು ಹೊನ್ನು, ಪ್ರಜಾವಾಣಿ.
29. ಮೂರ್ತಿರಾವ್ ಎ.ಎನ್., 1977, ಸೀತಾಪರಿತ್ಯಾಗ ಪ್ರಸಂಗ, ಬೆಂಗಳೂರು, ವಿಶ್ವವಿದ್ಯಾಲಯ.
30. ರತ್ನಮ್ಮ ಕೆ.ಎಸ್., 2011, ಕುವೆಂಪು ಸಾಹಿತ್ಯದಲ್ಲಿ ಸ್ತ್ರೀ, ಮೈಸೂರು.
31. ರಾ.ಗೌ., ಎಮ್.ಎಲ್. ಶ್ರೀಕಂಠೇಗೌಡ, 2007, ಪ್ರಾಚೀನ ಕಾವ್ಯ, ಚಿಂತನ ಸಂಶೋಧನಾ ಕೇಂದ್ರ, ಮಂಡ್ಯ.
32. ರಾಜೇಗೌಡ ಹ.ಕ., 2007, ಸೀತೆಯ ದಂಡು: ಒಂದು ಟಿಪ್ಪಣಿ, ಜನಪದ ಶೋಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.
33. ರಾಮಚಂದ್ರ ಸಿ.ಎನ್., 1995, ಆಶಯ ಆಕೃತಿ, ಅಭಿನವ ಬೆಂಗಳೂರು.
34. ರಾಮಚಂದ್ರರಾವ್ ಎಸ್.ಕೆ., 09/06/1963, ಸೀತಾ ವೃತ್ತಾಂತ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ.
35. ಲಕ್ಷ್ಮೀನಾರಾಣ ಆರೋರ, 1996, ಭಾರತೀಯ ಸಾಹಿತ್ಯ ಮಂದಾರ, ಸ್ವಾತಿ ಪ್ರಕಾಶನ, ಮೈಸೂರು.
36. ಲೀಲಾ ಭಟ್, (ಸಂ.), 1987, ಉಗ್ರಾಣ ಮಂಗೇಶರಾಯ, ನಾರಾಯಣ ಕವಿಯ ಉತ್ತರಕಾಂಡ ರಾಮಾಯಣ, ಉಗ್ರಾಣ–1, ಕರ್ನಾಟಕ ಸಂಘ, ಪುತ್ತೂರು.
37. ವರದರಾಜ ರಾವ್ ಜಿ., 1946, ಸೀತಾಪರಿತ್ಯಾಗದ ಸಮಸ್ಯೆಗಳು, ಸಾಹಿತ್ಯ ಮಂದಿರ, ಮೈಸೂರು.
38. ವೀರಭದ್ರಪ್ಪ ಬಿ.ವಿ., 2003, ಸೀತೆಯ ಕುಂಚದಿಂದ ಮೂಡಿಬಂದ ರಾವಣ, ಮಹಿಳಾ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
39. ವೆಂಕಟಸುಬ್ಬಯ್ಯ, 2007, ಗತಿಪ್ರಜ್ಞೆ, ಪ್ರಾಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
40. ವೆಂಕಟಾಚಾರ್ಯ ಕೆ., 1968, ಸಾಹಿತ್ಯ ಮತ್ತು ಸಂಶೊಧನೆ, ವಿಜಯ ಸಾಹಿತ್ಯ ಮಾಲೆ, ಸುರತ್ಕಲ್.

41. ವೆಂಕಟಾಚಾರ್ಯ ಕೆ., 1927, ಪ್ರದೀಪಿಕೆ, ಮೈಸೂರು 1927

42. ವೆಂಕಟಾಚಲ ಶಾಸ್ತ್ರೀ ಟಿ.ವಿ., 2018, 'ಸೋಸಲೆ ಅಯ್ಯಶಾಸ್ತ್ರಿಗಳು: ಜೀವನ, ಕೃತಿಗಳು' ಶಾಸ್ತ್ರೀಯ4, ಸಪ್ನ ಬುಕ್ ಹೌಸ್.

43. ಶಂಕರ ಗೌಡ ಕೆ.ವಿ., 1989, ಪಿ.ಎನ್. ಜವರಪ್ಪ ಗೌಡ (ಸಂ.), ಸಾಹಸ ಯಾತ್ರೆ, ಅಭಿನಂದನ ಸಮಿತಿ, ಮಂಡ್ಯ.

44. ಸರಸ್ವತಿ ರಾಜೇಂದ್ರ, 2001, ಕನ್ನಡದಲ್ಲಿ ಉತ್ತರರಾಮ ಕಥಾಸಾಹಿತ್ಯ, ಶ್ರೀಲಕ್ಷ್ಮೀ ನಾರಾಯಣ ಅರೋರಾ (ಪ್ರ.ಸಂ.), ಪ್ರಬುದ್ಧ ಕರ್ನಾಟಕ, ಸಂಪುಟ 82, ಸಂಚಿಕೆ 323–326, ಮೈಸೂರು ವಿಶ್ವವಿದ್ಯಾಲಯ.

45. ಸೂರ್ಯ ಪ್ರಕಾಶ್ ಪಂಡಿತ್ ಎಸ್., 15/10/2016, ರಾಮಾಯಣ ಅದು ಸೀತೆಯ ಚರಿತೆ, ಪ್ರಜಾವಾಣಿ.

46. ಸೀತಾರಾಮಯ್ಯ ವಿ., 1974, ಕನ್ನಡದ ರಾಮಾಯಣಗಳು–ಸಾಹಿತ್ಯಲೋಕನ, ಗೀತಾ ಬುಕ್ ಹೌಸ್, ಮೈಸೂರು.

47. ಹೆಗಡೆ ಜಿ.ಎಂ., 2006, ಪ್ರಸಕ್ತ ಪ್ರಪಂಚ, ಹೀನಾ ಪ್ರಕಾಶನ ಧಾರವಾಡ.

4. ಪಿಎಚ್.ಡಿ. ಮಹಾಪ್ರಬಂಧಗಳು

1. ನಿಕೇತನ., 2001, ತುಳು ಮಹಾಕಾವ್ಯ ಮಂದಾರ ರಾಮಾಯಣ: ಸ್ವರೂಪ ಮತ್ತು ಅನನ್ಯತೆ, ಮಂಗಳೂರು ವಿ.ವಿ.
2. ಶ್ರೀಧರ ವಿ. ಹೆಗಡೆ., 2002, ಅಧುನಿಕ ಕನ್ನಡ ಮಹಾಕಾವ್ಯಗಳು: ಒಂದು ಅಧ್ಯಯನ (ರಾಮಾಯಣ ವಸ್ತುವನ್ನು ಅನುಲಕ್ಷಿಸಿ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಹೆಗಡೆ ಎಸ್.ಎಸ್., 2002, ಯಕ್ಷಗಾನದಲ್ಲಿ ರಾಮಾಯಣ ಪ್ರಸಂಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

5. ಅಂತರ್ಜಾಲ ಲೇಖನಗಳು

1. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ, ಅಯ್ಯಶಾಸ್ತ್ರಿ, ಕವಿತಿಲಕ ಸೋಸಲೆ.
2. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ. ತಿರುಮಲೆ ವೈದ್ಯ.
3. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ, ನಾರಾಯಣ 2.

6. ಶಬ್ದಕೋಶಗಳು

1. ನಾರಾಯಣಪಿ.ವಿ., 2007, ಹಳಗನ್ನಡ ಪದ ಸಂಪದ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
2. ಬಸವಾರಾಧ್ಯ ಎನ್., 2011, ಹಳಗನ್ನಡ ಶಬ್ದಾರ್ಥಕೋಶ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.
3. ಬಸವಾರಾಧ್ಯ ಎನ್., 2013, ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. ಯಜ್ಞ ನಾರಾಯಣ ಉಡುಪ, 2003, ಪುರಾಣ–ಭಾರತ ಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

****

ಸಂಶೋಧಕರು ಮಾರ್ಗದರ್ಶಕರು